ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ ನಿಬಂಧ

"ಕುವೆಂಪು ಕಾದಂಬರಿಗಳಲ್ಲಿ ರೈತ ಚಿತ್ರಗಳು"

ಸಂಶೋಧನ ವಿದ್ಯಾರ್ಥಿ

ರಾಮಸ್ವಾಮಿ .ಹೆಚ್.ಡಿ

ಮಾರ್ಗದರ್ಶಕರು

ಪ್ರೊ॥ ಡಿ. ಲಿಂಗಯ್ಯ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು.

೨೦೦೯- ೨೦೧೦

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ ನಿಬಂಧ

"ಕುವೆಂಪು ಕಾದಂಬರಿಗಳಲ್ಲಿ ರೈತ ಚಿತ್ರಗಳು"

ಸಂಶೋಧನ ವಿದ್ಯಾರ್ಥಿ

ರಾಮಸ್ವಾಮಿ .ಹೆಚ್.ಡಿ

ಮಾರ್ಗದರ್ಶಕರು

ಪ್ರೊ॥ ಡಿ. ಲಿಂಗಯ್ಯ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು.

೨೦೦೯- ೨೦೧೦

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೯-೧೦ ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕುವೆಂಪು ಕಾದಂಬರಿಗಳಲ್ಲಿ ರೈತ ಚಿತ್ರಗಳು"** ಎಂಬ ನಿಬಂಧವನ್ನು **ಪ್ರೊ॥ ಡಿ. ಲಿಂಗಯ್ಯ** ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 30-08-2010 -

ಸಂಶೋಧಕರು

Ramaswamy

(ರಾಮಸ್ವಾಮಿ .ಹೆಚ್.ಡಿ)

ಸ್ಥಳ: ಬೆಂಗಳೂರು .

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೯-೧೦ ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕುವೆಂಪು ಕಾದಂಬರಿಗಳಲ್ಲಿ ರೈತ ಚಿತ್ರಗಳು"** ಎಂಬ ನಿಬಂಧವನ್ನು **ರಾಮಸ್ವಾಮಿ .ಹೆಚ್.ಡಿ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ನಿಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 30-08-2010.

ಸ್ಥಳ: ಬೆಂಗಳೂರು

ಮಾರ್ಗದರ್ಶಕರು

(ಪ್ರೊ॥ ಡಿ. ಲಿಂಗಯ್ಯ)



1904-1994 ರಾಷ್ಟ್ರಕವಿ ಕುವೆಂಪು ☎ :080-26506763

ಸಿರಿಗನ್ನಡ ಪ್ರಕಾಶನ (01) **Rashtrakavi Kuvempu** ಸಂಚಾರಿ : 98454 13135

(ಶ್ರೀರಾಮಾಯಣ ದರ್ಶನಂ ಕೃತಿಗಾಗಿ 1968ರಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ಮಹಾಕವಿ)



ಪರಿವಿಡಿ

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ

ಕುವೆಂಪು ತಮ್ಮ ಸೃಜಲಶೀಲ ಪ್ರತಿಭೆಯ ಮೂಲಕ ಹಲವು ಪ್ರಕಾರಗಳಲ್ಲಿ ಉಲ್ಲೇಖನೀಯ ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಅವರ ಕೃತಿಗಳು ಮಹಾಕಾವ್ಯ, ಕಾವ್ಯ ಮೀಮಾಂಸೆ, ವಿಮರ್ಶೆ ಜೀವನ ಚರಿತ್ರೆ, ಆತ್ಮಚರಿತ್ರೆ, ನಾಟಕ, ಕಾವ್ಯ, ಕಥನಕಾವ್ಯ, ಖಂಡಕಾವ್ಯ, ಪ್ರಬಂಧಗಳ ನಾನಾ ಪ್ರಕಾರಗಳಲ್ಲಿ ಉಜ್ವಲವಾಗಿ ರಚನೆಗೊಂಡಿವೆ. ಇದರೊಂದಿಗೆ ಕುವೆಂಪು ಎರಡು ಮಹಾಕಾದಂಬರಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿದ್ದಾರೆ.

ಮೊದಲನೆಯದು ೧೯೩೬ರಲ್ಲಿ ಕಾನೂರು ಹೆಗ್ಗಡತಿ ಹಾಗೂ ಎರಡನೆಯದು ೧೯೬೭ರಲ್ಲಿ ಮಲೆಗಳಲ್ಲಿ ಮದುಮಗಳು ರಚನೆಯಾಗಿವೆ. ಒಂದು ಮನೆಯ ಊರುಗಳ ಕಥಾನಕವು ಕಾನೂರು ಹೆಗ್ಗಡತಿಯಲ್ಲಿ ಕಾನನಗಳಲ್ಲಿ ಜೀವನ ಚಿತ್ರಣಗೊಂಡಿವೆ. ಎಂಬತ್ತೊಂದು ಅಧ್ಯಯನಗಳಲ್ಲಿ ಕಾನೂರು, ಮುತ್ತಳ್ಳಿ, ಸೀತಿಮನೆ ಕಥೆ ಆವರಿಸಿವೆ. ಕಾದಂಬರಿಯ ಪ್ರಮುಖ ಊರುಗಳೆಲ್ಲ ಕಾಲ್ಪನಿಕವಾಗಿದ್ದು ತೀರ್ಥಹಳ್ಳಿಯ, ಆಗುಂಬೆ, ಮಳಿಗೆ, ಸಿದ್ದರ ಮಠಗಳೆಲ್ಲ ಅಸ್ತಿತ್ವದಲ್ಲಿ ಕಾದಂಬರಿಯಲ್ಲಿ ಎದ್ದು ಕಾಣುತ್ತಿವೆ.

ಕಾನೂರು ಹೆಗ್ಗಡತಿಯ ಕಥೆ: ಅದರ ಹೆಸರಿನ ಕಾರಣವಾಗಿ ಸುಬ್ಬಮ್ಮ ವೃತ್ತಾಂತ ವೆಂಬಂತೆ ತೋರಿದರು. ವಾಸ್ತವದಲ್ಲಿ ಚಂದ್ರಯ್ಯಗೌಡರ ಬದುಕಿನ ಏಳು-ಬೀಳು ಚಿತ್ರಣದಲ್ಲಿ ಪ್ರಧಾನವಾಗಿದೆ. ಮತ್ತೊಂದು ಬದಿಯಲ್ಲಿ ಹೂವಯ್ಯನ ಆದರ್ಶಗಳ ಸೋಲು-ಗೆಲುವುಗಳ ಕಥೆಯಾಗಿ ಕಾನೂರು-ಮುತ್ತಳ್ಳಿ-ಸೀತೆಮನೆಗಳ-ಪ್ರೀತಿ-ದ್ವೇಷಗಳ ವರ್ಣತೆಯಾಗಿ ಬರುತ್ತದೆ. ಪ್ರಾದೇಶಿಕತೆ ಆವರಿಸಿಕೊಂಡಂತೆ ಬ್ರಾಹ್ಮಣರನ್ನು ಹೊರತು ಪಡಿಸಿದರೆ ಇತರ ವರ್ಗದ ಜನರು ಕಳ್ಳ-ಹೆಂಡ ಸವಿಯುತ್ತಿದ್ದರು. ಹರಕೆ ಬಲಿ, ದೇವರು ಮಂತ್ರ, ತಾಯಿತಗಳು, ಧಾರಾಳವಾಗಿವೆ. ಜೂಜು, ಬೇಟೆ ಸಾಗಿದೆ.

ಚಂದ್ರಯ್ಯ ಗೌಡರು, ಶಾಮಯ್ಯಗೌಡರು, ಸಿಂಗಪ್ಪಗೌಡರು, ಜೀವನ ಕ್ರಮ, ಒಕ್ಕಲುತನ ಗೋಚರವಾಗುತ್ತದೆ.

ಕಾನೂರು ಹೆಗ್ಗಡತಿಯ ಘಟನೆಗಳೆಲ್ಲ ಮನೆಯ ಒಳಗಡೆ ನಡೆದರೆ ಮಲೆಗಳಲ್ಲಿ ಮದುಮಗಳುವಿನ ಪ್ರಮುಖ ಘಟನೆಗಳೆಲ್ಲ ಮನೆಯ ಹೊರಗೆ ಕಾಡು-ಬಯಲುಗಳಲ್ಲಿ ಪಯಾಣ ಸಂದರ್ಭದಲ್ಲಿ ನಡೆಯುತ್ತವೆ.

ಎರಡನೆಯ ಕಾದಂಬರಿ ಮಲೆಗಳಲ್ಲಿ ಮದುಮಗಳು ಪ್ರಕಟಣೆಯಾದ ಸಂದರ್ಭದಲ್ಲಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳು ಭಿನ್ನವಾಗಿರುವುದು ಕಂಡು ಬರುತ್ತದೆ.

ಒಟ್ಟಾರೆಯಾಗಿ ಈ ಎರಡು ಕಾದಂಬರಿಗಳನ್ನು ನೋಡಿದಾಗ ಗೋಚರವಾಗುವ ಸಂಗಾತಿಯೆಂದರೆ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಈ ಮಲೆನಾಡಿನ ನಿಸರ್ಗದ ಮಡಿಲಲ್ಲಿ ಬದುಕಿನ ಜಂಜಾಟಗಳ ಚಿತ್ರವು ಒಡ ಮೂಡುತ್ತವೆ. ಈ ನಿಟ್ಟಿನಲ್ಲಿ ಅಧ್ಯಯನದ ಪ್ರಮುಖ ಉದ್ದೇಶ ಮಲೆನಾಡಿನ ಗ್ರಾಮೀಣ ಜೀವನದ ರೈತರ ಸ್ಥಿತಿಗತಿ ಸ್ವಾತಂತ್ರ್ಯ ಪೂರ್ವದಲ್ಲಿನ ಸ್ಥಿತಿಗತಿ ಸ್ವಾತಂತ್ರ್ಯ ನಂತರದ ರೈತರ ಜೀವನ ಚಿತ್ರಣವನ್ನು ಅಧ್ಯಯನ ಮಾಡುವುದಾಗಿವೆ.

ಸ್ವಾತಂತ್ರ್ಯಲಭಿಸಿ ಅರವತ್ತೆರಡು ವರ್ಷಗಳಾದರೂ ಹಳ್ಳಿಗರ ಸ್ಥಿತಿಗಳಲ್ಲಿ ಹೆಚ್ಚೇನು ವ್ಯತ್ಯಾಸವಾಗಿಲ್ಲ. ಭರತಖಂಡದಲ್ಲಿ ರೈತ ಸಂಘ ಕಲ್ಪಿಸಿ ಬರುವ ಬಹುಪೂರ್ವ ಕಾಲದಲ್ಲಿಯೇ ಕುವೆಂಪು ರೈತರ ಹಿತಾಶಕ್ತಿಗಳನ್ನು ಸಮಾಜದಲ್ಲಿ ಅವರಿಗೆ ದೊರಕಬೇಕಾದ ಸ್ಥಾನಮಾನಗಳನ್ನು ಲೋಕಾಭ್ಯುದಯದಲ್ಲಿ ರೈತರ ಪಾತ್ರವನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಒಟ್ಟಾರೆ ಮಾಲೆನಾಡಿನ ಗ್ರಾಮೀಣ ಜೀವನ ಕುವೆಂಪು ರಚಿಸಿರುವ ಎರಡು ಮಹಾಕಾದಂಬರಿಗಳ ತಡಿಕೆಯಾಗಿದೆ.

ಬ್ರಾಹ್ಮಣರು ಒಕ್ಕಲಿಗರು ಬಗ್ಗೆ ನಡೆದುಕೊಳ್ಳಿತ್ತಿದ್ದ ರೀತಿ–ನೀತಿಗಳು ಈ ಎರಡು ಕಾದಂಬರಿಗಳಲ್ಲಿಯೂ ಪ್ರಸ್ತಾಪಗೊಳ್ಳುತ್ತವೆ. ಶೂದ್ರ ವರ್ಗದ ಸಾಮಾನ್ಯ ಜನರಿಂದ ಪಾದಪೂಜೆ ಮಾಡಿಸಿಕೊಳ್ಳುತ್ತಿದ್ದರು. ದಾನದಕ್ಷಿಣೆ, ಸ್ವೀಕರಿಸುತ್ತಿದ್ದರು. ತಮ್ಮ ಪಂಗಡಕ್ಕೆ ಸೇರಿದ ಬ್ರಾಹ್ಣರೋತ್ತರಿಗೆ ಭೂ ಸುರರಿಗೆ ಸಮಾರಾಧನೆ ಮಾಡಿಸಿ ಹೊಟ್ಟೆ ತುಂಬಿಸುತ್ತಿದ್ದರು.

ಈ ಎರಡು ಕೃತಿಗಳು ಒಟ್ಟಿನಲ್ಲಿ ಮಲೆನಾಡಿನ ಗ್ರಾಮೀಣ ಸಂಸ್ಕೃತಿಯ ವಿಶ್ವಕೋಶಗಳಂತಿವೆ.

ಕಾದಂಬರಿಗಳಲ್ಲಿ ಕಂಡು ಬರುವ ಪಾತ್ರಗಳಲ್ಲಿ ಎದ್ದು ಕಾಣುವವರು ರೈತರು ಒಕ್ಕಲು ಮಕ್ಕಳ ಸಾಂಸಾರಿಕ ಜೀವನದ ಸುತ್ತ ಈ ಕಾದಂಬರಿಗಳ ಕತೆ ಹರಿಯುತ್ತವೆ. ರೈತರ ಅವಿಭಕ್ತ ಕುಟುಂಬದ ಸಮಸ್ಯೆಗಳು ಜಮೀನು ಹಿಸ್ಸೆ ಬ್ರಾಹ್ಮಣರಿಂದ ಪ್ರಚಾರಗೊಳ್ಳುವ ಮೂಢ ನಂಬಿಕೆಗಳು ರೈತರ ಕುಟುಂಬಗಳ ಮೇಲೆ ಅವು ಬೀರುವ ದುಷ್ಪಾರಿಣಾಮಗಳು ಹಿಂದೂ ಧರ್ಮದ ಅನಾಚಾರವನ್ನು ಕುರಿತ ನೇಟಿವ್ ಪಾದ್ರಿಯ ಪ್ರಚಾರ ಆ ಪ್ರಚಾರದಿಂದ ರೈತರ ಮನೆಯ ತರುಣರ ಮನಸ್ಸಿನ ಮೇಲಾಗುತ್ತಿದ್ದ ದುಷ್ಪಾರಿಣಾಮ–ಹೊನ್ನಾಳಿ ಹೊಡ್ತಾ ಇಂತಹ ನೂರಾರು ವಾಸ್ತವ ಸಂಗತಿಗಳು ಈ ಕಾದಂಬರಿಗಳಲ್ಲಿ ಬೆತ್ತಲೆಯಾಗಿ ಕಾಣಿಸಿಕೊಳುತ್ತವೆ.

ಕಾದಂಬರಿಗಳಲ್ಲಿ ರೈತನನ್ನು ಹಲವು ಮಜಲುಗಳಲ್ಲಿ ವೈಭವೀಕರಿಸಿದ್ದಾರೆ. ಹಾಗೆಯೇ ಜಮೀನ್ದಾರರು, ಪುರೋಹಿತರು, ಶ್ರೀಮಂತರು ಈ ವರ್ಗದ ಜನರಿಂದ ರೈತರ ಶೋಷಣೆಗೆ ಒಳಪಡ ಬೇಕಾಗುವ ಪರಿಯನ್ನು ಕಾಣಬಹುದಾಗಿದೆ.

ಈ ಎರಡೂ ಕಾದಂಬರಿಗಳು ಒಂದು ಪ್ರಾದೇಶಿಕ ಮಿತಿಯಲ್ಲಿ ಒಂದು ಕಾಲದ ಮಿತಿಯಲ್ಲಿ ಮಲೆನಾಡ ಬದುಕನ್ನು ಜೀವನತುಂಬಿ ಕಟ್ಟುಕೊಡುತ್ತವೆ. ಅಲ್ಲಿಯ ಕಥೆ ನಿರೂಪಣೆ, ಮುಖ್ಯವಾಗಿದೆ. ಕಾದಂಬರಿಗಳು ನಿಸರ್ಗವರ್ಣನೆ ಬಾಷಾಬಳಕೆ, ಪ್ರಾದೇಶಿಕತೆ ಸಮಾಜ ಚಿತ್ರಣ ಸಾಂಸ್ಕೃತಿಕ ವಿವರಗಳು ಮನಃಶಾಸ್ತ್ರ ಶೋಷಣೆ ವ್ಯಕ್ತಿಗಳು ನಂಬಿಕೆ ಆಚರಣೆಗಳ ಹಲವು ಹತ್ತು ಮುಖ್ಯವಿವರ ವಿಚಾರಗಳಿಂದ ಗಮನಾರ್ಹವಾಗಿದೆ.

ಕುವೆಂಪುರವರ ಕಾದಂಬರಿಗಳು ಕೂಡಾ ಮನುಷ್ಯನ ಸಾಮಾಜಿಕ ಸಂಬಂಧ ಸಂಘರ್ಷ ಕೌಟುಂಬಿಕ ಜೀವನ ಪ್ರೀತಿ ಸಿಲುಕಿದ ಪ್ರೇಮಿಗಳು ರೈತರ–ಬದುಕು ದೌರ್ಜನ್ಯ ಶೋಷಣೆ ಹೀಗೆ ನಾನಾ ಸ್ತರಗಳು ಕಾದಂಬರಿಗಳಲ್ಲಿ ಮೈದುಂಬಿವೆ.

ಜೀವನದ ಸಮೃದ್ಧಿಯು ಕಾದಂಬರಿಯ ಅನೇಕ ಪಾತ್ರಗಳಿಂದ ಘಟನೆಗಳಿಂದ ವ್ಯಕ್ತವಾಗಿವೆ.

ಕಾದಂಬರಿಯ ಕೇಂದ್ರ ಬೆಳಕು ಮಲೆನಾಡಿನ ಜಮೀನುದಾರರ ಮನೆಗಳ ಆಗು–ಹೋಗುಗಳ ಮೇಲೆ ಹೆಚ್ಚು ಪ್ರಭಾವರು ಬೀಳುವುದಾದರೂ ಅದು ಅಲ್ಲಿನ ದುಡಿಯುವ ವರ್ಗಗಳ ಬದುಕನ್ನು ಕುಶಲತೆಯಿಂದ ಕಾಣಿಸುತ್ತದೆ.

ಮಲೆಗಳಲ್ಲಿ ಮದುಮಗಳು–ಕಾದಂಬರಿಯಲ್ಲಿ ಮಲೆನಾಡಿನ ಗೌಡರ ಜೀವನ ವಿಧಾನ ವೈವಿಧ್ಯಮಯವಾಗಿದೆ. ಅವರ ಮೂಡನಂಬಿಕಗಳು ಟೊಳ್ಳು ಪ್ರತಿಷ್ಠೆಗಳು ದರ್ಪ ದಬ್ಬಾಳಿಕೆಗಳು ಪ್ರಣಯ ಸಾಹಸಗಳು ಅವರ ಹೆಂಗಸರ ಸ್ವಾತಂತ್ರ್ಯವಿಲ್ಲದ ಬಾಳು ಹಾಗೂ ಮುಗ್ಧತೆ ಆಗೌಡರ ಹೊಲ ಗದ್ದೆಗಳಲ್ಲಿ ದುಡಿಯುವ ಹಳೇ ಪೈಕದವರು ಹೊಲೆಯರು, ದೀವರು, ಬಿಲ್ಲವರು, ಮುಂತಾದವರ ವಿಶಿಷ್ಟವಾದ ರೀತಿ ನೀತಿಗಳು ಈ ವರ್ಗದವರನ್ನು ನಂಬಿ ಬದುಕುವ ಶೋಷಿಸಿ ಬದುಕುವ ಬ್ರಾಹ್ಮಣರು ಮುಸ್ಲಿಮರು ಹೊಸ ವಿಚಾರಗಳ ನವ ನಾಗರಿಕತೆಯ ಪ್ರಸಾರದ ಹೆಸರಿನಲ್ಲಿ ಮತಾಂತರ ಕಾರ್ಯದಲ್ಲಿ ನಿರತರಾಗಿರುವ ಪಾದ್ರಿಗಳು ಜಮೀನ್ದಾರಿ ವರ್ಗ ಸಾಮಾನ್ಯ ರೈತ ಭೂರಹಿತ ರೈತರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಶೋಷಣೆಗೆ ಒಳಪಡಿಸಿ ದುಡಿಸಿಕೊಳ್ಳುವ ಒಂದು ವರ್ಗವಾದರೆ, ಮತ್ತೊಂದೆಡೆ ಬ್ರಾಹ್ಮಣರು–ಸಾಮಾಜಿಕವಾಗಿ ಧಾರ್ಮಿಕವಾಗಿ ಶೋಷಿಸುತ್ತಾ ಜೀವನ ನಡೆಸುವ ಸ್ತರವನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ.

ಜಾತಿ ಮತ್ತು ಶೋಷಣೆ ಈ ಕಾದಂಬರಿಯ ಮತ್ತೊಂದು ಮುಖ್ಯ ಅಂಶ.

ಬ್ರಾಹ್ಮಣರು ಸಮಾಜದಲ್ಲಿ ಮೇಲು ವರ್ಗದವರು ಅವರು ದರಿದ್ರರಾಗಲಿ, ಕೊಳಕರಾಗಿರಲಿ, ಜಾರರಾಗಿರಲಿ ಚೋರರಾಗಿರಲಿ ಅವರಿಗೆ ಅಗ್ರಮರ್ಯಾದೆ ಸಲ್ಲಬೇಕು.

ಮಂಜುನಾಥಭಟ್ಟರು ಅತ್ಯಂತ ದೀನದರಿದ್ರಾವಸ್ಥೆಯಲ್ಲಿ ಮಲೆನಾಡಿಗೆ ಬಂದವರು ತಾವು ಮೇಲುಜಾತಿಯವರೆಂಬ ಕಾರಣಕ್ಕಾಗಿ ಎಲ್ಲರಿಂದಲೂ ಗೌರವವನ್ನು ಆಶ್ರಯವನ್ನು ಪಡೆದವರು ವ್ಯಾಪಾರದಲ್ಲಿ ಮೋಸ ಕಳವು ದರೋಡೆ ಮತ್ತು ಅತ್ಯಾಚಾರಗಳಿಂದ ಜನರನ್ನು ಶೋಷಿಸುತ್ತಾರೆ.

ರಾಜಕಾರಣ ಮತ್ತು ವ್ಯಾಪಾರಕ್ಕಾಗಿ ವಿದೇಶಗಳಿಂದ ಬಂದ ಕ್ರೈಸ್ತ ಪಾದ್ರಿಗಳು, ಮಲೆನಾಡಿನ ಜನರ ಮುಗ್ಧತೆಯನ್ನು ಬಂಡವಾಳ ಮಾಡಿಕೊಂಡು ಅವರ ಜಾತಿ, ಆಚಾರ, ವಿಚಾರಗಳನ್ನು ಹೀಗೆಳೆದು ಹಲವಾರು ಅಮಿಷಗಳನ್ನೊಡ್ಡಿ ತಮ್ಮ ಮತವನ್ನು ಹೇಗೆ ಹರಡುತ್ತಾರೆಂಬುದನ್ನು ಇಲ್ಲಿ ಚಿತ್ರಿಸಲಾಗಿದೆ. ಇದು ಶೋಷಣೆಯ ಮತ್ತೊಂದು ಮುಖವನ್ನು ಅನಾವರಣಗೊಳಿಸುತ್ತದೆ.

ಒಟ್ಟಾರೆ ಈ ನನ್ನ ಅಧ್ಯಯನದಲ್ಲಿ ರೈತರ ಬದುಕು ಯಾವ ಒಂದು ವೈರುದ್ಯದಲ್ಲಿ ಮಲೆನಾಡಿನಂತಹ ಪ್ರದೇಶದಲ್ಲಿ ಚಿತ್ರಣಗೊಂಡಿದೆ ಎಂಬುದನ್ನು ನೋಡುವುದಾಗಿದೆ. ಮೊದಲ ಅಧ್ಯಾಯದಲ್ಲಿ ಕುವೆಂಪುರವರ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟು ಕೃತಿಗಳ ಸ್ವರೂಪವನ್ನು ಹೇಳಲಾಗಿದೆ. ಎರಡನೇ ಅಧ್ಯಾಯದಲ್ಲಿ ಒಕ್ಕಲಿಗರ ಶ್ರಮಜೀವಿಗಳ ಸಾಮಾಜಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕು ಹೇಳಲಾಗಿದೆ. ಮೂರನೇ ಅಧ್ಯಾಯದಲ್ಲಿ ಒಕ್ಕಲಿಗರ ಸಾಂಸ್ಕೃತಿಕ ಜೀವನ ನಾಲ್ಕನೇ ಅಧ್ಯಾಯದಲ್ಲಿ ಜಮೀನ್ದಾರಿ ಪದ್ಧತಿ, ಭೂಮಿಯ ಒಡೆತನದ ಶೋಷಣೆ ಜೀತಪದ್ಧತಿಯ ಬಗ್ಗೆ ಹಾಗೂ ಐದನೇ ಅಧ್ಯಾಯದಲ್ಲಿ ರೈತವರ್ಗ ಶೋಷಣೆಗೆ ಒಳಪಡುವ ನಾನಾ ಮಜಲುಗಳನ್ನು ಹಲವು ಸ್ತರಗಳಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದೇನೆ.

* * * * *

ಅಧ್ಯಾಯ: ೧

ಕುವೆಂಪು ಬದುಕು ಬರಹ

ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಲ್ಲಿ ಕುವೆಂಪು ಅಗ್ರಮಾನ್ಯರು ಆಧುನಿಕ ಕನ್ನಡ ಸಾಹಿತ್ಯವನ್ನು ರೂಪಿಸಿಕೊಟ್ಟ ವಿಶ್ವಮಾನವ ಕವಿ. ತಮ್ಮ ಬಹುಮುಖ ಪ್ರತಿಭೆ ಸತತ ಅಧ್ಯಯನ ಅವಲೋಕನಗಳಿಂದ ರಾಮಕೃಷ್ಣ ವಿವೇಕನಂದರ ಪ್ರಭಾವದಿಂದ ತಮ್ಮ ಸಾಹಿತ್ಯ ವಲಯವನ್ನು ವಿಶಾಲವಾಗಿ ವಿಸ್ತರಿಸಿ ಮೆರೆದ ಮಹಾಚೇತನ.

೨೯ ಡಿಸೆಂಬರ್ ೧೯೦೪ರಲ್ಲಿ ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಕುಪ್ಪಳ್ಳಿಯಲ್ಲಿ ಜನಿಸಿದರು. ತೀರ್ಥಹಳ್ಳಿಯಲ್ಲಿ ಮಾಧ್ಯಮಿಕ ವಿದ್ಯಾಭ್ಯಾಸ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿ

೧೯೨೮ರಲ್ಲಿ ಬೆಂಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

೧೯೧೯ರಲ್ಲಿ ಎಂ.ಎ. ಪದವಿ ಉತ್ತೀರ್ಣರಾದರು ನಂತರ ಮೈಸೂರು ವಿಶ್ವವಿದ್ಯಾಲಯದ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರ್ಪಡೆ ೧೯೩೦ರಲ್ಲಿ ಮೊಟ್ಟಮೊದಲ ಕವನ ಸಂಕಲನ 'ಕೊಳಲು' ಪ್ರಕಟಣೆ ೧೯೩೩ ಹುಬ್ಬಳ್ಳಿಯಲ್ಲಿ ನಡೆದ ೧೯ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾಗಿದ್ದರು.

೧೯೪೬ರಲ್ಲಿ ಕನ್ನಡ ಪ್ರಾಧ್ಯಾಪಕರು ಮತ್ತು ಕನ್ನಡ ವಿಭಾಗದ ಮುಖ್ಯಸ್ಥರಾಗಿ ಮಹಾರಾಜ ಕಾಲೇಜಿನಲ್ಲಿ ನೇಮಕ

೧೯೪೯-೫೧ "ಶ್ರೀ ರಾಮಾಯಣ ದರ್ಶನಂ" ಎರಡು ಸಂಪುಟಗಳ ಪ್ರಕಟಣೆ.

೧೯೫೧ – ರಾಷ್ಟ್ರಪತಿಗಳಿಂದ 'ಪದ್ಮಭೂಷಣ' ಪ್ರಶಸ್ತಿ ಸ್ವೀಕರಿಸಿದ್ದು.

೧೯೬೪ – ರಾಜ್ಯ ಸರ್ಕಾರದಿಂದ ರಾಷ್ಟ್ರಕವಿ ಪ್ರಶಸ್ತಿ ಸ್ವೀಕರಿಸಿದ್ದು.

೧೯೬೬ – ಕರ್ನಾಟಕ ವಿಶ್ವ ವಿದ್ಯಾಲಯದಿಂದ ಗೌರವ ಡಿಲಿಟ್ ಪ್ರಶಸ್ತಿ

೧೯೬೭ – "ಮಲೆಗಳಲ್ಲಿ ಮಧುಮಗಳು" ಕಾದಂಬರಿಯ ಪ್ರಕಟಣೆ

೧೯೬೮ – "ರಾಮಾಯಣ ದರ್ಶನಂ" ಕೃತಿಗೆ ಕನ್ನಡದ ಮೊದಲ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು.

೧೯೬೯ – ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್ ಪ್ರಶಸ್ತಿ

೧೯೭೨ – ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ

೧೯೯೨ – "ಕರ್ನಾಟಕ ರತ್ನ ಪ್ರಶಸ್ತಿ" ಕರ್ನಾಟಕ ರಾಜ್ಯ ಸರ್ಕಾರದಿಂದ

೧೯೯೪ – ನಿಧನ

ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಕುವೆಂಪುರವರು ಬರೆಯದ ಸಾಹಿತ್ಯ ಪ್ರಕಾರವಿಲ್ಲ ಕಥೆ, ಕಾದಂಬರಿ, ನಾಟಕ, ಕಾವ್ಯ, ಜೀವನ ಚರಿತ್ರೆ, ಆತ್ಮಕತೆ, ವಿಮರ್ಶೆ, ಭಾವಗೀತೆ, ಪ್ರಬಂಧ ಹೀಗೆ ಇನ್ನೂ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿ ಕನ್ನಡ ಸಾಹಿತ್ಯವನ್ನು ಶ್ರೀವಂತ ಗೊಳಿಸಿದ್ದಾರೆ.

ಸಾಮಾಜಿಕ–ಧಾರ್ಮಿಕ, ವೈಚಾರಿಕ–ಪ್ರಾಪಂಚಿಕ, ಆದ್ಯಾತ್ಮಿಕ ಲೌಕಿಕ, ಸಂಸಾರಿಕ, ದಾರ್ಶನಿಕ, ಶೈಕ್ಷಣಿಕ, ನಿಸರ್ಗ–ನಾಡು ನುಡಿ–ಪ್ರೀತಿ ಪ್ರೇಮ ಹೀಗೆ ಇನ್ನೂ ಹಲವಾರು ಸಾಹಿತ್ಯ ಮಜಲುಗಳನ್ನು ಕುವೆಂಪು ಸಾಹಿತ್ಯ ಆವರಿಸಿಕೊಂಡಿದೆ.

ಕವನ ಸಂಗ್ರಹಗಳು: ಕೊಳಲು, ಪಕ್ಷಿಕಾಶಿ, ಕಲಾಸುಂದರಿ, ಪ್ರೇಮಕಾಶ್ಮೀರ, ಚಂದ್ರಮಚಕೆ ಬಾ ಚಕೋರಿ, ಷೋಡಶಿ ಅನುದ್ದರಾ, ಕಿಂಕಿಣಿ, ಇಕ್ಷು, ಗಂಗೋತ್ರಿ, ಮಂತ್ರಾಕ್ಷತೆ, ಮುಂತಾದ ೨೫ಕ್ಕೂ ಹೆಚ್ಚಿನ ಕವನ ಸಂಕಲನಗಳನ್ನು ರಚಿಸಿದ್ದಾರೆ.

ಕಾದಂಬರಿ: "ಮಲೆಗಳಲ್ಲಿ ಮದುಮಗಳು" ಮತ್ತು "ಕಾನೂರು ಹೆಗ್ಗಡತಿ"

ನಾಟಕಗಳು: "ಮೋಡಣ್ಣನ ತಮ್ಮ", ಯಮನಸೋಲು,. ಜಲಗಾರ, ನನ್ನಗೋಪಾಲ, ಮಹಾರಾತ್ರಿ, ಸ್ಮಶಾನ, ಕುರುಕ್ಷೇತ್ರ, ವಾಲ್ಮಿಕಿ ಭಾಗ್ಯ, ಚಂದ್ರಹಾಸ, ಬಿರುಗಾಳಿ, ರಕ್ತಾಕ್ಷಿ, ಶೂದ್ರತಪಸ್ವಿ ಬಲಿದಾನ ಬೆರಳ್‌ಗೆ ಕೊರಳ್ ಮುಂತಾದವು ಹೀಗೆ ಕುವೆಂಪು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತಮ್ಮ ಛಾಪನ್ನು ಮಾಡಿಸಿದ್ದಾರೆ. ಇವಲ್ಲದೆ ಪ್ರಗಾಥ, ಖಂಡಕಾವ್ಯ, ಜೀವನ ಚರಿತ್ರೆ ವಿಮರ್ಶೆ, ಭಾವಗೀತೆ, ಪ್ರಬಂಧ ಕಾವ್ಯ, ಆತ್ಮಚರಿತ್ರೆ ಕ್ಷೇತ್ರಗಳಲ್ಲಿ ಸಾಹಿತ್ಯದ ಹರವನ್ನು ವಿಸ್ತರಿಸಿದ್ದಾರೆ.

ಒಟ್ಟಾರೆಯಾಗಿ ಕುವೆಂಪುರವರ ಸಮಗ್ರ ಸಾಹಿತ್ಯ ಮಾನ್ಯ ಬದುಕಿನ ಸಮಸ್ತ ಆಸೆ–ಅನಿಸಿಕೆ ರಾಗ–ಅನುರಾಗ ಸುಖ–ದುಃಖ ನೋವು ನಲಿವು ವೈಚಾರಿಕ–ದಾರ್ಶನಿಕ ವಿಚಾರಗಳಿಂದ ಪರಿಪೂರ್ಣಗೊಂಡಿದೆ.

ವಿಶ್ವ ವಿಚಾರವಾದರೆ ಕುವೆಂಪು ಸಾಹಿತ್ಯದ ವಿಶಿಷ್ಟ ಗುಣ ಲಕ್ಷಣ ದಾರ್ಶನಿಕ ವಿಚಾರಗಳು, ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ, ಲೌಕಿಕ, ಆಧ್ಯಾತ್ಮ ಪ್ರಾಪಂಚಿಕ ವಿಷಯಗಳನ್ನು ಒಳಗೊಂಡು ಕುವೆಂಪು ಸಾಹಿತ್ಯ ಮಾರ್ಗದರ್ಶನ ನೀಡುವ ಆದರ್ಶಪ್ರಾಯವಾಗಿದೆ.

ಕುವೆಂಪುರವರ ಪ್ರಕೃತಿಯ ಆರಾಧಕರು ಮಲೆನಾಡಿನ ನಿಸರ್ಗದ ಮಡಿಲಲ್ಲಿ ನಿಸರ್ಗದ ಅನಂತ ಆಯಾಮಗಳನ್ನೂ ತಮ್ಮ ಮನೋ ಭೂಮಿಕೆಯಲ್ಲಿ ಸೆರೆ ಹಿಡಿದವರು. ಮನುಕುಲಕ್ಕೆ ನಿಸರ್ಗದ ಸೊಬಗನ್ನು ಅದರಲ್ಲಿನ ಅನಂತ ಮುಗ್ಗಲುಗಳನ್ನು ತಮ್ಮ ಸಾಹಿತ್ಯದ ಮೂಲಕ ಜಗತ್ತಿಗೆ ತೋರಿಸಿದ್ದಾರೆ.

ಕುವೆಂಪು ಕನ್ನಡ ನವೋದಯ ಕಾವ್ಯಕ್ಕೆ ವಿಶ್ವಮಾನ್ಯತೆಯನ್ನು ದೊರಕಿಸಿಕೊಟ್ಟವರು. ಬಡವ–ಬಲ್ಲಿಗ–ಬಿಳಿಯ, ಕರಿಯ ಉಚ್ಛ–ನೀಚ ಈ ತಾರತಮ್ಯ ಭಾವನೆಗಳು ಸಮಾಜದಲ್ಲಿ ಬೇರುಲಿಚ್ಚಿವೆ. ಇವುಗಳನ್ನು ತೊಡೆದು ಹಾಕಲು ಕುವೆಂಪುರವರು ಜಗತ್ತಿಗೆ ಸಂದೇಶ ನೀಡುತ್ತಾರೆ.

ಕುವೆಂಪುರವರ ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳು ವಿಶ್ವ ಕೋಶದಂತಿದ್ದು ಪ್ರೀತಿ ಪ್ರೇಮ–ಪ್ರಣಯ–ಕುಟುಂಬ, ಗ್ರಾಮ ಜೀವನದಲ್ಲಿ ನಿಸರ್ಗದ ಚೆಲುವು ಮಲೆನಾಡಿದ ಜೀವನ ಚಿತ್ರಣದೊಂದಿಗೆ ರೈತನ ಬದುಕನ್ನು ಹಲವು ಮಜಲುಗಳಲ್ಲಿ ಕಾಣಬಹುದಾಗಿದೆ. ಕುವೆಂಪು ಅವರು ತಮ್ಮ ವಿದ್ಯಾರ್ಥಿ ದೆಶೆಯೆಂದಲೂ ಭಾಷಣ ಮತ್ತು ಲೇಖನಗಳ ಮೂಲಕ ಹಳ್ಳಿಯ ರೈತರ ದುಸ್ಥಿತಿಯನ್ನೂ ಬಯಲಿಗೆಳೆದು ಅದಕ್ಕೆ ನಿವಾರಣಾ ಉಪಾಯಗಳನ್ನೂ ಸೂಚಿಸುತ್ತಾ ಬಂದಿದ್ದಾರೆ. ರೈತರು ವಿದ್ಯಾವಂತರಾಗಿ ಅಜ್ಞಾನ ಮಾಡಳಿಗಳಿಂದ ಪಾರಾಗಿ ಶಿಕ್ಷಿತರಾಗಿ ಸಮಾಜದಲ್ಲಿ ಉತ್ತಮರಾಗಿ ಬಾಳಬೇಕೆಂದು ತಿಳಿ ಹೇಳಿದ್ದಾರೆ.

ಪ್ರೇಮ ಸ್ವಭಾವದರೂ ಶಾಂತಜೀವಿಗಳೂ ಉದಾರಿಗಳೂ ಆಗಿರುವ ಸರಳ ಹೃದಯದ ಮಲೆನಾಡಿನ ಒಕ್ಕಲು ಮಕ್ಕಳನ್ನು ಕುರಿತು ಮಾಡಿದ ಭಾಷಣ ಇನ್ನೂ ಆ ಜನರ ಅಜ್ಞಾನವನ್ನು ಹೋಗಲಾಡಿಸದೇ ಇರುವುದು. ದುರ್ದೈವದ ಸಂಗತಿಯೆಂದು ಹೇಳಬಹುದು.

ಧರ್ಮದೇವರು ಮತ್ತು ದೆವ್ವದ ಪೂಜೆ, ಇವುಗಳ ಹೆಸರಿನಲ್ಲಿ ನಾವು ಅನಾಹುತಗಳನ್ನು ಮಾಡುತ್ತಿದ್ದೇವೆ. ಎಂದವರು ರೋಗನಿವಾರಣೆಯ ಬಗೆಗಿನ ರೈತರ ನಿರ್ಲಕ್ಷ್ಯವನ್ನು ಖಂಡಿಸುತ್ತಾರೆ.

ರೈತರ ಮುನ್ನಡೆಗೆ ಮೌಢ್ಯ ನಿವಾರಣೆಯೇ ಅಗತ್ಯವೆಂದು ಕುವೆಂಪು ಉಪದೇಶಿಸುತ್ತಾರೆ.

ಕುವೆಂಪು ಅವರ ಕತೆ ಕಾದಂಬರಿಗಳೆಲ್ಲೆಲ್ಲ ಪ್ರಧಾನ ಪಾತ್ರ ವಹಿಸುವವರು ಒಕ್ಕಲು ಮಕ್ಕಲು ಗ್ರಾಮೀಣ ಪರಿಸರದ ಒಕ್ಕಲು ಮಕ್ಕಳ ಜೀವನವೇ ಅವುಗಳಿಗೆ ತಲಕಾವೇರಿ ಅದೇ ಅವುಗಳ ಮೊದಲು ನಡುವೆ ಮತ್ತು ಕೊನೆ ಮೂಡನಂಬಿಕೆಗಳ ಹಾವಳಿ ಬ್ರಾಹ್ಮಣ ಪುರೋಹಿತರ ಮತ್ತು ಚೋಯಿಸರ ಶೋಷಣೆ ಹಳ್ಳಿಗರ ಬಾಳಿಗೆ ಮಾರಕವಾಗಿರುವ ಸಂಗಾತಿಗಳು ಕಾದಂಬರಿಗಳ ಮೈದೋರುತ್ತವೆ.

ರೈತರ ಹಟ್ಟಿಯಲ್ಲಿ ಹುಟ್ಟಿ ರೈತರ ತೊಳಿನಲ್ಲಿ ಬೆಳೆದು ರೈತರ ಮಕ್ಕಲೊಡನೆ ಆಡಿ ನಲಿದಾಡಿದ ಕವಿಗೆ ರೈತರ ಮಕ್ಕಳಲ್ಲಿ ಕರುಣೆ, ಸಹನೂಭೂತಿ, ಪ್ರೀತಿ, ಗೌರವ, ಆಧಾರಗಳು ಬ್ರಾಹ್ಮಣರಿಗೆ ಮೈಲಿಗೆಯಾಗಿ ಕಾಣುವ ರೈತರು ಕವಿಯ ದೃಷ್ಟಿಗೆ ವಿಶ್ವದ ಶಿಶು ಮೂರ್ತಿಗಳಂತೆ ಕಾಣುತ್ತಾರೆ.

ದುಡಿಯುವ ರೈತನ ನೇಗಿಲೊಳಗಿದೆ, ಕಡಿಯುವ ಕೂಲಿಯ ಕತ್ತಿಯೊಳಗಿದೆ, ನೇಗಿಲ ಗೆರೆಯೇ ಸಗ್ಗದ ಹಾದಿ, ಕರ್ಮದ ಬಾಗಿಲಿಗೊಯ್ಯುವ ಬೀದಿ। (ಕೊಳಲು ಪುಟ-೧೮), ಎನ್ನುವಾಗ ಕವಿ-ಕಾಯಕದ ಮಹತ್ವವನ್ನು ಎತ್ತಿ ಹಾಡುತ್ತಾರೆ.

ಮಲೆನಾಡಿನ ಮಡಿಲ ಒಕ್ಕಲಿಗೆ ಮನೆತನದಲ್ಲಿ ಹುಟ್ಟಿದ ಕುವೆಂಪು ಅವರ ಬದುಕು ಅನಿಕೇತನವಾದುದು. ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ ಕುವೆಂಪು ಜೀವನ ಯಶೋಗಾಥೆಯ ಮೆಟ್ಟಲು ಕನ್ನಡದ ಕೀರ್ತಿಪತಾಕೆಯನ್ನು ಹಾರಿಸಿದೆ ಮಹಾಚೇತನ ಆಧುನಿಕ ಕನ್ನಡ ಸಾಹಿತ್ಯದ ವಿಸ್ತಾರ ವೈವಿಧ್ಯತೆಗಳನ್ನು ಹೆಚ್ಚಿಸಿದ ಆಚಾರ್ಯರು.

ಮಲೆನಾಡಿನ ಜನಪದದಲ್ಲಿ ಜನಿಸಿ ಬೆಳೆದ ಕುವೆಂಪು ಅವರ ಕವಿಪ್ರಜ್ಞೆ ಸಾಹಿತ್ಯ ಲೋಕದ ಎಲ್ಲಾ ಸ್ತರಗಳನ್ನು ಆವರಿಸಿಕೊಂಡಿದೆ ಮಲೆನಾಡಿನ ಕಾಡು ಬೆಟ್ಟ ಬಯಲು ಅಲ್ಲಿನ ಸಮಾಜ ಹಾಗೂ ಅಲ್ಲಿನ ಜನಜೀವನದ ಎಲ್ಲಾ ಮಗ್ಗಲುಗಳನ್ನು ತನ್ನ ಅಲ್ಲಿನ ಜನಜೀವನದ ಎಲ್ಲಾ ಮಗ್ಗಲುಗಳನ್ನು ತನ್ನ ಪರಿಧಿಗೆ ಒಳಗು ಮಾಡಿಕೊಂಡಿದೆ. ಕುವೆಂಪು ಅವರ ಕೃತಿಗಳಲ್ಲಿ ಸಾಮಾನ್ಯ ಜನರ ರೈತರ ಬದುಕಿನ ವೈರುದ್ಯಗಳು ತುಂಬಿವೆ. ಬದುಕಿನ ನಗೆ ನಿಟ್ಟುಸಿರುಗಳು ಕೇಳಿಸುತ್ತವೆ.

ಕುವೆಂಪು ಅವರ ಕೃತಿಗಳೆಲ್ಲ ಮಲೆನಾಡಿನ ಸ್ಥಳೀಯತೆಯ ಮೇಲೆ ನಿಂತು ಆ ನೆಲದ ಆ ಜನಜೀವನದ ಉತ್ತಮೀಕರಣವನ್ನೂ ಅವಲಂಬಿಸಿಕೊಂಡು ಅರಳಿದವು.

ಕುವೆಂಪು ಅವರ ದೃಷ್ಟಿಯಲ್ಲಿ ಜೀವನ ಬೇರೆ ಸಾಹಿತ್ಯ ಬೇರೆ ಅಲ್ಲ ಮಹಾಕವಿಯಾದ ಕುವೆಂಪು ಅವರ ದೃಷ್ಟಿಕೋನ ಸರ್ವೋದಯ ಸಮನ್ವಯ ಪೂರ್ಣದೃಷ್ಟಿ.

ಕುವೆಂಪು ಅವರ ಬದುಕು ಋಷಿ ಬದುಕು ಜನಜೀವನದ ಸರಳತೆ ಕಲ್ಯಾಣ ಸರ್ವೋದಯ ಸಮನ್ವಯತೆ ಅವರ ಸಾಹಿತ್ಯ ಮರೆಯುತ್ತದೆ. ತರತರದ ಪರಿಮಳವು ಲೇಪಿಸಿ ಕೊಂಡವರೂ ನಾಮ ಮುದ್ರ ವಿಭೂತಿ ಧರಿಸಿಕೊಂಡವರೂ ಹೊಲಗದ್ದೆಗಳಲ್ಲಿ ಬೆವರು ಸುರಿಸಿ, ಮಣ್ಣು ಗೊಬ್ಬರ ಬಳಿದುಕೊಂಡ ರೈತನಿಗಿಂತ ಮೇಲೆಂಬ ಬಾವ ತುಂಬಿಕೊಂಡವರು ತಾವು ತಿನ್ನುವ ಅನ್ನ ತಾವು ಲೇಪಿಸಿಕೊಂಡ ತರತರದ ಲೇಪಿನ ಮಣ್ಣಿನಿಂದಲೇ ಬಂದವು. ಎಂಬುದನ್ನು ನೆನೆಯುವುದಿಲ್ಲ ಸಮಾನತೆಯ ಸಾನ್ನಿದ್ಯಕ್ಕೆ ಶರಣಾಗಲೇಬೇಕು ನೇಗಿಲ ಕುಳ ಕೊಬ್ಬಿದವರ ನೆತ್ತಿಯನ್ನುತ್ತು ಬತ್ತವನ್ನೂ ಬೆಳೆಯುವ ಹೊತ್ತು ಹತ್ತಿರ ಹತ್ತಿರ ಬರುತ್ತಿದೆ. ಇಂದು ಪ್ರಚಲಿತಗೊಳ್ಳುತ್ತಿರುವ ಸಮತಾವಾದದ ಸತ್ಯವನ್ನು ಮೂವತ್ತು ವರ್ಷಗಳ ಹಿಂದೆಯೇ ಕುವೆಂಪು ಗೊಬ್ಬರ ಕವನದಲ್ಲಿ ನುಡಿದುಬಿಟ್ಟಿದ್ದಾರೆ.

ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಮತ್ತು ಕಾನೂರು ಹೆಗ್ಗಡಿತಿ ಕಾದಂಬರಿಗಳು ಕನ್ನಡದ ಕಾದಂಬರಿ ಪ್ರಕಾರದ ಎರಡು ಕಣ್ಣುಗಳು, ಕನ್ನಡ ಸಾಹಿತ್ಯದ ಕಾದಂಬರಿ ಪರಂಪರೆಯ ಲೋಕಕ್ಕೆ ತೆರೆದ ದೃಷ್ಟಿಗಳು ಈ ಕಾದಂಬರಿಗಳ ಸ್ವರೂಪ ಗಾತ್ರದಲ್ಲಾಗಲಿ ವಸ್ತು ಮಹತ್ವದಲ್ಲಾಗಲಿ ಬೃಹತ್ತಾದುದು.

ಮಲೆನಾಡಿನ ಜೀವನವನ್ನು ಅದರ ಸುತ್ತಲಿನ ವಾಸ್ತವಿಕ ಬದುಕನ್ನು ಒಳಗೊಂಡ ಈ ಮಹಾಕಾದಂಬರಿಗಳು ಕನ್ನಡ ಸಾಹಿತ್ಯಕ್ಕೆ ಕುವೆಂಪು ಕೊಟ್ಟ ಅಮೂಲ್ಯ ವಿಶಿಷ್ಟ ಕೃತಿಗಳು.

ಮಲೆಗಳಲ್ಲಿ ಮದುಮಗಳು ಕಾದಂಬರಿಯ ಕ್ಷೇತ್ರ ತೀರ್ಥಹಳ್ಳಿ ತಾಲ್ಲೂಕಿನ ಮೇಗರವಳ್ಳಿ ಸೀಮೆಯ ದುರ್ಗಮವಾದ ಪರ್ವತ ಅರಣ್ಯಗಳ ನೆಲೆಬೀಡು ಈ ಮಲೆನಾಡ ಮಡಿಲಲ್ಲಿರುವ ಸಿಂಭಾವಿ, ಲಕ್ಕುಂದ, ಮೇಗರವಳ್ಳಿ, ಹಳೆಮನೆ, ಕೋಣೂರು, ಹೂವಳ್ಳಿ, ಇವುಗಳ ಶ್ರೀಸಾಮಾನ್ಯರ ಬದುಕು ಈ ಕಾದಂಬರಿಯ ವಸ್ತು.

ಕಾದಂಬರಿಯ ಆರಂಭ ಹೊಲೆಯರ ಗುತ್ತಿಯ ಪ್ರಯಾಣ ದಿಂದ ಸಿಂಭಾವಿ ಭರಮ್ಮೆ ಹೆಗ್ಗಡೆಯವರ ದೊಡ್ಡ ಚೌಕಿ ಮನೆಯ ಹೆಬ್ಬಾಗಿಲು ದಾಟಿದ ಅವರ ಜೀತದಾಳು ಹೊಲೆಯರ ನಾಯಿಗುತ್ತಿ ಆಕಾಶದ ಕಡೆ ನೋಡಿ ತನ್ನ ಕುಳ್ಳ ದೇಹದ ಕುಳುಗಾಲು ಬೀಸಿ ಬೀಸಿ ಹಾಕುತ್ತ ಹೊರಡುವುದರಿಂದ ಆರಂಭವಾಗುವ ಈ ಕಾದಂಬರಿಯ ಪ್ರಪಂಚ ಓದುಗನಿಗೆ ತೆರೆದುಕೊಳ್ಳುತ್ತಾ ಹೋಗುತ್ತದೆ.

ಕುವೆಂಪು ಸಾಹಿತ್ಯ ರೈತನ ಸ್ಥಿತಿಯನ್ನು ಕುರಿತದ್ದು ರೈತನ ಗುಡಿಸಲ್ಲಿದ್ದ ಸ್ಥಳದ ಸುತ್ತಮುತ್ತಣ ಪ್ರಕೃತಿ ಸೌಂಧರ್ಯದ ವರ್ಣನೆ ಪ್ರಾಣಿ ಪಕ್ಷಿಗಳ ಸಹಯೋಗದೊಂದಿಗೆ ಕುವೆಂಪು ರೈತನ ಜೀವನ ಪ್ರಶಾಂತ ವಾತಾವರಣವನ್ನು ಚಿತ್ರಿಸಿದ್ದಾರೆ.

ಬಡ ಶ್ರಮಜೀವಂತ ಬದುಕನ್ನು ಕುರಿತ ಕವಿಯ ಸಹಾನುಭೂತಿ ಅನುಕಂಪ ಪ್ರಶಂಸೆಗಳಲ್ಲಿ ಮೂಡುತ್ತದೆ.

ಕುವೆಂಪು ಅವರ ಕಾವ್ಯಶಕ್ತಿ ಕನ್ನಡದ ಕಡೆಗೆ ವಾಲುತ್ತಿದ್ದ ಸಂದರ್ಭದಲ್ಲಿ ಒಕ್ಕಲಿಗರ ಹಾಡು ಎಂಬ ಕವಿತೆ ಅವರ ಲೇಖನಿಯಿಂದ ಮೂಡುತ್ತದೆ.

" ಒಕ್ಕಲಿಗರೆ ಹೊತ್ತಾಯಿತು ಏಳಿ
ಕುಕ್ಕುಟಗಳು ಕೂಗುವುದು ಕೇಳಿ
ಮೋಡ ನಿಕರವನ್ನು ಕೆಂಪಗೆ ಮಾಡಿ

ಮೂಡಣ ರವಿಯುದಯಿಸುವನು ನೋಡಿ

ಮೇದಿನಿಯೆಮೆನು ಕರೆವಳು ಕೂಗಿ

ಆದರದಿಂ ತಾಯಿಗೆ ತಲೆಬಾಗಿ....(ನೆನಪಿನ ದೋಣಿಯಲ್ಲಿ ಪು: ೫೧೧)

ಹೀಗೆ ಕುವೆಂಪು ಒಕ್ಕಲಿಗರನ್ನು ಎಬ್ಬಿಸಿ ದಿನನಿತ್ಯದ ಕೃಷಿ ಕಾರ್ಯಕ್ಕೆ ತೊಡಗುವ ಪರಿಯನ್ನು ಮೇಲಿನ ಕವನದ ಮೂಲಕ ಆತನನ್ನು ಎಚ್ಚರಿಸುತ್ತಾರೆ.

೧೯೨೬ರಲ್ಲಿ ಪ್ರಕಟವಾದ ಹಾಳೂರು ನೀಳ್ಗಕವನ ಒಂದು ಗ್ರಾಮಾಯಣದಂತಿದೆ. ಕನ್ನಡ ನಾಡಿನ ಮಣ್ಣಿನ ಮಕ್ಕಳ ಹಳ್ಳಿಗಳ ಅವನತಿಯ ಚಿತ್ರಣವನ್ನು ನೀಡುತ್ತದೆ.

"ಹಾಳೂರು ಇದು ನಮ್ಮ ರೈತರಿಹ ಬೀಡು

ದೇಶಕನ್ನವ ನೀಡುವವರಿಗೆಲ್ಲ ಗುಂಡು

ನಮ್ಮೂರು ದಿನದಿನವು ಆಗುತಿದೆ ಕಾಡು"

ಬೇಸಾಯವು ಒಂದು ತಪಸ್ಸೆಂದು ಒಂದು ಯೋಗವೆಂದು ತಿಳಿದು ರೈತನನ್ನು ಮೊಟ್ಟಮೊದಲು ನೇಗಿಲಯೋಗಿ ಎಂದು ಕರೆದವರು ಕುವೆಂಪು ಹಿಮಾಲಯದಲ್ಲಿ ತಪಸ್ಯಾನ್ಯ ಚರಿಸುವ ಮಹಾಋಷಿಗಳ ತಪಸ್ಸಿಗಿಂತ ನೇಗಿಲಯೋಗಿಯ ತಪಸ್ಸು ಕಿಳಲ್ಲವೆಂದು ಕವಿಯ ಅಭಿಮತ ಪ್ರಪಂಚದಲ್ಲಿ ಯಾವ ಸಾಹಿತ್ಯದಲ್ಲಿಯೂ ರೈತನಿಗೆ ಇಂತಹ ಪಟ್ಟ ದೊರೆತಿಲ್ಲವೆನ್ನಬಹುದು. ನೇಗಿಲಯೋಗಿ, ಕೊಳಲು ಕವಿತೆ ಜಗತ್ತಿನ ರೈತವರ್ಗಕೆತ್ತಿದ ಆರತಿಯಾಗಿದೆ.

ನೇಗಿಲ ಕುಲದೊಳಗಡಗಿದೆ ಕರ್ಮ

ನೇಗಿಲ ಮೇಲೆಯೆ ನಿಂತಿದೆ ಧರ್ಮ

ಎನ್ನುವ ಕವಿಯ ಮಂತ್ರ ಸಾಮಾಜಿಕ ಮೌಲ್ಯಗಳನ್ನು ಒಳಗೊಂಡಿದೆ.

ಜಗತ್ತು ಸುಖವಾಗಿರಲೆಂದು ತನ್ನನ್ನು ತಾನೆ ಬೇಳ್ದುಕೊಂಡ ಬಲಿ ರೈತನಿಗೆ ಅವನು ತನ್ನ ನಮನಗಳನ್ನು ಸಲ್ಲಿಸುತ್ತಾನೆ. ನಾಡಿನ ಹಣೆಯ ಬರಹವನ್ನು ಬರೆಯುವ ಲೇಖನಿಯೇ ನೇಗಿಲ ಕುಳ ಆ ಹೊಲದ ಗಾಂಧಿಯ ದೇಶಭಕ್ತಿ ನೆಹರೂ ದೇಶಭಕ್ತಿಗಿಂತ ಕಡಿಮೆ ಏನಲ್ಲ ಎಂಬುದಾಗಿ ಕುವೆಂಪು ಉಚ್ಚರಿಸುತ್ತಾರೆ.

ಬರಿಯ ಉಳುವ ಕುಳದ ಗೆರೆಯೇ

ನಾಡ ಹಣೆಯ ಬರಹ ಬರೆವೆ

ಹೊಲದ ಗಾಂಧಿ ನೆಲದ ನಾಂದಿ

ನೆಹರುಗೇನು ಕಡಿಮೆಯೇನು

ನಿನ್ನ ದೇಶಭಕ್ತಿ (ಕುಳದ ಕಲಿಗೆ ಪ್ರೇತಕ್ಯೂ ಪು-೧೫)

ರೈತನನ್ನು ಕುರಿತ ಇಂತಹ ಭಾವನೆಗಳು ಜಗತ್ತಿನ ಸಾಹಿತ್ಯದಲ್ಲಿ ದೊರೆಯುವುದು ಕಡಿಮೆ ರೈತ ಸೃಜನಶೀಲ ಕಲೆಗಾರ ಅವನು ಉಳುತ್ತಲೇ ಹಾಡು ಕಟ್ಟುತ್ತಾನೆ. ಹಾಡುತ್ತೆವೆ ಉಳುತ್ತಾನೆ. ಎತ್ತು ಕುಳ ಸುತ್ತಲಿನ ನಿಸರ್ಗ ಅವನ ಕಲೆಗಾರಿಕೆಗೆ ಪ್ರೇರಣೆಯನ್ನು ಒದಗಿಸುತ್ತದೆ. ಅವನ ಹಾಡಿನಲ್ಲಿ ಗೊಬ್ಬರಕ್ಕಿಂತ ಮಿಗಿಲಾದ ಫಲವತ್ತನ್ನೂ ಕುಳದ ಹರಿತವನ್ನೂ ಎತ್ತುಗಳ ಉಲ್ಲಾಸವನ್ನೂ ಕಣಜದ ಕಿಕ್ಕಿರಿತವನ್ನೂ ಕವಿ ಕಾಣುತ್ತಾನೆ (ಹಾಡು ನೇಗಿಲಯೋಗಿ ಪುಟ-೧೪)

ಯಾವ ಕಾಫಿಕೇನು ಕಡಿಮೆ

ರೈತನ ಈ ಹಸುರು ದುಡಿಮೆ

ಶಿಶುರ್ಪರಿನ ಪಚ್ಚೆ ಪಡಿಮೆ

(ನಿತ್ಯಶಾಲಿಕ್ಷೇತ್ರ ಕದರಡಕ ಪು-೬೮)

ಹೀಗೆ ಕುವೆಂಪು ಅವರ ಈ ಸಾಲುಗಳಲ್ಲಿ ರೈತನ ಹಿರಿಮೆ ಅವನ ಕೃಷಿ ಪ್ರಾವೀಣ್ಯತೆ ಅಭಿವ್ಯಕ್ತಗೊಳ್ಳುತ್ತವೆ.

ರೈತನ ಹೃದಯವನ್ನು ಪ್ರವೇಶಿಸಿ ಅದರ ಒಳಗೆ ಇರುವ ಬವಣೆಗಳಿಗೆ ಕವಿಯ ಲೇಖನಿ ಮಹತ್ವವನ್ನು ನೀಡುತ್ತವೆ. ಸ್ವಾತಂತ್ರ್ಯೋದಯಕ್ಕೆ ೭-೮ ವರ್ಷಗಳ ಮುಂಚಿತವಾಗಿ ಅವರು ರಚಿಸಿದ ರೈತನ ದೃಷ್ಟಿ ಎಂಬ ಕವಿತೆ ಎಲ್ಲಾ ಕಾಲದ ಎಲ್ಲಾ ದೇಶಗಳ ರೈತರ ಬವಣೆಯನ್ನು ಕುರಿತದ್ದಾಗಿದೆ. ಸುಲಿಗೆ ಎಲ್ಲಾ ದೇಶಗಳ ರೈತರು ಯಾವಾಗಲೂ ಅನುಭವಿಸ ಬೇಕಾದ ಯಮಯಾತನೆ ಅನುಭವವನ್ನೂ ಕವಿ ರೈತನ ಬಾಯಿಂದಲೆ ಹೊರೆಪಡಿಸುತ್ತಾನೆ "ಕರಿಯರದೊ ಬಿಳಿಯರದೊ ಯಾರಾದಾದರೆ ಏನು? ಸಾಮ್ರಾಜ್ಯವಾದಗಂ ಸುಲಿಗೆ ರೈತರಿಗೆ"

ಕುವೆಂಪು ರೈತನ ಬಗ್ಗೆ ತಾಳಿರುವ ನಿಲುವು ಅಸಾಧಾರಣವಾದುದು.

"ಬಗೆಯಲು ವೇದವ ರೈತನ ನೇಗಿಲು

ತೆರೆವುದು ದಿನ ದಿನ ಸಗ್ಗದ ಬಾಗಿಲು"

ಎನ್ನುವಲ್ಲಿ ಕುವೆಂಪುರವರು ರೈತನನ್ನು ಕುರಿತು ರೈತನೊಬ್ಬ ಋಷಿ ಪರಮತಪಸ್ವಿ ಎಂಬುದಾಗಿ ಉಚ್ಚರಿಸುತ್ತಾರೆ. ವರ್ಷ-ವರ್ಷವೂ ಬರುವ ಸುಗ್ಗಿ ರೈತನ ಜೀವನದಲ್ಲಿ ಅತ್ಯಂತ

ಹರ್ಷದಾಯಕವಾದ ಘಟನೆ ಇಡೀ ವರ್ಷದ ಕಾಯಕ ತಪಸ್ಸಿನ ಫಲ ಕಣ್ಮುಂದೆ ಮೂರ್ತಿವತ್ತಾಗಿ ನೆರೆಯುವ ವಿಶೇಷ ಸಂದರ್ಭ ಸಗ್ಗಮ ಇಳೆಗಿಳಿದಂತಿರುವ ಸುಗ್ಗಿಗೆ ಹೆಗಲಣೆಯಾದ ಹಬ್ಬ ಮತ್ತೊಂದಿಲ್ಲಾ ಸುಗ್ಗಿ ಬರುವ ಆರಂಭದಲ್ಲಿ ಚರಾ-ಚರ ವಸ್ತುಗಳು ನಿಸಗದಲ್ಲಿ ಹಗ್ಗುತ್ತವೆ.

"ಅಡಿಯಗೆಜ್ಜೆ ನಡುಗೆ ಹೆಜ್ಜೆಯಿಡುತ ಸುಗ್ಗು ಬರುತ್ತಿದೆ
ಸುಗ್ಗಿ ಬರ ಹಿಗ್ಗಿತಿರೆ ಸಗ್ಗ ಸೊಗವ ತರುತಿದೆ"

ಹೀಗೆ ಸುಗ್ಗಿ ಬಂತೆಂದರೆ ರೈತನಿಗೆ ಹಬ್ಬವೋ ಹಬ್ಬ ಅದು ರೈತನ ಹಬ್ಬ ಹೊನ್ನಿನ ಹೊಲಗಳು ಮರೆಯುತ್ತಿರುವಾಗ ಚಿನ್ನದ ತೆನೆಗಳು ತೂಗುತ್ತಿರುವಾಗ ಪಕ್ಷಿ-ಸಂಕುಲ ಹಾಡಿ-ಪಾಡಿ ಸ್ವಾಗತ ನೀಡುವಾಗ ಹೂ-ಹಸುರುಗಳಿಂದ ಬಳುಕು ಬೆಡಗಿನಿಂದ ಬನಗಳು ನಲಿಯುವಾಗ ಮುಗಿಲಿನ ನೆಂಟರಾದ ಮಣ್ಣಿನ ಮಕ್ಕಳು ಕುಣಿಯುತ್ತಾ ಹಾಡುತ್ತಾರೆ.

ನಮ್ಮ ಕೈಗಳೆ ಭೂಮಿಗಿಳಿದಿಹ ಕಲ್ಪವೃಕ್ಷಗಳು
ನಮ್ಮ ಕಾಲುಗಳಿಳೆಗೆ ಬಂದಿಹ ಕಾಮಧೇನುಗಳು
ಕೆಸರು ದೂಳುಗಳಿಂದ ಕೆದರಿದ
ನಮ್ಮ ತಲೆ ವೈಕುಂಡವು
ಬಿಸಿಲ ದೇಣಿಗೆ ಚಂದು ಕಂದಿಹ
ನಮ್ಮ ಎದೆ ಕೈಲಾಸವು
ನಮ್ಮ ಬೆವರಿಳಿದಿಳೆಗೆ ಬೀಳುವ
ವರೆಗು ಗಂಗೆಯು ಬತ್ತೆಳು
ನಮ್ಮ ಕರ್ಮದ ಮಂತ್ರದಿಂದಲೆ
ಬರದ ಮೊರಿಯು ಸುತ್ತೆಳು

ಎಂಬ ಆತ್ಮ ವಿಶ್ವಾಸ ಆತ್ಮ ಗೌರವಗಳು ಮನಸ್ಸಿನಲ್ಲಿ ಮೂಡಿದಾಗ ರೈತ ಸಮಾಜದಲ್ಲಿ ಎತ್ತರಕ್ಕೆ ಏರುತ್ತಾನೆಂಬುದು ಕವಿಯ ಆಶಯ.

ಉತ್ತು ಬಿತ್ತುವುದನ್ನ ಜಪತಪ ಗೇಮೆಗಾಯಿತ್ರಿ ನಮ್ಮ ಬಾಳ್ಮೇಯು ಕೆಡದೆ ಬೆಳಗುವ ಮಂಗಳಾರತಿಯು ಎಂಬ ಕಿಚ್ಚ ರೈತನಲ್ಲಿ ಮೂಡಿದಾಗ ಅಧಿಕಾರಷಾಹಿಗಾಗಲಿ ಪುರೋಹಿತಷಾಹಿಗಾಗಲಿ ಜಗ್ಗದೆ ಕುಗ್ಗದೆ ಮೇಳೇಳಲು ಸಾಧ್ಯವಾಗುತ್ತವೆ. ಶತಮಾನಗಳಿಂದ ದುಡಿಯುತ್ತಿರುವ ರೈತನ ಹೃದಯದಲ್ಲಿ ಕೆಚ್ಚನ್ನು ಮೂಡಿಸುವ ಸಲುವಾಗಿ ಕುವೆಂಪು ರೈತನನ್ನು ಸ್ತುತಿಸುತ್ತಾರೆ. ಲೋಕರಕ್ಷಕ ನಿಚ್ಚ ನೆಲೆಸಿರುವ ಅವನ ಚಲಿಸುವ ಗುಡಿಯೆಂದು ಬಣ್ಣಿಸುತಾರೆ. ಹೀಗೆ ತಮ್ಮ ಕವಿತೆಗಳ ಮೂಲಕ ರೈತರ ಬದುಕಿನ ಹಿರಿಮೆಯನ್ನು ಕಟ್ಟಿಕೊಟ್ಟಿದ್ದಾರೆ.

ಕುವೆಂಪುರವರು ಕನ್ನಡ ನವೋದಯ ಕಾವ್ಯಕ್ಕೆ ವಿಶ್ವಮಾನ್ಯತೆಯನ್ನು ದೊರಕಿಸಿಕೊಟ್ಟವರು ಸದಾಕಾಲವೂ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡವರು. ಸ್ನೇಹ-ಭ್ರಾತೃತ್ವ-ತ್ಯಾಗ, ನಿಸ್ವಾರ್ಥ, ಹೃದಯವಂತಿಕೆ ಕರುಣೆ-ಪ್ರೀತಿ, ನಮ್ಮಲ್ಲಿ ಬೆಳೆಯಬೇಕು. ಪ್ರದೇಶದಿಂದಾಚೆಗೂ ವಿಶ್ವಮಾನವಪ್ರಜ್ಞೆ ಹರಡಬೇಕಾಗಿದೆ. ಜಗತ್ತಿನ ಎಲ್ಲಾ ಜನರ ಮನದಲ್ಲಿ ಅಡಗಿರುವುದು " ವಿಶ್ವಮಾನವ ಪ್ರಜ್ಞೆ".

ಬಡವ-ಬಲ್ಲಿಗ, ಬಿಳಿಯ-ಕರಿಯ, ಉಚ್ಚ-ನೀಚ, ಈ ರೀತಿಯ ತಾರತಮ್ಯ ಬಾವನೆಗಳು ಸಮಾಜದಲ್ಲಿ ಬೇರುಬಿಟ್ಟಿವೆ. ಇವನ್ನು ತೊಡೆದು ಹಾಕಲು ಕುವೆಂಪುರವರು ಜಗತ್ತಿಗೆ ಸಂದೇಶ ನೀಡುತ್ತಾರೆ. "ಮಾನವೀಯ ಮೌಲ್ಯಗಳು" ಬೆಳೆಯುವುದೆಂದು ಪ್ರಶ್ನಿಸುತ್ತಾರೆ.

ಜಡ್ಡುಗಟ್ಟಿದ ಸಮಾಜದಲ್ಲಿ ತಮ್ಮ ಕೃತಿಗಳ ಮೂಲಕ ಜನರ ಮನದಲ್ಲಿ ಹೊಸಪ್ರಜ್ಞೆಯನ್ನು ಮಾಡಿಸಲು ಶ್ರಮಿಸಿದವರು. ತಮ್ಮ ಕೃತಿಗಳಲ್ಲಿ ಸಮರ್ಥವಾಗಿ ಉಪದೇಶಿಸಿರುವ ಸಂದೇಶ ಸಾರವನ್ನು ಇಂದಿನವರು ಗ್ರಹಿಸಿ ತಮ್ಮ ಜೀವನ ವಿಧಾನಗಳಿಗೆ ಅಳವಡಿಸಿಕೊಂಡಾಗ ಮಾತ್ರ ಸಮಾಜದ ಏಳಿಗೆ ಸಾಧ್ಯ-ಎಂಬುದು ಅವರ ಸ್ಪಷ್ಟ ನಿಲುವು ಈ ವಿಶ್ವ ಸಮಾಜದಲ್ಲಿ ಪ್ರತಿಯೊಬ್ಬ ಜೀವಿಯೂ "ವಿಶ್ವಮಾನವನೇ" ಈ ದೃಷ್ಟಿಯಿಂದ ಭೂತಕಾಲದಲ್ಲಿ ಬದುಕುತ್ತಿದ್ದೇವೆ. ಇನ್ನು ಮುಂದೆ ಭವಿಷ್ಯದಲ್ಲಿ ಹೊಸ ಬೆಳಕನ್ನು ಕಾಣಬೇಕು. ಎಂಬುದು ಕುವೆಂಪು ಅವರ ಸಮರ್ಥನೀಯ ನಿಲುವು.

ಕುವೆಂಪು ಸಾಹಿತ್ಯದಲ್ಲಿ ವಾಸ್ತಾವಾನುಭವ ಹೆಪ್ಪುಗಟ್ಟಿದೆ "ವಿಶ್ವಮಾನವಪ್ರಜ್ಞೆ" ಚೇತನಗೊಂಡ, ಲೋಕಕಲ್ಯಾಣವಾಗಬೇಕು.

ಕುವೆಂಪು ದರ್ಶನದಲ್ಲಿ ವಿಜ್ಞಾನ-ವೇದಾಂತ-ವೈಚಾರಿಕತೆಗಳ ಸಾಮರಸ್ಯವನ್ನು ಕಾಣಬಹುದು. ಕುವೆಂಪುರವರ ಕಾದಂಬರಿಗಳು ನಾಟಕಗಳು ಮಹಾಕಾವ್ಯಗಳಲ್ಲಿ ವೈಜ್ಞಾನಿಕ ವಿಚಾರಗಳು ಸಾಮಾಜಿಕ ಪ್ರಜ್ಞೆ ದಾರ್ಶನಿಕ ವಿಚಾರಗಳು, ಪ್ರೀತಿ-ಪ್ರೇಮ-ಪ್ರಣಯ, ಒಲವು-ಚೆಲುವು, ಆಧ್ಯಾತ್ಮ-ಇನ್ನಿತರ ಹಲವಾರು ಸಂಗತಿಗಳು ಹೆಣೆದುಕೊಂಡಿವೆ. ಇವು ಜನಜೀವನದಲ್ಲಿ - ಪ್ರಜ್ಞೆಯ ಸಂಕೇತಗಳಾಗಿವೆ.

ಕುವೆಂಪುರವರು ಪ್ರಕೃತಿಯ ಆರಾಧಕರು, ಮಲೆನಾಡಿನ ನಿಸರ್ಗದ ಮಡಿಲಲ್ಲಿ ನಿಸರ್ಗದ ಅನಂತ ಆಯಾಮಗಳನ್ನು ತಮ್ಮ ಮನೋಭೂಮಿಕೆಯಲ್ಲಿ ಸೆರೆಹಿಡಿದವರು ಮನುಕುಲಕ್ಕೆ ಪ್ರಕೃತಿ ಸೊಬಗನ್ನು ಅದರಲ್ಲಿನ ಅನಂತ ಮಗ್ಗಲುಗಳನ್ನು ತಮ್ಮ ಸಾಹಿತ್ಯದ ಮೂಲಕ ಜಗತ್ತಿಗೆ ತೋರಿಸಿದ್ದಾರೆ. ಅವರ ಕೃತಿಗಳಲ್ಲಿ "ವಿಶ್ವಮಾನವ ಪ್ರಜ್ಞೆಯ" ಸಮಗ್ರ ಅನುಭವದ ಅವಧಾರಣೆಯಿದೆ. ತಮ್ಮ ಬರವಣಿಗೆಯಿಂದ ಸಮಾಜದಲ್ಲಿ ಹೊಸಪ್ರಜ್ಞೆಯನ್ನು ಮೂಡಿಸಿದಂತವರು. ಅಂಧಕಾರವನ್ನು ಅಳಿಸಲು ಶ್ರಮಿಸಿದವರು.

ಪ್ರಕೃತಿಯ ಅಂತರಾಳವನ್ನು ಹೊಕ್ಕಿ ಚಿತ್ರಿಸುವುದು–ಅವರ ಪ್ರತಿಭೆ ನಿಸರ್ಗದ ಬಗೆಯ ಬಗೆ–ಅವರ ಕಾವ್ಯದ ತಿರುಳು ಸಮನ್ವಯ ಕವಿ ಕುವೆಂಪುರವರು.

ಸಮಾನತೆ ಭ್ರಾತೃತ್ವ–ಸಾಮಾಜಿಕ ಪ್ರಜ್ಞೆಯನ್ನು ಜನರಲ್ಲಿ ಮೂಡಿಸಿದವರು "ಮನುಷ್ಯಜಾತಿ ತಾನೊಂದ ವಲಂ" ಎಂಬ ಪಂಪನ ಅನನ್ಯ ವಾಣಿಗೆ ಪ್ರತಿಯಾಗಿ ಮನುಕುಲಕ್ಕೆ ಕುವೆಂಪು "ವಿಶ್ವಮಾನವ ಪ್ರಜ್ಞೆ"ಯನ್ನು ವಿಶಾಲ ತತ್ವದಿಂದ ಅಭಿವ್ಯಕ್ತಿಸಿದ್ದಾರೆ.

"ವಿಶ್ವಮಾನವ ಸಂದೇಶವನ್ನು ಸಾರಿದ 'ಜಗದ ಕವಿ' ಎಂಬ ಬಿರುದು ಅವರಿಗೆ ಸಲ್ಲುತ್ತದೆ. ವಿಶ್ವವಿಚಾರಧಾರೆ ಕುವೆಂಪು ಸಾಹಿತ್ಯದ ವಿಶಿಷ್ಟ ಲಕ್ಷಣ 'ದಾರ್ಶನಿಕ ವಿಚಾರಗಳು' ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ, ಲೌಕಿಕ, ಆಧ್ಯಾತ್ಮ, ಪ್ರಾಪಂಚಿಕ, ವಿಷಯಗಳನ್ನು ಒಳಗೊಂಡು ಕುವೆಂಪು ಸಾಹಿತ್ಯ ಮಾರ್ಗದರ್ಶನ ನೀಡುವ ಆದರ್ಶಪ್ರಾಯವಾಗಿದೆ.

ಕುವೆಂಪು ನಿಸರ್ಗದ ಶಿಶು. ದರ್ಶನವೇ ಅವರ ಮತ, 'ಕಾವ್ಯವೇ ಅವರ ಕಥೆ, ಲೋಕಹಿತರಕ್ಷಣೆಯೇ ಅವರ ವ್ರತ.' ಅವರೆಂದು ನಿಸರ್ಗದ ಒಂಬು ಅವಿಭಾಜ್ಯ ಭಾಗ. ಅದರಂತೆ ನಿಸರ್ಗ ಸಹ ಅವರ ಜೀವನದ ಅವಿಭಾಜ್ಯ ಭಾಗವಾಗುತ್ತದೆ.

ಆಧುನಿಕ ಜಗತ್ತಿನಲ್ಲಿ ಹೆಣ್ಣು–ಗಂಡುಗಳ ಸಂಬಂಧ ವಿಕಾಸಗೊಂಡಿರುವ ಸಂದರ್ಭದಲ್ಲಿ ಇತಿಹಾಸದ ಹಿನ್ನಲೆಯಲ್ಲಿ ಕುವೆಂಪು ಕಂಡಿರುವ ದಾರ್ಶನಿಕ ಸತ್ಯವನ್ನು ಪರಿಶೀಲಿಸಬಹುದು.

ತಪಸ್ಸು–ಪೂಜೆ–ಮತ್ತು ಪ್ರಾರ್ಥನೆ ಕುವೆಂಪು ಅವರ ದಾರ್ಶನಿಕ ವೈಚಾರಿಕ ಸತ್ವ ಸಾಕ್ಷಾತ್ಕಾರದ ಗಂಗೋತ್ರಿಗಳೆಂದು ಹೇಳಬಹುದು. ಪ್ರಾರ್ಥನೆಗೆ ಸಂಬಂಧಿಸಿದಂತೆ ನೂರಾರು ಕವನಗಳನ್ನು ರಚಿಸಿದ್ದಾರೆ. ಕಾದಂಬರಿ–ನಾಟಕ–ಮಹಾಕಾವ್ಯಗಳಲ್ಲಿ ಅದೇ ಜೀವನಾಡಿಗಳೆಂಬಂತೆ ಹೆಣೆದುಕೊಂಡಿವೆ.

ಪ್ರಾರಂಭದಿಂದ ಸಿದ್ಧಿಯತನಕ ಕುವೆಂಪು ಅವರ ಆಧ್ಯಾತ್ಮ ಸಾಧನ ಮತ್ತು ಧಾರ್ಮಿಕ ಪ್ರಜ್ಞೆ ವಿಕಾಸಗೊಂಡಿದೆ.

ಕುವೆಂಪು ಸಾಹಿತ್ಯದಲ್ಲಿ ಸಸ್ಯಗಳೇ ದೊಡ್ಡದೊಂದು ಪ್ರಪಂಚ ಅವರ ಬದುಕಿನ ಭಾಗವಾಗಿರುವಂತೆ ಅವರ ಸಾಹಿತ್ಯದ ಅವಿಭಾಜ್ಯ ಅಂಗಗಳೂ ಆಗಿವೆ.

ಶ್ರೀ ಕುವೆಂಪು ಅವರ ಮಹಾಕಾವ್ಯ ಕಥೆಗಳು, ವಾಸ್ತವ ಸತ್ಯಗಳು ಅವರು ನೀಡಿರುವ ಸಂದೇಶಗಳು ನಿತ್ಯಸತ್ಯಗಳನ್ನು ಪ್ರತಿಬಿಂಬಿಸುವ – ಸತ್ಯಕಥನಗಳು.

ಕಾದಂಬರಿಗಳು – ನಾಟಕಗಳು, ಮಹಾಕಾವ್ಯಗಳನ್ನು ಕುರಿತು ಹೇಳುವಾಗ ಅಲ್ಲಿನ ವಾಸ್ತವ ಸಂಗತಿಗಳು, ಉಪದೇಶದ ಸತ್ಯ ಸಂಗತಿಗಳು, ವಿಶ್ವಮಾನವ ಪ್ರಜ್ಞೆಯ ಸಂಕೇತಗಳು.

ಕವನ ಸಂಗ್ರಹಗಳಾದ ಪಾಂಚಜನ್ಯ ಇಕ್ಷುಗಂಗೋತ್ರಿ, ಪಕ್ಷಿಕಾಶಿ, ಕೊಳಲು, ಸೋವಿಯತ್ ರಷ್ಯಾ–ಮುಂತಾದ ಕೃತಿಗಳು ಕೂಡಾ 'ವಿಶ್ವಮಾನವ ಪ್ರಜ್ಞೆಯ' ಅರಿವಿನ ಪರಿಕರಗಳು ಎಂದು ಹೇಳಬಹುದು. ಕುವೆಂಪು ತಮ್ಮ ಅಭಿವ್ಯಕ್ತಿಯಲ್ಲಿ ಪ್ರತಿಮೆಗಳ ಮೂಲಕ ಸಾಹಿತ್ಯದ ಅರ್ಥವನ್ನು ಪರಿಪೂರ್ಣಗೊಳಿಸಿದ್ದಾರೆ. ಅವರ ಚಿಲುಮೆಯ ಗೂಡು ಮಲೆನಾಡು, ಅವರು ತಮ್ಮ ಸೃಜನಶೀಲತೆಯನ್ನು ಕಾಪಾಡಿಕೊಳ್ಳುವುದೇ ಮಲೆನಾಡಿನ ದಟ್ಟ ಕಾಡುಗಳಲ್ಲಿ

ತಮ್ಮ ಕೃತಿಗಳಲ್ಲಿ ಸಮಾಜದಲ್ಲಿನ ಜಾತಿ, ಧರ್ಮ, ಮತ, ಮೇಲು–ಕೀಳು, ಉಚ್ಚ–ನೀಚ, ಉಳ್ಳವರು–ಬಡವರು, ಈ ಮೂಢ ನಂಬಿಕೆಗಳ ವಿರುದ್ಧ ಹರಿಹಾಯ್ದವರು. ನೈತಿಕ ಪ್ರಜ್ಞೆಯನ್ನು ಜನಮನದಲ್ಲಿ ಮಾಡಿಸಲು ಶ್ರಮಿಸಿದವರು.

ಮಹಾಕವಿ ಕುವೆಂಪುರವರು ತಮ್ಮ ಬರಹದಲ್ಲಿ ಆರೋಹಣವಾಗಿ ಪ್ರೀತಿ–ಸ್ನೇಹ–ಸಮರಸತ್ವ–ಸಮನ್ವಯ–ಬಾವೈಕ್ಯತೆಯನ್ನು ಮೂಡಿಸುವಂತಹ ಸಮೃದ್ಧ ಭಾವಗೀತೆಗಳನ್ನು ಕನ್ನಡಕ್ಕೆ ಕೊಟ್ಟಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ, ಕುವೆಂಪುರವರ ಪ್ರಣಯ ಗೀತೆಗಳು ಆಧ್ಯಾತ್ಮ–ಪ್ರಕೃತಿ–ಕ್ರಾಂತಿ–ಗೀತೆಗಳಲ್ಲೂ ಹಾಗೂ ಕಾದಂಬರಿಗಳು; ನಾಟಕಗಳು, ಮಹಾಕಾವ್ಯಗಳಲ್ಲಿ ಸಮಗ್ರ ಸಾಹಿತ್ಯದಲ್ಲಿ ವಿಶ್ವಮಾನವ ಪ್ರಜ್ಞೆ ಹಡಕವಾಗಿದೆ.

ರಾಷ್ಟ್ರೀಯತೆ, ರಾಷ್ಟ್ರಪ್ರೇಮ, ರಾಷ್ಟ್ರಪ್ರಜ್ಞೆ, ಅಷ್ಟೇ ಅಲ್ಲದೆ ತಾಯ್ನಾಡುಪ್ರೇಮ ತಾಯ್ನುಡಿಯಪ್ರೇಮ, ಎಲ್ಲಿ ವಿಶ್ವಮಾನತ್ವ, ವಿಶ್ವಪ್ರಜ್ಞೆ, ವಿಶ್ವಪ್ರೇಮ, ಅಂತರರಾಷ್ಟ್ರೀಯ ಬಾಂಧವ್ಯ–ಬ್ರಾತೃತ್ವ–ಇವು ಕುವೆಂಪು ಸಾಹಿತ್ಯದ ವಿಶ್ವಮಾನವ ಪ್ರಜ್ಞೆಯ ಸಂಕೇತಗಳು. "ಕನ್ನಡವೆನೆ ಕುಣಿದಾಡುವುದೆನ್ನದೆ ಕನ್ನಡವೆನೆ ಕಿವಿ ನಿಮಿರುವುದ. ಬಾಳುವುದೇತಕ ನುಡಿಯಲೆ ಜೀವ ಸಿರಿಗನ್ನಡದಲ್ಲಿ ಕವಿತೆಯ ಹಾಡೆ" ಎಂಬ ಕವಿ. ತನ್ನ ನಾಡನ್ನು "ಭಾರತ ಜನನಿಯ ತನುಜಾತೆಯಾಗಿ" – ಕಂಡದ್ದೇ ಕವಿ ಕುವೆಂಪು ಅವರ ರಾಷ್ಟ್ರೀಯತೆಯ ಸಂಕೇತ ಈ ವ್ಯಾಪ್ತಿ ಹಿರಿದಾಗಿದ್ದು. ಅವರ ಸಾಹಿತ್ಯದಲ್ಲಿ ಕಂಡುಬರುವುದು "ವಿಶ್ವಪ್ರಜ್ಞೆ" .... ಈ ಪ್ರಜ್ಞೆ ಅವರ ರಾಷ್ಟ್ರೀಯತೆಯ ಮೂಲ.

ಸಾಹಿತ್ಯವೆಂಬುದು "ರಸಾನುಭವದ ಸುಂದರವಾದ ಅಭಿವ್ಯಕ್ತಿ ಅದಕ್ಕೆ ಅದರದೇ ಆದ ಲಕ್ಷಣಗಳಿವೆ. ವಿಶಿಷ್ಟ ರೀತಿಯ ಬಂಧಗಳನ್ನು ಸಾಹಿತ್ಯ ಒಳಗೊಂಡಿದೆ.

"ಜ್ಞಾನಸಂಪಾದನೆ ಮತ್ತು ಜ್ಞಾನಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರೀ ಮಾದ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ ಅತ್ಯಾಕರ್ಷವೂ ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ ಬುದ್ಧಿ ಮನಸ್ಸುಗಳ ವರ್ದಕವೂ ಆದ ಅಪೂರ್ವ ಮಾಧ್ಯಮವೇ 'ಸಾಹಿತ್ಯ'.

ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ–ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಲಿಸುತ್ತಾ ತುಷ್ಟಿಗೊಳಿಸುತ್ತಾ ವಿಕಾಸಗೊಳಿಸುತ್ತಾ ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಸಾಹಿತ್ಯದ ಪರಮ ಗುರಿ.

ಸಾಹಿತ್ಯವೆಂದರೆ, ಶಬ್ದಾರ್ಥಗಳ ಸಹಿತತ್ವ – ಬರವಣಿಗೆಯ ರೂಪದಲ್ಲಿರುವ ಸುಂದರವಾದ ಅಭಿವ್ಯಕ್ತಿ.

"ಜೀವನ ವಿಕಾಸವಿಲ್ಲದ ಸಾಹಿತ್ಯದ ಉದಯುವು ಇಲ್ಲ. ವಿಕಾಸವೂ ಇಲ್ಲ. – ರಂ.ಶ್ರೀ. ಮುಗಳಿ

ಎಲ್ಲರನ್ನು ಎಲ್ಲಾ ಕಾಲದಲ್ಲಿಯೂ ಯಾವುದು ಸಂತೋಷಗಳಿಸುವುದೋ ಅದು ನಿಜವಾದ ಉದಾತ್ತವಾದ ಭವ್ಯವಾದ ಸಾಹಿತ್ಯ – "ಲಾಂಜಿನೆಸ್" ಇಂಗ್ಲೀಷಿನ 'Literature' ಎಂಬ ಶಬ್ಧದ ಸಂವಾದಿ ಶಬ್ಧ 'ಸಾಹಿತ್ಯ! ಪ್ರತಿಭಾಜನ್ಯವಾದದ್ದು ಸಾಹಿತ್ಯ.

ಕಾಲಾತೀತವಾದ ಒಂದು ಪ್ರಕ್ರಿಯೆ ಸಾಹಿತ್ಯ ಪರಂಪರಾಗತವಾದ ಮೌಲ್ಯಗಳನ್ನು ಮುಂದಿನ ಜನಾಂಗಕ್ಕೆ ಸಂರಕ್ಷಿಸಿಡುವಂಥ ಒಂದು ಮಾಧ್ಯಮವೇ ಸಾಹಿತ್ಯ.]

ಲೇಖಕನ ವೈಯಕ್ತಿಕ ಗುಣ ಸ್ವಭಾವ ಮತ್ತು ಕಾಣ್ಕೆಗಳಿಂದ ಮೂಡುವ ಭಾಷೆಯ ಭಂಗಿ ಸಾಹಿತ – ಓ.ಎಲ್.ಎನ್

ಅತಿಶಯವಾದದ್ದು ಉಳಿಯುತ್ತದೆ: ಎಂಬ ಡಾರ್ವಿನ್ನನ ಜೀವಶಾಸ್ತ್ರಕ್ಕೆ ಸಂಬಂಧಿಸಿದ ಸಿದ್ದಾಂತವು ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಏಕೆಂದರೆ ಸಾಹಿತ್ಯ ಬೇಸರವನ್ನುಂಟು ಮಾಡುವುದಿಲ್ಲ. ಅದು ಅಳಿಸುವಂತದಲ್ಲ 'ಇದು ನಿಚ್ಚಂಪೊಸತು ಅರ್ಣವಂಬೂಲ್ ಅತಿ ಗಂಭೀರಂ ಕವಿತ್ವಂ' ಎಂಬ ಪಂಪಕವಿಯ ಮಾತು ಸಾಹಿತ್ಯದ ನವನತ್ವವನ್ನು ಸೂಚಿಸುತ್ತದೆ.

ತಾನು ಪಡೆಯುವ ಪ್ರಾಪಂಚಿಕ ಅನುಭವಗಳನ್ನು ಆತ್ಮಾನಂದರೂಪವಾಗಿ ತಾನು ವ್ಯಂಜಿಸಬೇಕೆಂದಿರುವ ಭಾವನೆಗಳಿಗೆ ತಕ್ಕಂತೆ ಅರ್ಥಸಹಿತವಾದ ಶಬ್ಧಗಳಿಂದ ಮನಃ

ಬಹಿರಂಗಪಡಿಸುವ ಕಲಾ ಸೃಷ್ಟಿಯನ್ನು ನಾವು ಸಾಹಿತ್ಯವೆಂದು ಕರೆಯಬಹುದು. ಎಂಬುದಾಗಿ **ಪು.ತಿ.ನ.** ಅವರು ಹೇಳಿದ್ದಾರೆ. ಆಯಾ ಕಾಲದ ಜನರ ಆಚಾರ-ವಿಚಾರ, ಚಿಂತನೆ, ವಿಜ್ಞಾನ, ಇತಿಹಾಸ ಮುಂತಾದ ಸಾಂಸ್ಕೃತಿಕ ವಿಚಾರಗಳೆಲ್ಲವನ್ನು ಸಾಹಿತ್ಯದಲ್ಲಿ ಭಾವನೆಯ ಹದಕ್ಕೆ ತರಲು ಸಾಧ್ಯವಾಗುತ್ತದೆ. ಸಾಹಿತ್ಯ ಒಂದು ಯುಗ ಮನಸ್ಸಿನ ವಾಣಿ. ಒಂದು ರಾಷ್ಟ್ರದ ಜೀವಿತ ಕತೆ. ಸಾಹಿತ್ಯ ಆಯಾ ದೇಶಗಳ ಆಯಾ ಕಾಲಗಳ ಜನರ ಜೀವನ ಚಿತ್ರವನ್ನು ನೀಡುತ್ತದೆ. ರಾಮಾಯಣ, ಮಹಾಭಾರತ, ಈಲಿಯಡ್, ವಿಕ್ರಮಾರ್ಜುನವಿಜಯ, ಹ್ಯಾಮ್ಲೆಟ್, ಶಾಕುಂತಲ, ವಚನಗಳು ಮುಂತಾದ ಕೃತಿಗಳನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

ಒಟ್ಟಿನಲ್ಲಿ ಅಕ್ಷರ ರೂಪದಲ್ಲಿರುವ ರಸಾನುಭವದ ಸುಂದರವಾದ ಅಭಿವ್ಯಕ್ತಿ ಎಂಬುದು ಸಾಹಿತ್ಯದ ಸಾಮಾನ್ಯ ಸ್ವರೂಪವಾಗಿದೆ.

ಸಾಹಿತ್ಯ ಮುಖ್ಯವಾಗಿ ಎರಡು ಕಾರ್ಯ ನಿರ್ವಹಿಸುತ್ತದೆ. ಮೊದಲನೆಯದಾಗಿ ಸಾಹಿತ್ಯವು ಸತ್ಯವನ್ನು ಮನೋಹರವಾಗಿ ತೋರಿಸುತ್ತದೆ. ಎರಡನೇಯದಾಗಿ ಆ ಸತ್ವವನ್ನು ಸಹೃದಯರಿಗೆ ಕಾಣುವಂತೆ ಮಾಡುತ್ತದೆ. ವಿಶಾಲಾರ್ಥದಲ್ಲಿ ಸಾಹಿತ್ಯವನ್ನು ಜ್ಞಾನದಾಯಕವಾದ ಸಾಹಿತ್ಯ ಹಾಗೂ ಶಕ್ತಿದಾಯಕ ಸಾಹಿತ್ಯ ಎಂದು ಹೇಳುತ್ತಾರೆ. ತೌಕಿಕ, ಧಾರ್ಮಿಕ, ವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳು, ಕಥೆ, ಕಾದಂಬರಿ, ನಾಟಕ, ಕವಿತೆ, ಇದರ ಕಾರ್ಯ, ಚಲನೆ, ಇವೆಲ್ಲವು ಈ ಸಾಹಿತ್ಯಗಳೊಡನೆ ಸೇರಿಕೊಳ್ಳುತ್ತವೆ. ಹಾಗೆಯೇ "ಆಯುಶ" (Matter) ರೀತಿ ಅನಂದದಾಯಕತ್ವಗಳೆಂಬ ಗುಣಗಳು ಸಾಹಿತ್ಯದಲ್ಲಿ ವಿಶೇಷವಾಗಿರುತ್ತವೆ.

ಪದ್ಯರೂಪದಲ್ಲಿರುವ ಸಾಹಿತ್ಯವನ್ನು ಮಹಾಕಾವ್ಯ, ಖಂಡಕಾವ್ಯ, ಭಾವಗೀತೆ ಎಂದು ಗದ್ಯರೂಪದಲ್ಲಿರುವ ಸಾಹಿತ್ಯವನ್ನು ನಾಟಕ, ಸಣ್ಣಕತೆ ಕಾದಂಬರಿ, ಪ್ರಬಂಧ, ಆತ್ಮಚರಿತ್ರೆ, ಜೀವನಚರಿತ್ರೆ, ಪ್ರವಾಸ ಸಾಹಿತ್ಯ, ಎಂದು ವಿಭಾಗಿಸಬಹುದು.[೨]

ಕುವೆಂಪುರವರು ಈ ಎಲ್ಲಾ ಪ್ರಕಾರಗಳಲ್ಲೂ ಸಾಹಿತ್ಯ ರಚನೆ ಮಾಡಿದ್ದಾರೆ. ಸಮಗ್ರ ಮೂಲಭೂತ ಸರ್ವವ್ಯಾಪಿ ವಿಶ್ವವಿಚಾರಧಾರೆ ಕುವೆಂಪು ಸಾಹಿತ್ಯದ ವಿಶಿಷ್ಟ ಲಕ್ಷಣ. ಆಧ್ಯಾತ್ಮಿಕ-ಲೌಕಿಕ, 'ಧಾರ್ಮಿಕ-ಸಾಮಾಜಿಕ', 'ವೈಜ್ಞಾನಿಕ-ವೈಚಾರಿಕ', 'ಸಾಂಸಾರಿಕ-ಸನ್ಯಾಸಿಕ', 'ರಾಷ್ಟ್ರೀಯ-ಜಾಗತಿಕ', 'ಶೈಕ್ಷಣಿಕ-ರಾಜಕೀಯ', 'ಪ್ರೇಮ-ಪ್ರೀತಿ-ನೀತಿ', 'ನಿಸರ್ಗ-ನಾಡು-ನುಡಿ-ಸಂಸ್ಕೃತಿ', 'ಪ್ರಾಚೀನ-ಅರ್ವಾಚೀನ' ಇವೇ ಮೊದಲಾದ ನೂರಾರು ಸಾವಿರಾರು ವಿಷಯಗಳನ್ನು ಕುವೆಂಪು ಸಾಹಿತ್ಯ ಗರ್ಭೀಕರಿಸಿಕೊಂಡಿದೆ. ಸಕಲ ಸಾಹಿತ್ಯ ಪ್ರಕಾರಗಳನ್ನು ಯಶಸ್ವಿಯಾಗಿ ಬಳಸಿಕೊಂಡಿದೆ. ಈ ದೃಷ್ಟಿಯಿಂದ ಕುವೆಂಪು ಸಾಹಿತ್ಯದಲ್ಲಿ ಲೌಕಿಕ-ಅಲೌಕಿಕಗಳು, ಭೂತ-ವರ್ತಮಾನ-ಭವಿಷ್ಯಗಳು, ಕ್ರಾಂತಿ-ಶಾಂತಿಗಳು ಸಂಗಮಗೊಂಡಿವೆ.

"ಸಾಹಿತ್ಯ ಜನಜೀವನ-ಸಾಹಿತಿ-ಸಹೃದಂಯು": ಸಾಹಿತ್ಯ ಮತ್ತು ಜೀವನ ಅವಳಿ-ಜವಗಳಿದ್ದಂತೆ. ಸೂಕ್ಷ್ಮಮತಿಯಾದ ಸಾಹಿತಿಯು ಒಬ್ಬ ಸಮಾಜಜೀವಿ. ಸಾಹಿತಿಯಾದವನು ನೂರಾರು ಮುಖಗಳನ್ನು ಹುಡುಕಿ ಜೀವನದ ಅರಿವಿನ ಮೂರ್ತತೆಯನ್ನು ಹೆಚ್ಚಿಸುತ್ತಾನೆ. ನೀತಿ, ವೀರ, ತ್ಯಾಗ, ಶೌರ್ಯ, ಕಾಮ, ರತಿ, ದ್ವೇಷ, ತಿರಸ್ಕಾರ, ದುಃಖ, ದೈಹಿಕ ಶಕ್ತಿ ಸುಖ-ಸೂಗಸು ಹೀಗೆ ಜೀವನದಲ್ಲಿ ಹಲವಾರು ಮೌಲ್ಯಗಳಿವೆ. ಇವುಗಳ ಸ್ವರೂಪವನ್ನು ಸಾಹಿತಿಯು ಮನೋಜ್ಞವಾಗಿ ಚಿತ್ರಿಸಬಲ್ಲನು.

ಸಾಹಿತ್ಯಾಧ್ಯಯನದಿಂದ ಜೀವನವನ್ನು ಅರ್ಥೈಹಿಸುವ ಸವಿಯುವ ಸಂಸ್ಕಾರವನ್ನು ಪಡೆಯಬಹುದು. ಸಾಹಿತಿಯಾದವನು ಸ್ವತಂತ್ರವಾಗಿ ನಿಂತು ಮನುಷ್ಯನ ಮನೋಧರ್ಮಗಳ ಅರ್ಥವನ್ನು ಹುಡುಕುತ್ತಲೇ ವಾಗ್ವಾದಕ್ಕಿಳಿಯುತ್ತಾನೆ. ಒಂದು ಹಂತದಲ್ಲಿ ಮತ-ಧರ್ಮ-ತತ್ವ-ನೀತಿ ಶಾಖೆಗಳ ತಲವನ್ನು ಸ್ಪರ್ಶಿಸುತ್ತಾನೆ. ಜೀವನದ ಗತಿಯನ್ನು ಧ್ವನಿಸುತ್ತಾನೆ ಇದರಿಂದಲೇ ಕುವೆಂಪುರವರ 'ಗೊಬ್ಬರ', 'ಕಲ್ಕಿ', 'ಹೀರೆ-ಹೂ' ಕವಿತೆಗಳು ತುಂಬ ಪ್ರಿಯವಾಗುತ್ತವೆ.

(೨ ಅಬ್ದುಲ್ ಬಷೀರ್ -ಕಾವ್ಯಮೀಮಾಂಸ ಪು-೧೯೫-೨೦೪)

ಆಯಾ ಕಾಲದ ಜನಜೀವನ ಯಾವ ದಿಶೆಯಲ್ಲಿ ಸಾಗುತ್ತಿದೆ. ಅದರ ಗತಿ ಸಾಂಪ್ರದಾಯಿಕವೋ ಪ್ರಗತಿಪರವೋ ಎಂಬ ವಿವರಗಳನ್ನೂ ಮಾನವ ಜೀವನದ ಗುರಿಯೇನು ಎಂಬುದನ್ನು ಸಾಹಿತ್ಯವು ಚಿತ್ರಿಸುತ್ತಿದೆ. ರಸಿಕನು ಮಾತ್ರ ಜೀವನವನ್ನರಿಯಬಲ್ಲನು. 'ರವಿ ಕಾಣದ್ದನ್ನು ಕವಿ ಕಂಡ' ಎಂಬ ಮಾತುಗಳು ವಿಶಿಷ್ಟ ಸಂಗತಿಗಳತ್ತ ಗಮನ ಸೆಳೆಯುತ್ತವೆ. ೧೦ನೇ ಶತಮಾನದ ಪಂಪಕವಿಯ ಕಾಲದ ಜನಜೀವನ ಕ್ಷಾತ್ರದ, ತ್ಯಾಗದ, ಭೋಗದ, ಗತಿಯಲ್ಲಿ ಹರಿದರೆ, ೧೨-೧೩ನೇ ಶತಮಾನಗಳ್ಲಿ ಅದು ಕ್ರಾಂತಿಯ ಧರ್ಮದ, ಭಕ್ತಿಯ ಗತಿಯಲ್ಲಿ ಸಾಗಿರುವುದನ್ನು ಆಯಾ ಕಾಲದ ಸಾಹಿತ್ಯ ಕೃತಿಗಳು ದಾಖಲಿಸಿವೆ. ಜನಜೀವನ ಗತಿ. ಆಯಾ ಕಾಲ ಖಂಡಗಳಿಂದ ಪ್ರಭಾವಿತವಾಗಿರುತ್ತದೆ. ಹೀಗೆ ಸಾಹಿತ್ಯವು ಜೀವನದ ಬದಲಾವಣೆಗಳಿಗೆ ಹೊಂದಿಕೊಂಡು ಮುಂದೆ ಹರಿಯುತ್ತದೆ. ೨೦ನೆ ಶತಮಾನದ ಜನಜೀವನವು ವಿಜ್ಞಾನದಿಂದ ಪ್ರಬಾವಿತವಾಗಿದೆ ಎಂದು. ಹೇಳಬಹುದು. ಈ ಕಾರಣಗಳಿಂದಾಗಿ 'ಸಾಹಿತ್ಯ ಸಮಾಜದ ಶಿಶು' ಎಂದು ಕರೆಸಿಕೊಂಡಿದೆ.

ಯಾವುದೇ ದೇಶದ ಸಾಹಿತ್ಯವು ಒಂದು ನಿರ್ದಿಷ್ಟ ಕಾಲದ ಸಾಮಾಜಿಕ ಸಂದರ್ಭದಲ್ಲಿ ಸಂಭವಿಸುತ್ತದೆ. ಸಾಹಿತಿಯಾದವನು ತನ್ನ ಸಮಕಾಲೀನ ಸಮಾಜದ ಬಗ್ಗೆ ಹಾಗೂ ಸಾಮಾಜಿಕ ಮಾಧ್ಯಮವಾದ ಭಾಷೆಯ ಬಗ್ಗೆ ವಿಶೇಷ ರೀತಿಯ ಎಚ್ಚರ ವಹಿಸುತ್ತಾನೆ. (ಜಿ.ಎಸ್.ಎಸ್)

ಸಾಹಿತಿಯು ಸಾಮಾಜಿಕ ಅನುಭವವನ್ನು ಕಲಾತ್ಮಕವಾಗಿ ನಿರೂಪಿಸುವುದು ಶಾಸ್ತ್ರಜ್ಞನ, ಚರಿತ್ರಕಾರನ, ಸಂಶೋಧಕಕಾರನ ದೃಷ್ಟಿಗಿಂತ ಭಿನ್ನವಾಗಿರುವುದೇ ಸಾಹಿತ್ಯ. ಒಟ್ಟು ಜೀವನವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದ್ದರ ಪರಿಣಾಮವಾಗುತ್ತದೆ. ಸಾಹಿತಿ ತನ್ನ ಆಂತರಿಕ ಒತ್ತಡದ ಕಾರಣದಿಂದ ಮತ್ತು ತನ್ನಲ್ಲಿರುವ ತೀವ್ರ ಸಂವೇದನಾ ಪ್ರಜ್ಞೆಯಿಂದ ತಾನು ಬದುಕುತ್ತಿರುವ ಸಮಾಜದ ನಂಬಿಕೆಗಳನ್ನು ಆಸೆ–ಆಕಾಂಕ್ಷೆಗಳನ್ನು, ಮೌಲ್ಯಗಳನ್ನು ಭೇದಿಸಿ ತನ್ನ ಗ್ರಂಥದಲ್ಲಿ ರಮ್ಯವಾಗಿ ಅಭಿವ್ಯಕ್ತಿಸುತ್ತಾನೆ.

"ಸಮಾನತೆ, ಸ್ವಾತಂತ್ರ್ಯ, ವಿಶ್ವಭ್ರಾತೃತ್ವ, ವಿಶ್ವಮಾನವ ಪ್ರಜ್ಞೆ, ಸ್ನೇಹ ಸೋದರ ಭಾವನೆಗಳೆಂಬ, ಮೌಲ್ಯಗಳನ್ನು ಕನ್ನಡ ಸಾಹಿತ್ಯ ಕೃತಿಗಳಲ್ಲಿ ನೋಡಬಹುದು. **ಉದಾ:** "ಉಳ್ಳವರು ಶಿವಾಲಯವ ಮಾಡುವರು, ನಾನೇನ ಮಾಡುವೆ ಬಡವನಯ್ಯ" "ಕಲ್ಕಿ ಎನ್ನುತ ಚೀರಿ ಕನಸೊಡೆದೆದ್ದೆ ಇನ್ನೆಲ್ಲಿಯ ನಿದ್ದೆ" ಎಂಬ ಸಾಲುಗಳನ್ನು ಗಮನಿಸಬಹುದು.

ಸಮಕಾಲಿನ ಸಾಮಾಜಿಕ ಪ್ರಜ್ಞೆಯ ಹಿಂದಿರುವ ಮನುಷ್ಯ ಬದುಕಿನ ಮೂಲಭೂತ ದ್ರವ್ಯಗಳಾದ ಸ್ವಾರ್ಥ, ಪ್ರೇಮ, ಅಸೂಯೆ, ರಾಗ, ದ್ವೇಷ, ಶಾಂತಿ, ದಾನ–ಧರ್ಮ–ದಯೆ, ಔದಾರ್ಯ, ಇವು ಕಾಲ ದೇಶಗಳ ಪರಿಸರ ಬದಲಾದರೂ ಯಾವತ್ತಿಗೂ ಉಳಿದು ಬಂದಿರುವಂತವು. ಹೀಗಾಗಿ ಸಾಮಾಜಿಕ ಪ್ರಜ್ಞೆ ಎಲ್ಲಾ ಕಾಲಗಳನ್ನು ಒಳಗೊಳ್ಳುವಂತದ್ದು. ಸಾಹಿತಿಯಾದವನು ಚಿಂತನ ಪ್ರವೃತ್ತಿಯಿಂದ ಸಮಾಜದ ಬಗೆಬಗೆಯ ಸಮಸ್ಯೆಗಳ ಅಂತರಂಗವನ್ನು ಭೇದಿಸಿ ಸೂಕ್ಷ್ಮವಾಗಿ ನೋಡಿ ಅವರ ಕಡೆ ಅನುಕಂಪೆಯ ದೃಷ್ಟಿಯನ್ನು ಹರಿಸುತ್ತಾನೆ. ಆತನು ಕವಿ ಹೃದಯವುಳ್ಳವನಾಗಿದ್ದರೆ ಸಮಾಜವೇ ಸಾಹಿತ್ಯವಾಗಿಬಿಡುತ್ತದೆ. ಸಮಾಜದ ಮೂಲೆ ಮುಡುಕುಗಳನ್ನು ಶೋಧಿಸಿ ಅದಕ್ಕೊಂದು ಅರ್ಥವನ್ನು ಹುಡುಕುತ್ತಾನೆ ಸಾಹಿತಿ.

ಕವಿ–ಸಹೃದಯ: ಸಾಹಿತ್ಯ ಲೋಕದಲ್ಲಿ ಮೊದಲನೆಯ ಕಣ್ಣು 'ಕವಿ' ಸೂಕ್ಷ್ಮ ಮತಿಯಾದ ಕವಿ ತನ್ನ 'ಹೊರಗಣ್ಣಿನಿಂದ ಅಂತರಂಗದ ಕಣ್ಣಿನಿಂದ ಲೋಕವನ್ನು ಗ್ರಹಿಸುತ್ತಾನೆ.' 'ಎರಡನೆಯ ಬ್ರಹ್ಮ ಎಂದು ಕರೆದಿರುವುದೂ ಉಂಟು. ಸುಂದರವಾದ ಜಗತ್ತನ್ನು ನಿರ್ಮಿಸಬಲ್ಲ ಬಹುಮುಖ ಪ್ರತಿಭೆಯ ಪ್ರತಿಭಾವಂತ ಎರಡನೆಯ ಕಣ್ಣು 'ಸಹೃದಯ' ಕಾವ್ಯದ(ಸಾಹಿತ್ಯದ) ಓದುಗನೋ ಸಹೃದಯ ಈ ಪರಿಕಲ್ಪನೆ ಆದರ್ಶ ಓದುಗ ಸಾಹಿತಿ ಅಂತರಂಗದ ಪ್ರಚೋದನೆಯಿಂದಲೋ ಸಾಮಾಜಿಕ ಪ್ರೇರಣೆಯಿಂದಲೋ ಕೃತಿಯನ್ನು ನಿರ್ಮಾಣಮಾಡುತ್ತಾನೆ. ಆ ಕೃತಿಯನ್ನು ಓದಿ ಸಂತೋಷ ಪಡುವಂತವನು ಸಹೃದಯ ಕವಿ ಸೃಷ್ಟಿ ಸಾರ್ಥಕವಾಗುವುದು ಸಹೃದಯನ

ಹೃದಯದಲ್ಲಿ ಮತ್ತೆ ನೆಲೆ ಗೊಂಡಾಗಲೇ ಕವಿಯ ಆಶಯವನ್ನು ಇಂಗಿತವನ್ನು ಸಹಾನುಭೂತಿಯಿಂದ ಅರಿಯುವಂತವನು ಸಹೃದಯ "ಕಾವ್ಯಗಳನ್ನು ಪರಿಶೀಲಿಸಿ ಮನಸ್ಸೆಂಬ ಕನ್ನಡಿ ನಿರ್ಮಲವಾಗಿರುವುದರಿಂದ ವರ್ಣಿತ ವಿಷಯದಲ್ಲಿ ತನ್ಮಯವಾಗುವ ಯೋಗ್ಯತೆ ಯಾರಿಗುಂಟೋ ಅವರೇ ಸಹೃದಯರು". ಸಹೃದಯನೆಂದರೆ **'ವಿಮಲ ಪ್ರತಿಭಾನಶಾಲಿ'** ಆತನದು ಭಾವಯತ್ರಿ ಪ್ರತಿಭೆ,[೩] ಕುವೆಂಪುರವರ ಸಾಹಿತ್ಯ ಸಮಗ್ರವಾದುದು, ಬಹುಮುಖ ಪ್ರತಿಭೆಯುಳ್ಳವರು ಕುವೆಂಪುರವರು, ಬಹುಪಾಲು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿ ನಡೆಸಿದ್ದಾರೆ. **'ವಿಶ್ವವಿಚಾರಧಾರೆ'** ಕುವೆಂಪು ಸಾಹಿತ್ಯದ ವಿಶಿಷ್ಟ ಲಕ್ಷಣವಾಗಿದೆ ಆಧುನಿಕ ಕನ್ನಡ ಸಾಹಿತ್ಯವನ್ನು ರೂಪಿಸಿಕೊಟ್ಟ ಮಹಾನ್ ಶಿಲ್ಪಗಳಲ್ಲಿ ಶ್ರೀ ಕುವೆಂಪು ಒಬ್ಬರು. 'ಶ್ರೀ ರಾಮಾಯಣ ದರ್ಶನದಿಂದಲೇ ಕೈ ಮುಗಿದ ಯುಗದ ಕವಿ, ಜಗದ ಕವಿ ಆಗಿದ್ದಾರೆ.

* * * * *

ಅಧ್ಯಾಯ: ೨

ಒಕ್ಕಲಿಗರ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನಲೆ

ಕಾನೂರು ಹೆಗ್ಗಡತಿಯ ಸಮಾಜವು ಮೇಲುನೋಟಕ್ಕೆ ಸಂಘರ್ಷಗಳ ಸ್ವರೂಪದಲ್ಲಿ ಬೆರಗು ಹುಟ್ಟಿಸುವಂತಹದ್ದು ಇಲ್ಲಿಯ ಮುಖ್ಯ ಕೇಂದ್ರ ವ್ಯಕ್ತಿ ಹೂವಯ್ಯ ಈ ಕಾದಂಬರಿಯ ಸಮಾಜವು ಸಾಮ್ಯ ಸ್ಥಿತಿಯದ್ದು ವರ್ಗಗಳು ಪ್ರಜ್ಞಾವಂತ ವರ್ಗಗಳಾಗಿ ರೂಪುಗೊಂಡು ಪ್ರಗತಿಪರ ಚಾರಿತ್ರಿಕ ಹೋರಾಟ ನಡೆಸುವುದು ಇಂತಹ ಸಮಾಜಗಳಲ್ಲಿ ಅಸಾಧ್ಯ ಬಡತನ ದಾರಿದ್ರ್ಯವಿದ್ದರೂ ಶೋಷಣೆಯಿದ್ದರೂ ಒಂದು ವರ್ಗ ತನಗಾಗಿ ಇದನ್ನು ಪ್ರತಿಭಟಿಸುವುದು ಸಾಧ್ಯವಾಗುವುದಿಲ್ಲ. ಬಂಡವಾಳಷಾಹಿ ಪೂರ್ವದ ಈ ಸಮಾಜ ವ್ಯವಸ್ಥೆಗಳಲ್ಲಿ ವಾಸ್ತವ ವ್ಯವಸ್ಥೆ ಮತ್ತು ನ್ಯಾಯಬದ್ಧ ವ್ಯವಸ್ಥೆಗಳ ನಡುವೆ ಘರ್ಷಣೆ ಖಚಿತವಾಗಿ ರೂಪುಗೊಂಡಿರುವುದಿಲ್ಲ ಇಲ್ಲಿರುವ ಅಶಾಂತಿಯ ಸಂಘರ್ಷದ ಸ್ವರೂಪವೇ ಇದನ್ನು ಉಳಿಗಮಾನ್ಯ ಪದ್ಧತಿಯೊಳಗೆ ನಡೆಯುವ ಮೌನಸಂಘರ್ಷ ಎನ್ನುವರು ತತ್ವಜ್ಞಾನಿ ಹೂವಯ್ಯ ಗುರುತಿಸಿಲ್ಲದ ಈ ಸಂಘರ್ಷವನ್ನು ಕಲಾವಿದ ಕುವೆಂಪು ಗುರುತಿಸಿದ್ದಾರೆ ಕಾನೂರು ಹೆಗ್ಗಡತಿಯ ಕೆಳಕಾನೂರು ಅಣ್ಣಯ್ಯಗೌಡರ ಕಥೆ ಇದಕ್ಕೆ ಉದಾಹರಣೆ

ಊಳಿಗಮಾನ್ಯ ಶೋಷಣೆಯ ಬಲಿಪಶು ಅಣ್ಣಯ್ಯಗೌಡರು ಹೂವಯ್ಯನ ಸುಂದರ ಆಧ್ಯಾತ್ಮಿಕ ಲೋಕದೊಳಗಡೆ ಉಗ್ರಶೋಷಣೆಯ ದಾರುಣ ಲೋಕವೂ ಇದೆ. ಈ ಸೌಮ್ಯ ಸಮಾಜದೊಳಗೂ ಅಶಾಂತಿಯ ಜ್ವಾಲಾಮುಖಿಗಳಿವೆ. ಎಂಬುದು ಕಲ್ಲಯ್ಯಗೌಡರ ಕಥೆಯಿಂದ ಸ್ಪಷ್ಟವಾಗುತ್ತದೆ.

ಮಲೆಗಳಲ್ಲಿ ಮದುಮಗಳು ಗಾತ್ರದಲ್ಲಿ ಪಾತ್ರದಲ್ಲಿ ಮಲೆನಾಡಿನ ವೈವಿಧ್ಯಮಯವಾದ ಬದುಕನ್ನು ತನ್ನ ಎಲ್ಲಾ ಸ್ತರಗಳಲ್ಲೂ ಜೀವಂತವಾಗಿ ಕಂಡರಿಸುವ ಮಹತ್ವದ ಕಾದಂಬರಿ ಕುವೆಂಪು ಅವರು ಹೇಳುವಂತೆ ಇಲ್ಲಿ ಯಾರೂ ಮುಖ್ಯರಲ್ಲ ಯಾರೂ ಅಮೂಖ್ಯರಲ್ಲ ಯಾವುದೂ ಯಃಕಶ್ಚಿತವಲ್ಲ. ಇಡೀ ಮಲೆನಾಡ ಬದುಕಿಗೆ ಇಲ್ಲಿ ನಾಯಕಪಟ್ಟ ನೀಡಲಾಗಿದೆ.

ಮಲೆಗಳಲ್ಲಿ ಮದುಮಗಳು ಎಂಬ ಹೆಸರು ಮದುವೆ, ಪ್ರಣಯ ಎಂಬುದು ಈ ಕೃತಿಯ ಎಲ್ಲಾ ವ್ಯಕ್ತಿಗಳನ್ನು ಮತ್ತು ಘಟನೆಗಳನ್ನು ಬಂದಿಸಿರುವ ತಂತು ಎಂಬುದನ್ನು ಸೂಚಿಸುತ್ತದೆ ಸಿಂಬಾವಿ, ಬೆಟ್ಟಳ್ಳಿ, ಕೋಣೂರು, ಹೂವಳ್ಳಿ, ಹಳೆಮನೆ, ಈ ಐದು ಮನೆತನಗಳ ನಡುವಣ ಸಂಬಂಧ ಮದುವೆಯಿಂದ ಬೆಸೆದುಕೊಂಡಿದೆ ಅದೇ ರೀತಿ ಈ ಮನೆತನಗಳ ಸೇವೆಯಲ್ಲಿ

ಮಾಡುವ ಜೀತದಾಳುಗಳ ಮದುವೆ ಹಾಗೂ ಪ್ರಣಯ ಪ್ರಸಂಗಗಳು ಇದರೊಡನೆ ಸೇರಿಕೊಂಡಿವೆ ತನ್ನ ಸೋದರತ್ತೆಯ ಮಗಳು ಅನ್ಯನಿಗೆ ವಿವಾಹವಾಗುವುದನ್ನು ತಪ್ಪಿಸಿ ಹಾರಿಸಿಕೊಂಡು ಬರಲು ಹೊರಟ ನಾಯಿಗುತ್ತಿಯ ತೆರೆದ ಹಾದಿಯಲ್ಲಿ ಮಲೆನಾಡಿನ ವೈವಿಧ್ಯಮಯವಾದ ಬದುಕು ತೆರೆದುಕೊಳ್ಳುತ್ತದೆ ಗುತ್ತಿ ತಿಮ್ಮಿಯೊಡನೆ ತುಂಗಾ ನದಿಯನ್ನೂ ದಾಟುವಲ್ಲಿ ನಿಲುಗಡೆಗೆ ಬರುತ್ತದೆ.

ಮಲೆನಾಡಿನ ಗೌಡರ ಜೀವನ ವಿಧಾನ ಅವರ ಮೂಢನಂಬಿಕೆಗಳು ಟೊಳ್ಳು ಪ್ರತಿಷ್ಠೆಗಳು ದರ್ಪ ದಬ್ಬಾಳಿಕೆಗಳು ಪ್ರಣಯ ಸಾಹಸಗಳು ಅವರ ಹೆಂಗಸರ ಅಸ್ವತಂತ್ರ ಬಾಳು ಹಾಗೂ ಮಗ್ಧತೆ ಗೌಡರ ಹೊಲಗದ್ದೆಗಳಲ್ಲಿ ದುಡಿಯುವ ಹಳೇ ಪೈಕದವರು, ಹೊಲೆಯರು, ದೀವರು ಬಿಲ್ಲವರು, ಮುಂತಾದವರ ವಿಶಿಷ್ಟ ರೀತಿ ನೀತಿಗಳು ಇವರನ್ನು ನಂಬಿ ಬದುಕುವ ಮತ್ತು ಶೋಷಿಸಿ ಬದುಕುವ ಬ್ರಾಹ್ಮಣರು ಮುಸ್ಲಿಮರು ಮತಾಂತರ ಕಾರ್ಯದಲ್ಲಿ ತೊಡಗಿರುವ ಪಾದ್ರಿಗಳು ಕಾಡು-ನಾಡುವಿನ ಚಿತ್ರಣ ಹೀಗೆ ಹಲವು ಮಜಲುಗಳಲ್ಲಿ ಕಾದಂಬರಿ ತನ್ನ ಸ್ವರೂಪವನ್ನು ಹೊಂದಿವೆ.

ಮಳೆಗಾಲದ ವಾಸ್ತವಿಕ ಚಿತ್ರ ಆ ನಾಡಿಗೆ ಸೀಮಿತವಾದುದು ಹಾಗಾಯೇ ವಿಶಾಲ ನಿಸರ್ಗದ ನಡುವೆ ಸಾಮಾನ್ಯ ಮಾನವರ ಬದುಕು ಹೇಗೆ ನಡೆಯುತ್ತಿತ್ತು ಎಂಬುದನ್ನು ಮನಗಾಣಬಹುದು ಮಳೆಗಾಲದಲ್ಲಿ ಆಯಾ ಮನೆಯವರು ಗದ್ದೆ ಕೆಲಸಕ್ಕೆ ತೊಡಗುವಾಗ ಅಟ್ಟದ ಮೇಲಿದ್ದ ಗೊರಬು ಹೆಣ್ಣಾಳುಗಳ ತಲೆಗೆ ಸೇರುತ್ತವೆ. ಸಂದಿಗೊಂದಿಯಲ್ಲಿನ ಕಂಬಳಿಗಳು ಗೊಪ್ಪಗಳಾಗಿ ಗಂಡಾಳುಗಳ ತಲೆಗೇರುತ್ತವೆ. ಹಟ್ಟಿಯ ಎತ್ತುಗಳೆಲ್ಲ ರಜಾಕಾಲ ಮುಗಿದು ಗದ್ದೆಯಲ್ಲಿ ದುಡಿಯಲು ಸಜ್ಜಾಗುತ್ತವೆ. ಬಿದುವಿನ ಜನ ಹಗಲು ಕೊಣಿ ಹಾಕಿ ಮೀನು ಹಿಡಿದರೆ ರಾತ್ರಿದೊಂದಿಯ ಬೆಳಕಿನಲ್ಲಿ ಹತ್ತು ಮೀನು ಕಡಿಯುತ್ತಾರೆ. ಬೇಸರದ ಜಡಿಮಳೆ ಅದರ ಜೊತೆಯಲ್ಲಿಯೇ ಮಾನವನ ಚಟುವಟಿಕೆಯ ಮಣ್ಣಿನವಾಸನೆ ಈ ಸನ್ನಿವೇಶದಿಂದ ಹೊರಹೊಮ್ಮುತ್ತದೆ.

ಗುತ್ತಿ ನಡೆದಂತೆಲ್ಲಾ ಆ ಪ್ರದೇಶದ ದಟ್ಟ ಅರಣ್ಯ ಹುಟ್ಟಿನಿಂದ ಮುಪ್ಪಿನವರೆಗೂ ದೀರ್ಘವಾಗಿ ಹಬ್ಬಿರುವ ಮಲೆನಾಡಿನ ಹಸಿರು ಹೆಗ್ಗಾಡುವಿನಲ್ಲಿರುವ ಹುಲಿಕಲ್ಲುಗುಡ್ಡ ಅದನ್ನಾವರಿಸಿಕೊಂಡಿರುವ ದಟ್ಟಕಾಡು ಈ ಕಾದಂಬರಿಯಲ್ಲಿ ಮುಖ್ಯವಾದುದು. ಕಣಿವೆಯಲ್ಲಿ ಕೋಣೂರು ಹೂವಳ್ಳಿಗಳ ಗದ್ದೆ ತೋಟಗಳು ಅಡವಿಗೆ ಸೇರಿಕೊಂಡಂತಿದ್ದ ಅಡಿಕೆ ಬಾಳೆ ತೋಟಗಳು ಕಾಣುತ್ತವೆ. ಹೀಗೆ ಕಾದಂಬರಿಯ ಕತೆಯ ಜೊತೆಯಲ್ಲಿ ಅಲ್ಲಿಯ ಪ್ರಕೃತಿಯ ವಾಸ್ತವಿಕ ಸ್ಥಿತಿಯ ವಿವರ ಓದುಗನಿಗಾಗುತ್ತಿರುತ್ತದೆ. ಸೂರ್ಯೋದಯ, ಸೂರ್ಯಾಸ್ತ, ಚಂದ್ರೋದಯ ಸಂಜೆ ಇವುಗಳ ವರ್ಣನೆಯನ್ನು ಈ ಕಾದಂಬರಿಗಿಂತ ಹೆಚ್ಚಾಗಿ ಕಾನೂರು ಹೆಗ್ಗಡತಿಯಲ್ಲಿ ಕಾಣಬಹುದು.

ಮಲೆನಾಡಿನ ಗೌಡ ಹೆಗ್ಗಡೆಯವರ ಮನೆಗಳ ಸ್ವರೂಪದ ಹಿನ್ನಲೆಯಲ್ಲಿ ಆ ನೆಲದ ಸ್ಥಳೀಯರೆ ಕಂಡುಬರುವಂತೆಯೇ ಅವರ ಜೀತದಾಳುಗಳಾದ ಬೇಲರ, ಮಾದಿಗರ, ಬಿಲ್ಲವರ ಹಸಲವರ ಬಿಡಾರಗಳೂ ವಿವರಣೆಯೂ ವಾಸ್ತವಿಕ ನೆಗಟ್ಟಿನ ಮೇಲೆ ನಿಂತು ಕಲಾತ್ಮಕವಾಗಿ ಮೂಡಿಬಂದಿದೆ ಹೊಲಗೇರಿಗಳ ಸ್ವರೂಪ ಚಿತ್ರಣ ಒಂದೊಂದು ವಿಧವಾಗಿ ನಿಂತು ಆ ನೆಲದ ಗಟ್ಟಿತನ ಒಗ್ಗಿದ ಕೋರಿಗಳಾಗಿ ಮಣ್ಣಿನ ಸಹಜತ್ವಕ್ಕೆ ಅಂಟಿಕೊಂಡಿವೆ.

ಮಲೆನಾಡಿನ ಗೌಡ ಹೆಗ್ಗಡೆಯವರ ನಿವಾಸಗಳೆಲ್ಲಾ ಮನೆ ಎನ್ನಿಸಿಕೊಂಡರೆ ಅವರ ಜೀತದಾಳುಗಳ ನಿವಾಸಗಳು ಬಿಡಾರಗಳು ಗುಡಿಸಲುಗಳು ಇಲ್ಲವೆ ಗುಡಿಗಳು ಎನ್ನಿಸಿಕೊಳ್ಳುತ್ತವೆ ಇವಕ್ಕೆ ಒಕ್ಕಲಿಗರ ಮನೆಯಂತೆ ಒಂದು ಸ್ಥಾವರತೆಯುಗಲಿ ನೀತಿ ನಿಯಮವಾಗಲಿ ಇಲ್ಲ ಕೆಸರು ಕೊಂಪೆಯಲ್ಲಿ ಬಿದ್ದು ಮಲಗಿರುವ ಹಂದಿ–ಮಂದೆಗಳಂತೆ ಕಂಗೊಳಿಸುತ್ತವೆ. ಈ ನಾಡಿನ ಕೀಳು ಜಾತಿಯವರ ನಿವಾಸಗಳಲ್ಲಿ ಮನ ಎನ್ನಿಸಿಕೊಂಡವೆಂದರೆ ಸೇಸನಾಯನ ಮನೆ ಯಂಕಿಯ ಮನೆ ಒಕ್ಕಲಿಗರ ಮನೆಗೆ ಕೀಳುಜಾತಿಯವರ ಪ್ರವೇಶ ಹೀಗೆ ನಿಷಿದ್ದವೋ ಹಾಗೆಯೇ ಮೇಲುಜಾತಿಯವರು ಕೀಳುಜಾತಿಯವರ ನಿವಾಸಗಳಿಗೆ ಪ್ರವೇಶಿಸುವುದು ನಿಷಿದ್ದವಾದುದು.

ಮಲೆ ಕಾಡು ಬೆಟ್ಟ ಬಯಲುಗಳ ಮಧ್ಯೆ ಇರುವ ಮಲೆನಾಡಿನ ಸಾಮಾಜಿಕ ಜೀವನ ಬೇಸಾಯದ ಮೇಲೆ ನಿಂತಿರುವಂತದ್ದು ಮಲೆನಾಡ ಜನರ ಪದ್ಧತಿಗಳು, ಆಚರಣೆಗಳು, ನಂಬಿಕೆಗಳು ಹವ್ಯಾಸಗಳು ಅಪಾರವಾಗಿಯೇ ಇವೆ ಮಲೆನಾಡಿನಲ್ಲಿ ಹುಟ್ಟಿ ಆ ಗಟ್ಟಿ ನೆಲಕ್ಕೆ ಹೊಂದಿಕೊಂಡಂತಹ ಗೌಡರುಗಳು ಅವರ ಸೇವೆಗಾಗಿ ಗಟ್ಟದ ತೆಳಗಿನಿಂದ ಬಂದು ಜೀವನಯಾಪನ ಮಾಡುವ ಇತರ ವರ್ಗದ ಜನರೂ ಇದ್ದಾರೆ ಹಲವು ರೀತಿಯ ಜಾತಿಯ ಜನರಿದ್ದಾರೆ. ಅವರವರ ಜೀವನದ ಅಂತಸ್ತಿಗೆ ಮಲೆನಾಡ ಮಣ್ಣಿಗೆ ಅನುಗುಣವಾದ ಮನೆಗಳು ಗುಡಿಸಲುಗಳನ್ನು ನಿರ್ಮಿಸಿಕೊಂಡಿದ್ದಾರೆ. ಕಾನೂರು ಚಂದ್ರಯ್ಯಗೌಡರ ಮಂಗಳೂರು ಹೆಂಚಿನ ದೊಡ್ಡಮನೆ ಕಾಡು ಕಿಕ್ಕಿರಿದ ಬೆಟ್ಟಗುಡ್ಡಗಳ ತಪ್ಪಲಿನಲ್ಲಿ ಮಹಾ ವೃಕ್ಷದ ಬುಡದಲ್ಲಿ ಎದ್ದಿರುವ ಹತ್ತದಂತಿದೆ. ಪಶ್ಚಿಮ ದಕ್ಷಿಣ ದಿಕ್ಕುಗಳಲ್ಲಿ ಅವರ ಗದ್ದೆ ತೋಟಗಳೂ ಒಕ್ಕಲು ಮತ್ತು ಆಳುಗಳ ಹುಲ್ಲುಮನೆ ಮತ್ತು ಬಿಡಾರಗಳೂ ಕಣ ಕೊಟ್ಟಿಗೆ, ಹಟ್ಟಿಗಳು ಇದ್ದುವು.

ಮಲೆನಾಡಿನ ಮನೆಗಳಿಗೆ ಗುಡಿಸಲುಗಳಿಗೆ ಹೊಂದಿಕೊಂಡ ಸಾಕುಪ್ರಾಣಿಗಳ ಸಮುದಾಯವೂ ಕಾದಂಬರಿಯಲ್ಲಿ ಅಪಾರವಾಗಿಯೇ ಇವೆ. ನೆಲದೊಕ್ಕಲಿಗ ಎಂದ ಮೇಲೆ ಅವನಿಗೆ ತಕ್ಕಂತಹ ಸಾಕುಪ್ರಾಣಿಗಳು ಅವನನ್ನು ಸುತ್ತುವರಿಯುತ್ತವೆ. ಬೇಸಾಯಕ್ಕೆ ಬೇಕಾದ ದನಕರುಗಳು ರಕ್ಷಣೆಗೆ ಬೇಕಾದ ನಾಯಿಗಳು ಕೋಳಿ ಕುರಿಗಳು ಇವೆಲ್ಲಾ ಅವನ ಸುತ್ತಿಲಿನ ಪ್ರಾಣಿ ಪರಿವಾರಗಳು.

ಕಾನೂರು ಹೆಗ್ಗಡತಿಯ ಶಾಮಯ್ಯ ಗೌಡರ ಸಂಸ್ಕೃತಿ ಅನುಕರಣೆ ಅಗ್ರಹಾರದ ಆಚಾರ ವಿಚಾರಗಳು ಹಾಗೆಯೇ ಮಲೆಗಳಲ್ಲಿ ಮದುಮಗಳುವಿನಲ್ಲಿಯ ಬ್ರಾಹ್ಮಣ ಸಮಾಜ ಚಿತ್ರ ಶಂಕರ ಹೆಗ್ಗಡಿತಿಯ ಶಾಮಯ್ಯಗೌಡರ ಸಂಸ್ಕೃತಿ ಇವುಗಳ ಮೂಲಕ ಸಂಸ್ಕೃತಿಕ ಪ್ರಜ್ಞಾಪೂರ್ವಕವಲ್ಲದ ಸ್ಥಿತಿಯಲ್ಲಿ ಹೇಗೆ ಅರ್ಥವಿಲ್ಲದ ಆಚಾರ ಕಟ್ಟುಕಟ್ಟಗಳೆಗಳು ಜಡತೆಯನ್ನು ಮನದಟ್ಟು ಮಾಡಿಕೊಡಲು ಚಿತ್ತಿಸಿದ ಪಾತ್ರ ಸನ್ನವೇಶಗಳಂತೆ ತೋರುತ್ತವೆ.

ಸಾಂಸ್ಕೃತಿಕ ವಿಡಂಬನೆಯ ದೃಷ್ಟಿಯಿಂದ ಎರಡೂ ಕಾದಂಬರಿಗಳಲ್ಲಿ ತೋರುವ ಈ ಏಕರೂಪತೆ ಕುವೆಂಪು ಅವರ ದೃಷ್ಟಿಕೋನದ ಏಕಮಾನತೆಯನ್ನು ಸೂಚಿಸುತ್ತದೆ.

ಕಾನೂರು ಹೆಗ್ಗಡತಿಯ ಚಂದ್ರಯ್ಯಗೌಡರ ಆಚಾರಗಳು ಮಲೆಗಳಲ್ಲಿ ಮದುಮಗಳುವಿನಲ್ಲಿಯ ಹೆಗ್ಗಡೆಯವರ ಪೂಜಾ ವಿಧಾನ ಸ್ವಲ್ಪಮಟ್ಟಿಗೆ ಮಧ್ಯಮವರ್ಗದ ಜನಜೀನವನ್ನು ಪ್ರತಿನಿಧಿಸಿದರೂ ವಾಸ್ತವಿಕವಾಗಿ ಶ್ಯಾಮಯ್ಯಗೌಡ ಹಾಗೂ ಶಂಕರಹೆಗ್ಗಡೆಯವರ ಮನೋಧರ್ಮದ ವ್ಯತ್ಯಾಸದೊಂದಿಗೆ ಅದೇ ವರ್ಗಕ್ಕೆ ಸೇರುತ್ತಾರೆ.

ಮಲೆಗಲ್ಲಿ ಮದುಮಗಳುವಿನಲ್ಲಿನ ಜೀವನ ಚಿತ್ರಣ ಯಾವುದೇ ಒಂದು ವರ್ಗ ಅಥವಾ ಕೋಮುವಿನ ಚಿತ್ರಣಕ್ಕೆ ಮಾತ್ರ ಸೀಮಿತಗೊಳ್ಳದೆ. ಮಲೆನಾಡಿನ ಎಲ್ಲಾ ಜಾತಿಯ ಎಲ್ಲಾ ಸ್ತರದ ಜನಜೀವನವನ್ನು ಒಳಗೊಳ್ಳುತ್ತಾ ಪ್ರಯತ್ನಿಸುತ್ತಿರುವುದು ಗಮನಾರ್ಹವಾಗಿದೆ. ಕಾದಂಬರಿಯ ಮೊದಲಲ್ಲೇ ಬರುವ ಗುತ್ತಿ ಹರಿಜನ ಎರಡನೇ ಅದ್ಯಾಯದಲ್ಲಿ ಬರುವ ಸೇಸನಾಯ್ಕ ತಿಮ್ಮನಾಯ್ಕ ದೀವರು, ಅಥವಾ ಹಳೇಪೆಕದವರು ಸಾಬರು ಒಕ್ಕಲಿಗರು ಬ್ರಾಹ್ಮಣರು ಐತ–ಪೀಂಚಲುವಿನಂತ ಬಿಲ್ಲವರು ಕ್ರೈಸ್ತರು ಬೋವಿಯಾದ ಮಾನನಾಯಕ ಹೀಗೆ ಅಸಂಖ್ಯಾತ ಪಾತ್ರಗಳು ಮಲೆನಾಡಿನ ಒಂದು ವರ್ಗ ಅಥವಾ ಜಾತಿಯನ್ನು ಬಿಡದೆ ಪ್ರತಿನಿಧಿಸಿದೆ.

ಮಲೆಗಳಲ್ಲಿ ಮದುಮಗಳುವಿನಲ್ಲಿ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರ ಮಗ ತಿಮ್ಮಪ್ಪ ಹೆಗ್ಗಡೆ ಆಳು ಕೇರಿಗೆ ಹೋದಾಗ ಬರುವ ಮಂಚ ಸಿದ್ದಿ ತಿಮ್ಮ ಗಿಡ್ಡಿ ಕುಳುವಾಡಿ ಸಣ್ಣ ಬೈರ ಮುಂತಾದವರ ಸಂಸಾರ ಚಿತ್ರಗಳು ಕೋನೂರಿನ ಚೇಂಕ್ರ ಪಿಜಿಣ ಐತ ಅಕ್ಕಣಿ ಬಾಗಿ ಪೀಂಚಲು ಮುಂತಾದವರ ಜೀವನ ಚಿತ್ರಗಳು ಕಾದಂಬರಿಯಲ್ಲಿ ತುಂಬಿಕೊಳ್ಳುವ ಮೂಲಕ ಆಗುವ ಉದ್ದೇಶ ಸಾಧನೆಯನ್ನೂ ಕಾಣಬಹುದು ಈ ಪಾತ್ರಗಳೇ ಅಲ್ಲದೆ ಬೆಟ್ಟಳ್ಳಿಯ ಸಣ್ಣಬೀರ ಪುಟ್ಟಬೀರ, ದೊಡ್ಡಬೀರ, ಬಚ್ಚ ಸೇಸಿ ಸಿರಿಬಾವೆಯ ಮಾರಾಟ ಮಂಜ ಗುತ್ತಿ ಮುಂತಾದ ಪಾತ್ರಗಳ ಮೂಲಕ ರೂಪುಗೊಳ್ಳುವ ಜನಜೀವನ ಸಾಮಾನ್ಯವಾಗಿದೆ.

ಪ್ರಣಯ ಜೀವನವೇ ಎದ್ದು ಕಾಣುವ ಮಲೆಗಳಲ್ಲಿ ಮದುಮಗಳು ಹಾಗೂ ಅದನ್ನೋ ಮತ್ತೊಂದು ರೀತಿಯಲ್ಲಿ ನಿರೂಪಿಸಲು ಹೊರಟ ಕಾನೂರು ಹೆಗ್ಗಡತಿ ಈ ಎರಡೂ ಕಾದಂಬರಿಗಳಲ್ಲಿ ಕಂಡುಬರುವ ವೈವಿದ್ಯತೆ ಸಾಮಾನ್ಯ

ಹಿಂದೂಗಳ ವಿವಿಧ ವರ್ಗಗಳಲ್ಲಿ ಮನೆಮಾಡಿದ್ದ ದೆಯ್ಯ ಭೂತ ಪಂಜರೊಳ್ಳಿಗಳು ಮುಸ್ಲಿಮರನ್ನೂ ಕಾಡದೆ ಬಿಟ್ಟಿರಲಿಲ್ಲ ಕರೀಂಸಾಬರಿಗೆ ಆ ಉಂಗುರ ಸೋರೆಗಾರನಿಂದ ದಕ್ಕಿದರೂ ಅದನ್ನೂ ದೆವ್ವದಿಂದ ದಕ್ಕಿಸುಕೊಳ್ಳುವಷ್ಟು ಧೈರ್ಯವಿದ್ದು ಇದು ಹಿಂದೂ ಸಮಾಜ ಗ್ರಾಮಾಂತರ ಪ್ರದೇಶಗಳಲ್ಲಿ ಹೇಗೆ ಸಕಲ ಧರ್ಮದವರನ್ನೂ ತನ್ನ ಪರಿಧಿಯೊಳಗೆ ಸೆಳೆದುಕೊಳ್ಳುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಕುವೆಂಪು ಅವರ ಕಾದಂಬರಿಗಳನ್ನೂ ಓದಿದಾಗ ಅವರ ಸಾಮಾಜಿಕ ಪ್ರಜ್ಞೆ ಸಂಕುಚಿತ ದೃಷ್ಟಿಯಿಂದ ಪುರೋಹಿತಷಾಹಿ ಒಂದನ್ನೆ ಟೀಕಿಸಲಾಗಲಿ ಆ ವರ್ಗದ ದೋಷ ಪಾರ್ಟಿಗಳನ್ನೂ ತೋರಿಸಲಾಗಲಿ ಹೋಗಿಲ್ಲ ಹಿಂದೂ ಸಮಾಜದ ವ್ಯವಸ್ಥೆಯ ದೌರ್ಬಲ್ಯದ ಬಗ್ಗೆಯೇ ಅವರಿಗೆ ಅಸಮಾಧಾನವಿದೆ. ಮತ್ತು ಕಳಕಳಿ ಇದೆ. ಅವರು ಹಿಂದೂ ಸಮಾಜದಲ್ಲಿ ಯಾವುದೇ ಒಂದು ಜಾತಿ ಇನ್ನೊಂದು ಜಾತಿಯನ್ನು ಅಥವಾ ಒಂದು ವರ್ಗ ಇನ್ನೊಂದು ವರ್ಗವನ್ನೂ ಶೋಷಿಸಿದರು ಸಹಿಸರು ತಮ್ಮ ಜೀತದಾಳನ್ನು ಚರಾಸ್ತಿಯಂತೆ ನೋಡಿಕೊಳ್ಳುವ ಕಲ್ಲೇಗೌಡರು ಹಳೇಪೈದವರನ್ನು ಗೌಡರು ನಡೆಸುಕೊಳ್ಳುವ ರೀತಿ ಇವೇ ಮೊದಲಾದ ಪ್ರಸಂಗಗಳಲ್ಲಿ ಕೆಳವರ್ಗದವರನ್ನು ಮೇಲ್‌ವರ್ಗದವರು ಕಾಣುವ ರೀತಿಯನ್ನು ಎತ್ತಿ ತೋರಿಸಿದ್ದಾರೆ.

"ದೋಣಿ ದಾಟುವಾಗ" ತಮ್ಮಯಣ್ಣ ನೋಡುತ್ತಾನೆ. ಗೌಡರುಗಳು ಕುಳಿತಲ್ಲಿ ಕೊಡೆಗಳು ಸೊಡಿವೆ. ಅವನಿಗೆ ಗೊತ್ತಾಯ್ತು ಕೊಡೆ ಸೊಡಿಕೊಂಡವರು ಗೌಡರುಗಳೆ ಎಂದು ಆದರೆ ಸನ್ನಿವೇಶ ಉಗ್ರವಾಗಿತ್ತು. ಗಟ್ಟಿಯಾಗಿ ಉರಿಸಿ ಗದರಿಸಿದರು. "ಯೋರೋ ಅದು? ಕೊಡೆ ಸೊಡಿದೋರಾ? ಸಿಡಿಸ್ತಿರೋ ಇಲ್ಲೆ ಕಾಣಾದಿಲ್ಲೇ ಗಾಳಿ ಬೀಸಾದು? ಒಂದು ಕಾಲಕ್ಕೆ ಸಮಾಜದ ಉತ್ತಮ ವರ್ಗದವರನ್ನು ಬಿಟ್ಟು ಉಳಿದವರಾರೂ ಕೊಡೆ ನೋಡುವುದಾಗಲಿ ಚಪ್ಪಲಿ ಮಟ್ಟುವುದಾಗಲಿ ನಿಷಿದ್ದವಾಗಿತ್ತು.

ಸಮಾಜದಲ್ಲಿರುವ ಮೇಲು ಕೀಳು ಬಾವನೆ ಮತ್ತು ಅಸ್ಪೃಶ್ಯತೆಯ ಚಿತ್ರಣ ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಕಂಡು ಬರುತ್ತದೆ ಹಿಂದೂ ಸಮಾಜದಲ್ಲಿ ಪ್ರತಿ ಮೇಲಿನ ವರ್ಗವೂ ತನ್ನ ಕೆಳಗಿನ ವರ್ಗವನ್ನು ಕೀಳೆಂದು ಪರಿಗಣಿಸುತ್ತದೆ. ಮಲೆನಾಡಿನ ಸಮಾಜದಲ್ಲಿ ಭೂಮಿಕಾಣಿಕೆ ಇಟ್ಟುಕೊಂಡ ಒಕ್ಕಲಿಗರು ಬಲಿಷ್ಠರು ಆದರೆ ಪುರೋಹಿತರು ಶ್ರೇಷ್ಠರೆಂಬ ಮನ್ನಣೆಗೆ ಪಾತ್ರರಾಗಿದ್ದಾರೆ. ಆದರೆ ಜನರ ಮೂಡನಂಬಿಕೆ ಅಸಹಾಯಕತೆಯನ್ನು ಬಳಸಿಕೊಂಡು ಅವರು ದುರ್ಮಾರ್ಗಕ್ಕಿಳಿರುರುದನ್ನೂ ಇಲ್ಲಿ ಯಥವತ್ತಾಗಿ ನಿರೂಪಿಸಲಾಗಿದೆ.

ಇಡೀ ಸಮಾಜವನ್ನು ವಸ್ತುವಾಗುಳ್ಳ ಈ ಕಾದಂಬರಿಯಲ್ಲಿ ಪ್ರಮುಖ ಸಾಮಾಜಿಕ ಘಟನೆಗಳು ಯಥೋಚಿತವಾಗಿ ಬರುತ್ತವೆ. ಯಾವುದೇ ಸಮಾಜದಲ್ಲಿಯಾದರೂ ನಾವು ಮೊದಲಿಗೆ

ಬದಲಾವಣೆ ಕಾಣುವುದು ಆಯಾ ಸಮಾಜದ ಮೇಲುವರ್ಗಗಳಲ್ಲಿ ಈ ಕಾದಂಬರಿಯಲ್ಲಿ ಬರುವ ಸಮಾಜದಲ್ಲಿ ಒಕ್ಕಲಿಗರು ಪ್ರಮುಖರು ಹಳ್ಳಿಯ ಯಾವುದೇ ಆಗು ಹೋಗಿಗೂ ಅವರೆ ಕಾರಣರು ಪಾಶ್ಚಾತ್ಯರ ಸಂಪರ್ಕದಿಂದಲೂ ಕಾಲಮಹಿಮೆಯಿಂದಲೂ ಅವರಲ್ಲಿ ಆದ ಸಾಮಾಜಿಕ ಬದಲಾವಣೆಯು ಅರಿವಿಗೆ ಮೂಲವಾಗಿ ಸುಮಾರು ೩೦-೩೫ ವರ್ಷಗಳ ಹಿಂದೆ ನಾಡಿನ ಒಕ್ಕಲಿಗ ಮುಖಂಡರಲ್ಲಿ ಒಂದು ಚಳುವಳಿಯದ್ದಿತು. ಆ ಚಳುವಳಿಗೆ ಕ್ರೈಸ್ತ ಪಾದ್ರಿಗಳ ಉಪದೇಶವೂ ಮೈಸೂರು ಸರ್ಕಾರದ ಮಲೆನಾಡು ಅಭಿವೃದ್ಧಿ ಇಲಾಖೆಯ ಭೋಧನೆಯೂ ಬ್ರಿಟಿಷ್ ಆಳ್ವಿಕೆಯಿಂದುಂಟಾದ ನಾಗರಿಕತೆಯ ಆಗಮನವೂ ಕಾಫಿ ವೈನು ವಿಸ್ಕಿ ಇತ್ಯಾದಿಯಿಂದ ವಿದೇಶಿಪಾನೀಯಗಳ ಆಮದೂ ಸನ್ನಿವೇಶ ಪ್ರಭಾವದಿಂದ ಜನರಲ್ಲಿ ಸ್ವಾಭಾವಿಕವಾಗಿಯೇ ಉತ್ಪನ್ನವಾದ ಜಾಗೃತಿಯೂ ಕಾರಣಗಳಾದುವೆಂದು ಊಹಿಸಬಹುದು. ಈ ವರ್ಣನೆ ಲೇಖಕರು ಆ ಕಾಲದ ಸಾಮಾಜಿಕ ಘಟನೆಗಳನ್ನೂ ಅವುಗಳಿಗೆ ಕಾರಣವಾದ ಅಂಶಗಳನ್ನೂ ಎಷ್ಟು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ ಎಂಬುದಕ್ಕೆ ನಿದರ್ಶನವಾಗಿದೆ.

ಮಲೆಗಳಲ್ಲಿ ಮದುಮಗಳುವಿನಲ್ಲಿ ಒಂದು ಮನೆ ಅಥವಾ ಮನೆತನ ಕಾದಂಬರಿಯ ಕೇಂದ್ರಬಿಂದುವಾಗಿಲ್ಲ ಬದಲಾಗಿ ಬಗೆ ಬಗೆಯ ಪಾತ್ರಗಳನ್ನು ಮಲೆನಾಡಿನಲ್ಲಿ ನಡೆಯುವ ಮತೀಯ ಪರಿವರ್ತನೆ ದೀನದಲಿತೆ ಜೀವನ ರೀತಿ ಸಾಮಾಜಿಕ ಸ್ಥಾನಮಾನ ಶೋಷಣೆ ಇಂತಹ ಹಲವು ಮುಖಗಳು ಕಾಣುತ್ತವೆ.

ಧಾರ್ಮಿಕವಾಗಿ ಮಲೆನಾಡಿನ ಗೌಡರ ಜೀವನ ವೈವಿಧ್ಯಮವಾಗಿದೆ, ಕಾನೂರು ಹೆಗ್ಗಡತಿ ಶಾಮಯ್ಯಗೌಡರ ಸಂಸ್ಕೃತಿ ಅನುಕರಣೆ ಅಗ್ರಹಾರದ ಆಚಾರ ವಿಚಾರಗಳು ಹಾಗೇಯೇ ಮಲೆಗಳಲ್ಲಿ ಮದುಮಗಳುವಿನಲ್ಲಿಯ ಬ್ರಾಹ್ಮಣ ಸಮಾಜ ಶಂಕರಹೆಗ್ಗಡೆಯ ಅನುಕರಣ ಸಂಸ್ಕೃತಿ ಮೂಡನಂಬಿಕೆಗಳ ಜಡತೆಯಾಗಿವೆ. (ಹೆಗ್ಗಡತಿ ಪುಟ-೧೨೦)

ಕುವೆಂಪು ಕಾದಂಬರಿಗಳಲ್ಲಿ ಒಕ್ಕಲಿಗ ಪಾತ್ರಗಳಿಗೆ ತಾವು ಬ್ರಾಹ್ಮಣರಿಂದ ಶೋಷಣೆಗೆ ಅವಮಾನಕ್ಕೆ ಒಳಗಾಗಿರುವುದು ಅರಿವಿಗೆ ಬಂದಷ್ಟು - ತಾವು ತಮಗಿಂತ ಕೀಳುಜಾತಿ ದಲಿತರನ್ನು ಅದೇ ರೀತಿ ನಡೆಸಿಕೊಳ್ಳುತ್ತಿರುವ ಬಗ್ಗೆ ತಿಳುವಳಿಕೆ ಹುಟ್ಟುವುದಿಲ್ಲ ಇದು ಕಾನೂರು ಹೆಗ್ಗಡತಿಯ ಹೊವಯ್ಯ ಚಿನ್ನಯ್ಯರ ಮಟ್ಟಿಗೆ ಎಷ್ಟು ನಿಜವೋ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಮುಕುಂದಯ್ಯ ದೇವಯ್ಯರ ಮಟ್ಟಿಗೂ ನಿಜ. ಬ್ರಾಹ್ಮಣರ ಜೊತೆ ಇವರಿಗೆ ಸಹಪಂಕ್ತಿ ನಿಜ ಆದರೆ ದಲಿತರ ಸಂಗಡ ಕೂಡ ಸಹಪಂಕ್ತಿ ಇಲ್ಲ ಯಾವ ಯಾವ ಜಾತಿಗಳವರಿಗೆ ಎಲ್ಲೆಲ್ಲಿ ಪ್ರವೇಶವಿದೆ ಯಾರು ಎಲ್ಲಿ ಕೂರಬೇಕು. ಎಲ್ಲಿ ನಿಲ್ಲಬೇಕು ಎಲ್ಲಿ ಊಟ ಮಾಡಬೇಕು ಎಲ್ಲಿ ಮಲಗಬೇಕು ಯಾರು ಯಾರನ್ನೂ ಎಷ್ಟು ಮುಟ್ಟಿಸಿಕೊಳ್ಳಬಹುದು. ಎಂಬುದಾಗಿ ಕಾದಂಬರಿಗಳು ಚಿತ್ರಿಸಿದೆ.

ಜಾತಿ ವ್ಯವಸ್ಥೆಯ ಇಕ್ಕಟ್ಟುಗಳನ್ನು ಕಾದಂಬರಿ ಕೇವಲ ಒಕ್ಕಲಿಗ ಪಾತ್ರಗಳ ದೃಷ್ಟಿಕೋನದಿಂದ ನೋಡಿಲ್ಲ ಎಂಬುದು ಗಮನಾರ್ಹ ಚನ್ನಮ್ಮನ ಮದುವೆಯ ಊಟದ ಸಂಧರ್ಭದಲ್ಲಿ ಅವರನ್ನೆಲ್ಲ ಕರೆದುಕೊಂಡು ಹೋಗಿ ಹೊರಗಿನ ಕೀಳುಜಾತಿಯ ಜನರು ಕೊತಿದ್ದ ಪಂಕ್ತಿಯಲ್ಲಿ ಹೆಂಗಸರ ನಡುವೆ ಕೂರಿಸಿದನು ಅಷ್ಟರಲ್ಲಿ ಯಾರೋ ಕೂಗಿದರು 'ಹಸರೋರು ಅಲ್ಲಿ ಕೊರಬೇಕು. ಇಲ್ಲಲ್ಲಾ ಏಳಿ ಹೆಂಗಸ್ರೆಲ್ಲಾ! (ಮಲೆಗಳಲ್ಲಿ ಮದುಮಗಳು ಪುಟ ೬೦೪) ಎನ್ನುವ ಸನ್ನಿವೇಶ ಶೋಷಣೆಯ ಕಥಾಹಂದರವನ್ನು ನೀಡುತ್ತದೆ. ಎರಡೂ ಕಾದಂಬರಿಗಳು ಮಲೆನಾಡ ಪರಿಚರವನ್ನು ಬಳಸಿಕೊಂಡಿವೆ. ಎರಡೂ ಕಾದಂಬರಿಗಳಲ್ಲಿ ರೈತರ ಒಕ್ಕಲಿಗರ ಸಾಮಾಜಿಕ, ಧಾರ್ಮಿಕ, ಆರ್ಥಿಕ ಜೀವನ ವೈವಿಧ್ಯಮಯವಾಗಿದೆ. ಮೊದಲನೆಯದರಲ್ಲಿ ತೀರ್ಥಹಳ್ಳಿಯ ಹತ್ತಿರದ ಕಾನೂರಿನ ಒಂದೆರಡು ಹಳ್ಳಿಗಳಾದರೆ ಎರಡನೆಯದರಲ್ಲಿ ಮೇಗರವಳ್ಳಿಯ ಆಸುಪಸಿನಲ್ಲಿಯ ನಾಲ್ಕಾರು ಹಳ್ಳಿಗಳ ಸುತ್ತಲಿನ ಪ್ರಕೃತಿವೈಭವ ಜೀವಂತವಾಗಿ ಚಿತ್ರಿತವಾಗಿದೆ. ಕಾದಂಬರಿಗಳು ಆ ಭೂಪ್ರದೇಶದಲ್ಲಿ ನಿಬಿಡವಾದ ಕಾಡುಮೇಡುಗಳು ಹೊಳೆ-ಹಳ್ಳಗಳು ಅಲ್ಲಿ ಪ್ರಾಕೃತಿಕ ಸ್ವರೂಪದ ಪರಿಚಯವನ್ನು ಮಾಡಿಕೊಡುತ್ತವೆ. ಅಲ್ಲಿಯ ಬದುಕುವ ಜನರ ನಿತ್ಯ ಹೋರಾಟದ ಬದುಕಿನ ನೂರಾರು ವಾಸ್ತವ ಸಂಗತಿಗಳನ್ನು ತಿಳಿಸಿಕೊಡುತ್ತವೆ. ಎರಡರಲ್ಲಿಯೂ ಮಲೆನಾಡ ಪರಿಸರವೇ ಚಿತ್ರಿತವಾಗಿದ್ದರೂ ಕಾನೂರು ಕಾದಂಬರಿಯಲ್ಲಿಯ ಕಾಡುಮೇಡುಗಳು ಹೆಚ್ಚು ರುದ್ರಭೀಷಣವಾಗಿದ್ದಂತೆ ಬಾಸವಾಗುತ್ತದೆ. ಚಂದ್ರಯ್ಯಗೌಡರ ಮನೆ ಕಿಕ್ಕಿರಿದ ಬೆಟ್ಟಗುಡ್ಡಗಳ ತಪ್ಪಲಿನಲ್ಲಿ ಇದೆ.

ಮಲೆಗಳಲ್ಲಿ ಕಾದಂಬರಿಯಲ್ಲಿ ಹುಲಿಕಲ್ಲು ನೆತ್ತಿ ಮತ್ತು ದಾರಿಯಲ್ಲಿಯ ಚಿತ್ರದಸಾರವನ್ನು ಬಿಟ್ಟರೆ ಕಾಡಿನ ನಿಬಿಡತೆ ಮನಸ್ಸಿನಲ್ಲಿ ಅಷ್ಟಾಗಿ ಅಚ್ಚೊತ್ತಿ ನಿಲ್ಲುವುದಿಲ್ಲ.

ಎರಡೂ ಕಾದಂಬರಿಗಳಲ್ಲಿ ಎದ್ದು ಕಾಡುವ ಪಾತ್ರ ಸೃಷ್ಟಿಯ ವೈವಿದ್ಯ ಹಾಗೂ ಜೀವಂತಿಕೆ ಅಚ್ಚರಿಗೊಳಿಸುವಂತವು ಎಲ್ಲ ಬಗೆಯ ಎಲ್ಲ ಸ್ತರಗಳ ಜನಗಳಿದ್ದಾರೆ. ಒಬ್ಬರಂತೆ ಇನ್ನೊಬ್ಬರಿಲ್ಲ ಮಲೆನಾಡಿನ ಕಾಡುಗಳ ಮಧ್ಯದಲ್ಲಿ ಮನುಷ್ಯ ಅಥವಾ ಮಲೆನಾಡ ಕಾಡುಗಳಿಗೆ ಇದಿರಾಗಿ ಮನುಷ್ಯ ಎಂಬ ವಿಚಾರಧಾರೆ ಕಾನೂರು ಕಾದಂಬರಿಯಲ್ಲಿಯ ಆಸಕ್ತಿ ಕೇಂದ್ರವಾಗಿರುವುದರಿಂದ ಅದರಲ್ಲಿಯ ಮುಖ್ಯ ಪಾತ್ರಗಳ ನಡುವಿನ ಸಂಬಂಧಗಳ ವಿನ್ಯಾಸ ಒಂದು ವಿಶಿಷ್ಟವಾದ ಬಗೆಯಲ್ಲಿ ರೂಪುಗೊಳ್ಳುತ್ತದೆ. ಚಂದ್ರಯ್ಯಗೌಡರು ಅರಣ್ಯಕ ಪ್ರವೃತ್ತಿಗಳನ್ನೇ ಪ್ರತಿನಿಧಿಸುತ್ತಾರೆ. ಅವರಿಗೆ ಇದಿರಾಗಿ ಹೂವಯ್ಯ ಮತ್ತು ಶಾಮಯ್ಯಗೌಡರು ಮಾನವೀಯ ಗುಣಗಳನ್ನು ಪ್ರತಿನಿಧಿಸುತ್ತಾರೆ. ಇವರ ನಡುವೆ ಸಿಂಗಪ್ಪಗೌಡರು ಒಮ್ಮೆ ಆಚೆ-ಈಚೆ ಹೊಯ್ದಾಡುತ್ತಾರೆ. ಅವರವರ ಪರಿವಾರದವರು ಹಿರಿಯರನ್ನು ಹೆಚ್ಚು ಕಡಿಮೆ ಹಿಂಬಾಲಿಸಿಕೊಂಡು ಹೋಗುತ್ತಾರೆ.

"ಮಲೆಗಳಲ್ಲಿ" ಕಾದಂಬರಿಯ ಪಾತ್ರ ವೈವಿಧ್ಯ ಯಾವ ಬಗೆಯ ವಿನ್ಯಾಸಕ್ಕೂ ಒಳಪಡುವುದಿಲ್ಲ. ಆರೇಳು ಮನೆತನಗಳಿಗೆ ಹೊನ್ನಾಳಿಯ ಸಾಬರಗಳು ಆಳುಗಳು ಪೋಲೀಸರು ಪಾದ್ರಿ ಮತ್ತಿತರು ಸೇರಿ ಜೀವನದ ಸಂಕೀರ್ಣತೆಯನ್ನೂ ಪ್ರತಿನಿಧಿಸುವಂತೆ ಇಲ್ಲಿಯ ಪಾತ್ರವರ್ಗ ವಿಸ್ತಾರವಾಗಿ ಹರಡಿಕೊಂಡು ನಿಲ್ಲುತ್ತದೆ.

ಮಲೆನಾಡ ಜೀವನದ ಚಿತ್ರವನ್ನು ಕೊಡುವುದು ಕಾನೂರು ಕಾದಂಬರಿಯ ಮೂಲ ಉದ್ದೇಶವಾಗಿದ್ದರೆ ಮನುಷ್ಯ ವ್ಯಾಪಾರಗಳ ಜಟಿಲ-ಅಂತಸ್ಸಂಬಂಧಗಳನ್ನು ಗುರುತಿಸಿ ಬದುಕಿನಲ್ಲಿಯ ಬೆಳವಣಿಗೆಗಳ ಚಿತ್ರವಿಚಿತ್ರ ಗತಿಯನ್ನು ಚಿತ್ರಿಸುವುದು ಮಲೆಗಳಲ್ಲಿ ಕಾದಂಬರಿಯ ಉದ್ದೇಶವಾಗಿದೆ.

ಇಡೀ ಸಮಾಜವನ್ನೇ ವಸ್ತುವಾಗುಳ್ಳ ಈ ಕಾದಂಬರಿಯಲ್ಲಿ ಪ್ರಮುಖ ಸಾಮಾಜಿಕ ಘಟನೆಗಳು ಯದೋಚಿತವಾಗಿ ಬರುತ್ತವೆ. ಯಾವುದೇ ಸಮಾಜದಲ್ಲಿಯಾದರೂ ನಾವು ಬದಲಾವಣೆಗಳನ್ನು ಕಾಣುವುದು ಆಯಾ ಸಮಾಜದ ಮೇಲುವರ್ಗಗಳಲ್ಲಿ ಈ ಕಾದಂಬರಿಯಲ್ಲಿ ಬರುವ ಸಮಾಜದಲ್ಲಿ ಒಕ್ಕಲಿಗರು ಪ್ರಮುಖರು ಹಳ್ಳಿಯ ಯಾವುದೇ ಆಗುಹೋಗಿಗೂ ಅವರೇ ಕಾರಣರು ಪಾಶ್ಚಾತರ ಸಂಪರ್ಕದಿಂದಲೂ ಕಾಲಮಹಿಮೆಯಿಂದಲೂ ಅವರಲ್ಲಿ ಆದ ಸಾಮಾಜಿಕ ಬದಲಾವಣೆಯ ಅರಿವಿಗೆ ಮೂಲವಾಗಿ ಸುಮಾರು ಮೂವತ್ತು ಮೂವತ್ತೈದು ವರ್ಷಗಳ ಹಿಂದೆ ನಾಡಿನ ಒಕ್ಕಲಿಗೆ ಮುಖಂಡರಲ್ಲಿ ಒಂದು ಚಳುವಳಿ ಆರಂಭವಾಗುತ್ತದೆ.

ಈ ಕಾದಂಬರಿಯಲ್ಲಿ ಬರುವ ಸಾಮಾಜಿಕ ಚಿತ್ರಗಳು ಹಲವಾರು ದಕ್ಷಿಣ ಕನ್ನಡ ಜಿಲ್ಲೆಯಿಂದ ಘಟ್ಟದ ಮೇಲೆ ಬಂದು ಜೀವನ ನಿರ್ವಹಣೆ ಮಾಡುವ ಘಟ್ಟದಾಳುಗಳು ಮಲೆನಾಡಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತಾರೆ. ಈ ಘಟ್ಟದಾಳುಗಳಲ್ಲಿ ವಿವಿಧ ಜಾತಿಗೆ ಸೇರಿದವರಾಗಿರುತ್ತಾರೆ. ಅವರಲ್ಲಿ ಸೆಟ್ಟರು ಮೇಲುವರ್ಗಕ್ಕೆ ಸೇರಿದವರು ಇವರು ಮೇಸ್ತ್ರಿಗಳಾಗಿ ತಮ್ಮ ಊರಿನ ಕಡೆಯಿಂದ ಆಳುಗಳನ್ನು ತಂದು ಇಲ್ಲಿ ಭೂ-ಮಾಲೀಕರಿಗೆ ಒದಗಿಸುತ್ತಾರೆ. ಈ ಸೇರೆಗಾರರು ಮಲೆನಾಡಿನಲ್ಲಿ ಒಕ್ಕಲಿಗರಿಗಿಂತ ಕೀಳೆಂದು ಪರಿಗಣಿತರಾಗುತ್ತಾರೆ. ಆರ್ಥಿಕ ಅನಿವಾರ್ಯತೆಯಿಂದ ಬರುವವರು ಹಲವರಾದರೆ ತಮ್ಮ ಸ್ವಂತ ಊರುಗಳಲ್ಲಿ ಯಾವುದಾದರು ಸಾಮಾಜಿಕ ಕಷ್ಟಗಳನೆಸಗಿ ಓಡಿಬರುವವರು ಕೆಲವರು. ಇವರೆಲ್ಲಾ ತಮ್ಮ ಬಂದು ಬಳಗದಿಂದ ಅನ್ಯವಾದ-ದೂರವಾದ ಸಮಾಜದಲ್ಲಿ ಬದುಕುವುದರಿಂದ ಇಲ್ಲಿ ಕೆಲವರು ಸ್ವೇಚ್ಚೆಯಾಗಿ ವರ್ತಿಸುವುದೂ ಉಂಟು ಗಂಡ ಸೀರೆಗಾರ ರಂಗಪ್ಪಸೆಟ್ಟರು ಮೊದಲಾದವರು ಇದಕ್ಕೆ ನಿದರ್ಶನಗಳಾಗಿ ನಿಲ್ಲುತ್ತಾರೆ.

ಸೀರೆಗಾರರು ಮತ್ತು ಕಾನೂರು ಹೆಗ್ಗಡತಿ ಸುಬ್ಬಮ್ಮನ ಸಂಬಂಧ ಕಾದಂಬರಿಯಲ್ಲಿ ವಿಶಿಷ್ಟ ಮಹತ್ವದಿಂದ ಕೂಡಿದೆ. ಸುಬ್ಬಮ್ಮನ ಆಕೃತ್ಯ ಕಣ್ಣಿಗೆ ಹೊಡೆದಂತೆ ಕಾಣಿಸಿದರೂ ಅವಳು

ಚಂದ್ರಯ್ಯ ಗೌಡರಿಗೆ ಮೂರನೇ ಹೆಂಡತಿಯಾಗಿ ಬಂದಷ್ಟು ಮೇಲುವರ್ಗದ ಪುರುಷರು ಕೆಳವರ್ಗಕ್ಕೆ ಸೇರಿದ ಸ್ತ್ರೀಯರೊಂದಿಗೆ ದೇಹಸಂಬಂಧ ಬೆಳೆಸುವ ಪ್ರಕರಣಗಳೇ ಇತ್ತೀಚಿನ ಸಾಹಿತ್ಯವೂ ಸೇರಿದಂತೆ ನಮ್ಮ ಸಾಹಿತ್ಯದಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಘಟ್ಟದಾಳುಗಳಲ್ಲಿ ಸೋಮಯ್ಯಸೆಟ್ಟರಂಥವರೂ ಇರುತ್ತಾರೆಂಬುದನ್ನು ಮರೆಯಲಾಗದು ಇವರೆಲ್ಲ ಕಾದಿರುವ ಸಮಾಜದಲ್ಲಿ ಹೇಗೆ ಸಕ್ರಿಯವಾಗಿ ತೊಡಗುತ್ತಾರೆ. ಮತ್ತು ತಮ್ಮ ಪರಿಸರದ ಮೇಲೆ ಪ್ರಭಾವ ಬೀರುತ್ತಾರೆ. ಎಂಬುದು ಇಲ್ಲಿ ಯಥಾವತ್ತಾಗಿ ಚಿತ್ರಿತವಾಗಿದೆ.

ಈ ಘಟ್ಟದಾಳುಗಳ ಜೊತೆಯೇ ಕೋಳಜೂಜು ಸಹ ಮಲೆನಾಡಿಗೆ ಪ್ರವೇಶಿಸಿತು. ಕೋಳಿ ಅಂಕವನ್ನು ಒಂದು ಸಣ್ಣ ಯುದ್ಧರಂಗಕ್ಕೆ ಹೋಲಿಸಬಹುದು. ಈ ಕೋಳಿ ಅಂಕದ ಪಟ್ಟಿಯಲ್ಲಿ ನಡೆಯುವ ಕೋಳಿ ಜೂಜನ್ನು ಲೇಖಕರು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ಅಲ್ಲಿಯ ಘಟನೆಗಳು ರೋಮಾಂಚಕರವೂ ಭಯಂಕರವೂ ಆಗಿದ್ದು ಕೆಲವೊಮ್ಮೆ ದುರಂತದಲ್ಲೂ ಪರ್ಯಾವಸಾನ ವಾಗುವುದುಂಟು. ಇಂಥ ವಿಷಯಗಳಲ್ಲಿ ಕುವೆಂಪು ಅವರಿಗಿರುವ ಪರಿಜ್ಞಾನ ಆಶ್ಚರ್ಯಕರವೇ ಸರಿ.

ಹಾಗೆಯೇ ಮಲೆನಾಡಿಗೆ ವಿಶಿಷ್ಟವಾದ ಮತ್ತು ಅದರ ಜೀವನದ ಒಂದು ಭಾಗವಾದ ಕಾಡುಕೋಳಿ ಶಿಕಾರಿ, ಕಾಡುಹಂದಿಬೇಟೆ, ಹುಲಿಯಬೇಟೆ, ಮೊದಲಾದ ಪ್ರಸಂಗಗಳನ್ನು ಚಿತ್ರಿಸಿರುವ ಶೈಲಿ ಮತ್ತು ಅವುಗಳ ವಿವರಗಳು ಕುತೂಹಲಕಾರಿಯಾಗಿವೆ. ಕುವೆಂಪು ಅವರು ತಮ್ಮ ಬಾಲ್ಯದಲ್ಲಿ ಅನುಭವಿಸಿರಬಹುದಾದ ಮತ್ತು ಕಂಡಿರಬಹುದಾದ ಇಂತ ವಿಷಯಗಳ ಬಗ್ಗೆ ಅವರಿಗಿರುವ ಅಪಾರ ಆಸಕ್ತಿ ಶ್ರದ್ಧೆ ಬೆರಗುಗೊಳಿಸುವಂತಹದ್ದು

ಮಲೆನಾಡಿನ ಜೀವನದ ಮೇಲೆ ಅರಣ್ಯ ಹೇಗೆ ಪ್ರಭಾವ ಬೀರಿದೆಯೋ ಹಾಗೆಯೇ ಅಲ್ಲಿಯ ಕಾಡುಪ್ರಾಣಿಗಳೂ ಪ್ರಭಾವ ಬೀರಿವೆ. ಈ ಶಿಕಾರಿಗಳಲ್ಲಿ ಮನುಷ್ಯರೂ ನಾಯಿಗಳು ಸಹಭಾಗಿಗಳಾಗಿ ತೊಡಗುತ್ತಾರೆ. ಮೀನು ಹಿಡಿಯುವುದು ಏಡಿ ಹಿಡಿಯುವುದು ಇವೆಲ್ಲ ಅಲ್ಲಿ ಕೆಲವರಿಗೆ ಒಂದು ಬಗೆಯ ಹವ್ಯಾಸಗಳಾಗಿಯೇ ಪರಿಣಮಿಸಿರುತ್ತವೆ.

ಕುಡಿತ ಮಲೆನಾಡಿನ ಅವಿಭಾಜ್ಯ ಅಂಶವಾಗಿದೆ ಕಳ್ಳಂಗಡಿಗಳಲ್ಲಿ ಮೇಲು ಕೀಳೆನ್ನದೆ ಎಲ್ಲರೂ ಒಟ್ಟಿಗೆ ಸೇರಿ ಕುಡಿಯುತ್ತಾರೆ. ಸೀತೆಯನ್ನು ಮದುವೆಯಾಗಲು ಸಿದ್ದವಾಗಿದ್ದ ಕೃಷ್ಣಪ್ಪ ಜಾಕಿ ಓಬಯ್ಯರೊಡನೆ ಕಳ್ಳೂ ಕುಡಿಯುತ್ತಿದ್ದಾಗ ಮುತ್ತಳ್ಳಿಯ ಗಾಡಿ ಅಂಗಳಕ್ಕೆ ಬಂದು ನಿಂತಾಗ ಅವನು ತೋರಿಸಿದ ಮುಜುಗರ ಮೇಲುವರ್ಗದ ಜನ ಸಮಾಜದಲ್ಲಿ ತೆರೆಯ ಹಿಂದೆ ಒಂದು ರೀತಿ ಇರುತ್ತಾರೆ. ಬಹಿರಂಗವಾಗಿ ಒಂದು ರೀತಿ ಇರುತ್ತಾರೆ. ಎಂಬುದಕ್ಕೆ

ನಿದರ್ಶನವಾಗಿದೆ. ಮಲೆನಾಡ ಸಮಾಜ ಸಂಕೀರ್ಣ ಜಾತಿ ವ್ಯವಸ್ಥೆಯಿಂದ ಕೂಡಿದೆ. ಪುಟ್ಟಣ್ಣ, ಸೇರೆಗಾರರು, ನಿಂಗ ಮೊದಲಾದವರು ಮುಟ್ಟಾಳುಗಳು, ತಿಮ್ಮನಂತಹ ಹಳೇಪೈಕರದವನು ಬೇಲರ ಬೈರನಂತಹ ಕೀಳು ಜಾತಿಯವನು ಗೌಡರ ಮನೆಯ ಒಳಗಡೆ ಬರುವಂತಿಲ್ಲ ಮುಟ್ಟಾಳುಗಳು ಗೌಡರ ಮನೆಯ ಒಳಗಡೆ ಬರಬಹುದು. ಇದು ಹಿಂದೂ ಜಾತಿ ವ್ಯವಸ್ಥೆಯಲ್ಲಿ ಒಬ್ಬನ ಹೆಗಲ ಮೇಲೆ ಮತ್ತೊಬ್ಬ ಕುಳಿತಿರುವ ಸ್ಥಿತಿಯನ್ನು ಸೂಚಿಸುತ್ತದೆ.

ಈ ಕಥೆಯ ಕೊನೆಯ ಹೊತ್ತಿಗೆ ಮಲೆನಾಡಿನ ಕಾನೂರು ಮುತ್ತಳ್ಳಿ ಸೀತೆಯನೆ ಮತ್ತು ಸುತ್ತಣ ಹಳ್ಳಿಗಳಲ್ಲಿ ನವಜೀವನ ಕಾಲಿಡುತ್ತದೆ. ಆಧುನಿಕ ನಾಗರಿಕ ಸೌಲಭ್ಯಗಳು ಹಳ್ಳಿಗಳಿಗೆ ಬಂದಿರುತ್ತವೆ. ಗಾಂಧಿವಾದಿಗಳು ಆಗಾಗ ಬಂದು ಉಪನ್ಯಾಸ ಕೊಡುತ್ತಿರುತ್ತಾರೆ. ಇದರಿಂದ ದೇಶಪ್ರೇಮ ರಾಜಕೀಯ ಪ್ರಜ್ಞೆ ಜನರಲ್ಲಿ ಮೂಡುತ್ತಿರುತ್ತದೆ. ಮಾರಿಯ ಹರಕೆ ದೆವ್ವದ ಪೂಜೆ ಮೊದಲಾದ ಮೂಢಾಚಾರಗಳು ಬದಲಾಗಿ ಉತ್ಕೃಷ್ಟ ಮತವಿಧಾನಗಳು ಆಚರಣೆಗೆ ಬರುತ್ತಿದ್ದವು. ಕಾಡಿಗೆ ನಾಗರಿಕತೆ ಕಾಲಿಟ್ಟಿತು. ಹೂವಯ್ಯನ ಧ್ಯಾನ, ಏಕಾಗ್ರತೆ ಮತ್ತು ಆತ್ಮಸಾಧನೆಯ ಮಾರ್ಗದಲ್ಲಿ ಔನ್ನತ್ಯವನ್ನು ಸಾಧಿಸಿದ್ದರ ಜೊತೆಗೆ ಗುಡಿಸಲುಗಳಲ್ಲಿ ವಾಸಿಸುವ ಬಡವರು ತಮ್ಮ ಪರಿಸ್ಥಿತಿಯನ್ನೂ ಉತ್ತಮಪಡಿಸಿಕೊಳ್ಳಲು ಮೂಡನಂಬಿಕೆಗಳನ್ನೂ ತೊರೆದು ಕಾಯಿಲೆ ಬಂದಾಗ ಜೋಯಿಸರ ಬಳಿಗೆ ಹೋಗದೆ ಆಸ್ಪತ್ರೆಗೆ ಹೋಗುವಂತೆ ಮಾಡುವುದರಲ್ಲಿ ಯಶಸ್ವಿಯಾದನು.

ಮಲೆಗಳಲ್ಲಿ ಮದುಮಗಳು ಮತ್ತು ಕಾನೂರು ಹೆಗ್ಗಡತಿ ಕಾದಂಬರಿಗಳು ನಮ್ಮ ಸಮಾಜದ ಬೆಳವಣಿಗೆಯ ವಿವಿಧ ಘಟ್ಟಗಳನ್ನು ಪ್ರತಿನಿಧಿಸುತ್ತಿವೆ.

ಒಟ್ಟಾರೆ ಎರಡು ಕಾದಂಬರಿಗಳ ಸಮಾಜ ಭಿನ್ನವಾದರೂ ಮಲೆನಾಡಿನ ನಿಸರ್ಗದ ವೈವಿಧ್ಯತೆಯನ್ನು ಕುವೆಂಪು ತಮ್ಮ ಮನೋಭೂಮಿಕೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಸಮಾಜದ ಮೇಲುವರ್ಗದ ಜನಜೀವನ ಕುವೆಂಪು ಅವರಲ್ಲಿ ಕೆಲವೊಮ್ಮೆ ವಿಡಂಬಿಸಲ್ಪಟ್ಟಿದೆ. ನಾಗರಿಕ ಪಾತ್ರಗಳನ್ನಬಹುದಾದ ಕಾನೂರು ಹೆಗ್ಗಡತಿಯ ಶಾಮಯ್ಯಗೌಡರ ಸಂಸ್ಕೃತಿ ಅನುಕರಣೆ ಅಗ್ರಹಾರದ ಆಚಾರ–ವಿಚಾರಗಳು ಹಾಗೆಯೇ ಮಲೆಗಳಲ್ಲಿ ಮದುಮಗಳುವಿನಲ್ಲಿಯ ಬ್ರಾಹ್ಮಣ ಸಮಾಜ ಚಿತ್ರ ಶಂಕರಹೆಗ್ಗಡೆಯ ಅನುಕರಣ ಸಂಸ್ಕೃತಿ ಇವುಗಳ ಮೂಲಕ ಸಂಸ್ಕೃತಿ ಪ್ರಜ್ಞಾಪೂರ್ವಕವಲ್ಲದ ಸ್ಥಿತಿಯಲ್ಲಿ ಹೇಗೆ ಅರ್ಥವಿಲ್ಲದ ಆಚಾರ ಕಟ್ಟುಕಟ್ಟಳೆಗೂ ಜಡಕೋಣೆಯಾಗುತ್ತದೆ. ಎಂಬುದನ್ನು ಮನದಟ್ಟು ಮಾಡಿಕೊಡಲು ಚಿತ್ರಿಸಿದ ಪಾತ್ರ ಸನ್ನಿವೇಶಗಳಂತೆ ತೋರುತ್ತವೆ.

ಕಾನೂರು ಹೆಗ್ಗಡತಿಯ ಚಂದ್ರಯ್ಯಗೌಡರ ಆಚಾರಗಳು ಮಲೆಗಳಲ್ಲಿ ಮದುಮಗಳುವಿನಲ್ಲಿಯ ಭೈರಮ್ಮೆ ಹೆಗ್ಗಡೆಯವರ ಪೂಜಾವಿಧಾನ ಸ್ವಲ್ಪಮಟ್ಟಿಗೆ ಮಧ್ಯಮವರ್ಗದ ಜನಜೀವನವನ್ನು

ಪ್ರತಿನಿಧಿಸಿದರೂ ವಾಸ್ತವಿಕವಾಗಿ ಶ್ಯಾಮಯ್ಯಗೌಡ ಹಾಗೂ ಶಂಕರಹೆಗ್ಗಡೆಯವರ ಮನೋಧರ್ಮದ ವ್ಯತ್ಯಾಸದೊಂದಿಗೆ ಅದೇ ವರ್ಗಕ್ಕೆ ಸೇರುತ್ತಾರೆ.

ಒಟ್ಟು ಕಾದಂಬರಿಯ ದೃಷ್ಟಿಯಿಂದ ಕ್ಷುದ್ರ ಪಾತ್ರವಾದ 'ಯೆಂಕಿ'ಯ ಪಾತ್ರ ನಿರ್ಲಕ್ಷಣೀಯವಲ್ಲ ಜನಜೀವನದ ಬದುಕಿನ ವೈವಿಧ್ಯದ ಮೇಲಿನ ಹೇಳಿಕೆ ಕೇವಲ ಹೇಳಿಕೆಯಾಗಿಯೇ ಉಳಿಯದೆ ಕ್ರಿಯಾತ್ಮಕವಾಗಿಯೂ ಮೂಡಿಬರುವುದರ ಮೂಲಕ ಅರ್ಥಮಯತೆಯನ್ನು ಸಾಧಿಸಿಕೊಳ್ಳುತ್ತದೆ.

ಮಲೆಗಳಲ್ಲಿ ಮದುಮಗಳುವಿನಲ್ಲಿನ ಜೀವನ ಚಿತ್ರಣ ಒಂದು ವರ್ಗ ಅಥವಾ ಕೋಮಿನ ಚಿತ್ರಣಕ್ಕೆ ಸೀಮಿತಗೊಳ್ಳದೆ ಮಲೆನಾಡಿನ ಎಲ್ಲಾ ಜಾತಿಯ ಎಲ್ಲ ಸ್ತರದ ಜನಜೀವನವನ್ನು ಒಳಗೊಳ್ಳಲು ಪ್ರಯತ್ತಿಸುತ್ತಿರುವುದು ಗಮನಾರ್ಹವಾಗಿದೆ. ಕಾದಂಬರಿಯ ಮೊದಲಲ್ಲೇ ಬರುವ ಗುತ್ತಿ ಹರಿಜನ ಎರಡನೇ ಅಧ್ಯಾಯದಲ್ಲಿ ಬರುವ ಸೇಸನಾಯ್ಕ, ತಿಮ್ಮನಾಯ್ಕ, ದೀವರು, ಬಿಲ್ಲವರು, ಹಳೇಪೈಕದವರು, ಸಾಬರು, ಒಕ್ಕಲಿಗರು, ಬ್ರಾಹ್ಮಣರು ಐತ-ಪೀಂಚಲುವಿನಂಥ ಬಿಲ್ಲವರು, ಕ್ರೈಸ್ತರು ಹೀಗೆ ಅಸಂಖ್ಯಾತ ಪಾತ್ರಗಳು ಮಲೆನಾಡಿನ ಒಂದು ವರ್ಗ ಅಥವಾ ಜಾತಿಯನ್ನು ಬಿಡದೆ ಪ್ರತಿನಿಧಿಸಿವೆ. ಅದಕ್ಕೆ ಮಲೆಗಳಲ್ಲಿ ಮದುಮಗಳುವಿನಲ್ಲಿ ವಿವರಗಳು ಪಾತ್ರಗಳೂ ಕಿಕ್ಕಿರಿದಿವೆ.

ಒಟ್ಟಿನಲ್ಲಿ ಜನಜೀವನ ದೃಷ್ಟಿಯಿಂದ ಕುವೆಂಪು ಅವರ ಕಾದಂಬರಿಗಳು ಮೈದುಂಬಿಕೊಂಡು ಜೀವಂತವಾಗಿ ಮೂಡಿಬಂದಿವೆ.

'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲೂ ಒಂದು ರೀತಿಯಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಸಾಮಾಜಿಕ ಸನ್ನಿವೇಶಗಳೇ ಕಾಣಿಸಿಕೊಳ್ಳುತ್ತವೆ. ಆದರೆ ಅಲ್ಲಿಯ ಅಮಾಯಕ ಜೀವನವಾಗಲಿ, ಮುಗ್ಧ ಮೌಢ್ಯದ ಸಮಾಜವಾಗಲಿ ಇಲ್ಲಿಲ್ಲ. ಇಲ್ಲಿಯ ಸಮಾಜದಲ್ಲಿ ಆಗಲೇ ಆಧುನಿಕ ಶಿಕ್ಷಣದ ಮತ್ತು ನಾಗರಿಕತೆಯ ಗಾಳಿ ಬೀಸಿದೆ. ಕಾಲ ಸನ್ನಿ ವೇಶದ ದೃಷ್ಟಿಯಿಂದ ಇದು ಈ ಶತಮಾನದ ಪ್ರಾರಂಭದ ಕಾಲಕ್ಕೆ ಸೇರುತ್ತದೆ. ಕಾದಂಬರಿಯ ಪ್ರಾರಂಭದಲ್ಲಿಯೇ ಆಧುನಿಕ ಶಿಕ್ಷಣ ಮತ್ತು ಪಟ್ಟಣ ಜೀವನದ ಹೇರುಹೊತ್ತ ಹೂವಯ್ಯ ಮತ್ತು ರಾಮಯ್ಯರು ಮಲೆನಾಡಿಗೆ ಪ್ರವೇಶಿಸುತ್ತಾರೆ. ಮಲೆನಾಡಿನ ಆಗಿನ ಸಮಾಜ ತನ್ನ ಅನೂಚಾನ ಪದ್ಧತಿಗಳನ್ನು ಮೌಢ್ಯಾಚಾರಣೆಗಳನ್ನು ಇನ್ನೂ ಉಳಿಸಿಕೊಂಡಿರುವಂಥದ್ದು. ಇದರಲ್ಲಿ ಪ್ರವೇಶಿಸಿದ ಅಧುನಿಕತೆಯ ಪರಿಣಾಮವಾಗಿ ವೈಚಾರಿಕ ತುಮುಲು, ಮೌಲ್ಯಗಳ ಸಂಘರ್ಷ, ಮತ್ತು ದ್ವಂದ್ವಪ್ರತಿಕ್ರಿಯೆಗಳನ್ನು ಕಾಣಬಹುದು. ಹಾಗೆಯೇ ಪ್ರಕೃತಿಯೊಡನೆ ನಿತ್ಯಸಾನಿಧ್ಯ, ಸೆಣಸಾಟ, ಸೌಂದರ್ಯಾನುಭವಗಳು ಅಲ್ಲಿನ ಸಮಾಜವನ್ನು ವೈವಿಧ್ಯವೂ ವಿಶಿಷ್ಟವೂ ದಟ್ಟವೂ ಆಗಿ

ಮಾರ್ಪಡಿಸಿವೆ. ಇಂತಹ ಒಂದು ಸಂಕೀರ್ಣ ಸಮಾಜದಲ್ಲಿ ಕಂಡು ಬರುವ ಸಾಮಾಜಿಕ ಪ್ರಜ್ಞೆ ನಮ್ಮ ಸಮಾಜದ ನವೋದಯದ ಪ್ರತೀಕವಾಗಿ ನಿಲ್ಲುತ್ತದೆ.

ಕಾನೂರು "ಮನೆ ಹಳೆಯ ಕಾಲದ್ದು. ರಚನೆಯಲ್ಲಿ ಎಲ್ಲೆಲ್ಲಿ ನೋಡಿದರೂ ಭೀಮತೆ ಪ್ರಧಾನವಾಗಿತ್ತು. ಗೋಡೆ ಕಂಬಗಳಿಂದ ಹಿಡಿದು ತೊಲೆ, ಪಕಾಸಿ, ರೀಪುಗಳವರೆಗೂ ಸ್ಥೂಲತೆ ತೋರುತ್ತಿತ್ತು. ಮನೆಗೆ ಹೊದಿಸಿದ್ದ ಮಂಗಳೂರು ಹೆಂಚುಗಳು ಮಳೆ ಬಿಸಲುಗಳಲ್ಲಿ ಹಾವಸೆ ಹಬ್ಬಿ, ಒಣಗಿ ತಮಗೆ ಹೊದಿಸಿದ್ದ ಮಂಗಳೂರು ಹೆಂಚುಗಳು ಮಳೆ ಬಿಸಲುಗಳಲ್ಲಿ ಹಾವಸೆ ಹಬ್ಬಿ, ಒಣಗಿ ತಮಗೆ ಸಹಜವಾಗಿದ್ದ ಮಣ್ಣಿನ ಕೆಂಬಣ್ಣವನ್ನು ತೊರೆದು ಕಪ್ಪಾಗಿದ್ದವು. ಅಲ್ಲಲ್ಲಿ ಮುಂಗಾರುಗಳಲ್ಲಿ ಬಿದ್ದ ದೊಡ್ಡ ದೊಡ್ಡ ಅಲಿಕಲ್ಲುಗಳಿಂದ ಬಿರುತು ಬಿಟ್ಟು ಸೋರುತ್ತಿದ್ದ ಹೆಂಚುಗಳನ್ನು ತೆಗೆದು ಹೊಸ ಹೆಂಚುಗಳನ್ನು ಹಾಕಿದ್ದರಿಂದ ಸರ್ವಸಾಮಾನ್ಯವಾದ ಪ್ರಾಚೀನತೆಯ ನಡುವೆ ಅಪೂರ್ವವೂ, ವಿರಳವೂ ಆಗಿರುವ ನವೀನತೆ ತಲೆ ಹಾಕಿದಂತಿತ್ತು..... ಪ್ರಾಕಾರದ ನಡುವೆ ಇದ್ದ ಅಂಗಳದಲ್ಲಿ ಕಗ್ಗಲ್ಲಿನಿಂದ ವಿರಚಿಸಿದ್ದ ಒಂದು ದೊಡ್ಡ ತುಲಸೀ ಪೀಠವು ಶಿರದಲ್ಲಿ ಪುಷ್ಟವಾಗಿ ಬೆಳೆದಿದ್ದ ಒಂದು ತುಲಸೀ ಗಿಡವನ್ನು ಹೊತ್ತು "ಅಂಗಳದ ವೇದರಾಗಿ ಕುಳಿತಿತ್ತು. ಅಂಗಳದ ಮೂಲೆಯಲ್ಲಿ ಅಡಕೆ ಒಲೆ, ಪಕ್ಕದಲ್ಲಿ ಮರದ ನೇಗಿಲು, ಜಗಲಿಯ ಮೇಲೆ ಒಂದು ಹೆಗ್ಗಡಿಯಾರದ ಸುತ್ತಲೂ ಕೆಲವು ತಿರುಪತಿಯ ಬಣ್ಣದ ಚಿತ್ರಗಳಿದ್ದವು. ಜೊತೆಗೆ ರವಿವರ್ಮನ ಬಣ್ಣದ ದೇವತೆಗಳೂ ಕುಳಿತಿದ್ದರು. ಒಬ್ಬಬ್ಬರ ದೇಶಭಕ್ತರ ಪಟಗಳೂ ಭಾರತಾಂಬೆಯ ಚಿತ್ರಪಟವೂ ಅಲ್ಲಿದ್ದುದು, ಸರ್ವವ್ಯಾಪಿಯಾಗುತ್ತಿದ್ದ ರಾಷ್ಟ್ರೀಯ ಮಹಾ ಸಭೆಯ ಪ್ರಭಾವವು ತನ್ನ ಕ್ಷೇಮಕರವಾದ ಆಶೀರ್ವದ ಹಸ್ತವನ್ನು ಆ ಮಲೆನಾಡಿನ ಮೂಲೆಗೂ ಚಾಚಿತ್ತು ಎಂಬುದಕ್ಕೆ ಸ್ಪಷ್ಟವಾದ ಸಾಕ್ಷಿಯಾಗಿ, ಆ ಮನೆಯಲ್ಲಿ ಪ್ರಾಚೀನ ನವೀನಗಳ ಸ್ನೇಹವೋ ಸಮರವೋ ನಡೆಯತೊಡಗಿದ್ದಂತೆ ತೋರುತ್ತಿತ್ತು" (ಪು. ೩೫-೩೬).

ಕಾನೂರಿನ ಜೀವನಕ್ಕೆ ಅಧಾರಸ್ತಂಭವಾಗಿದ್ದ ಚಂದ್ರಯ್ಯಗೌಡರ ಮನೆಯ ಮತ್ತು ಅಲ್ಲಿನ ಪರಿಸರದ ಈ ವರ್ಣನೆ ನಮಗೆ ಅಲ್ಲಿಯ ಸಂಸ್ಕೃತಿಯ ಒಂದು ಇಡೀ ಚಿತ್ರವನ್ನು ಹಿಡಿದು ಕೊಡುತ್ತದೆ. ಆ ಮನೆಯ ಭೀಮತೆ ಮತ್ತು ಪ್ರಾಚೀನತೆಗಳ ವರ್ಣನೆ ಅದು ಬಾಳಿಬದುಕಿ ಚಿತ್ರಗಳು, ದೇಶಭಕ್ತರ ಪಟಗಳು, ಭಾರತಾಂಬೆಯ ಚಿತ್ರಪಟ-ಇವು ಅಲ್ಲಿಯ ಧಾರ್ಮಿಕ ಹಾಗೂ ಸಾಮಾಜಿಕ ಸನ್ನಿವೇಶವನ್ನು ಪರಿಚಯಿಸುತ್ತವೆ. ಲೇಖಕರೇ ಹೇಳಿರುವಂತೆ "ಆ ಮನೆಯಲ್ಲಿ ಪ್ರಾಚೀನ ನವೀನಗಳ ಸ್ನೇಹವೂ ಸಮರವೋ ನಡೆಯತೊಡಗಿದಂತೆ ತೋರುತ್ತಿತ್ತು" ಎಂಬ ಮಾತು ತುಂಬಾ ಔಚಿತ್ಯಪೂರ್ಣವಾಗಿದೆ. ಮಲೆನಾಡಿನ ಜೀವನದಲ್ಲಿ ಪ್ರಾರಂಭವಾಗಿದ್ದ ಹಳೆತು ಹೊಸತುಗಳ ತಾಕಲಾಟವನ್ನು ಇದು ಸಂಕೇತಿಸುತ್ತದೆ.

ಮೈಸೂರಿಗೆ ವಿದ್ಯಾಭ್ಯಾಸಕ್ಕಾಗಿ ಹೋಗಿದ್ದ ಹೂವಯ್ಯ ಮತ್ತು ರಾಮಯ್ಯರು ಅಧುನಿಕತೆ ಬೆಳೆಯುತ್ತಿದ್ದ ನಗರದಿಂದ ನಾಗರಿಕತೆ ಮತ್ತು ಜ್ಞಾನಗಳೆರಡನ್ನು ಮೈಮನಗಳಿಗೆ ಅಂಟಿಸಿಕೊಂಡು ಮಲೆನಾಡಿನ ದುರ್ಗಮವೂ ಸಂಕೀರ್ಣವೂ ಆದ ಜೀವನ ಪರಿಸರಕ್ಕೆ ಮತ್ತೆ ಪ್ರವೇಶಿಸುತ್ತಿದ್ದಾರೆ. ಈ ಇಬ್ಬರಲ್ಲಿ ಒಬ್ಬನು 'ಒಟ್ಟಿನ ಪೌರುಷ, ಅಧ್ಯಾತ್ಮಿಕತೆ, ಅಂತರ್ಮುಖತೆ, ರಸಿಕತೆ, ಮೇಧಾಶಕ್ತಿ, ಇತರರಿಗೆ ಕಷ್ಟವಲ್ಲದಿದ್ದರೂ ತನಗೇ ಕಷ್ಟಕರವಾಗಬಹುದಾದ ಹಠಭಾವ ಇವುಗಳಿಂದ ಮರೆಯುತ್ತಿದ್ದ. ಆತನು ಭವ್ಯ ವ್ಯಕ್ತಿಯಾಗಿದ್ದನು. ಜೊತೆಯಲ್ಲಿದ್ದ ಕಿರಿಯವನಲ್ಲಿ ಇದ್ದಂತೆ ಆತನಲ್ಲಿ ಯಾವ ವಿಧವಾದ ಭೋಗ ಸಾಮಗ್ರಿಯೂ ಕಂಡುಬರುತ್ತಿರಲಿಲ್ಲ. ಆತನ ಸರಳ ಸೌಂದರ್ಯವೇ ಒಂದು ಗಂಭೀರ ಭೋಗವಾಗಿತ್ತು.: ಆತನ ಜೊತೆಯಲ್ಲಿದ್ದ ಕಿರಿಯ ತರುಣ "ಪದನವು ಸರಳತೆ ಸೌಶೀಲ್ಯಗಳಿಂದರ ಕೂಡ ಮುಗ್ಧವಾಗಿತ್ತು. ದೃಢ ಮನಸ್ಸಾಗಲಿ ದಕ್ಷತೆಯಾಗಲಿ ಮೂರ್ತಿಯಲ್ಲಿ ತೋರಿಬರುತ್ತಿರಲಿಲ್ಲ" (ಪು. ೩) ಅವರ ವ್ಯಕ್ತಿತ್ವದ ಈ ವಿಶ್ಲೇಷಣೆಯಿಂದ ಪಾತ್ರಗಳು ಪ್ರಾತಿನಿಧಿಕವಾಗಿಯೂ ನಿಲ್ಲುತ್ತವೆ. ಒಂದೇ ಪರಿಸರದಲ್ಲಿ ಹುಟ್ಟಿ ಬೆಳೆದ ಇಬ್ಬರ ಮನೋಭಿನ್ನತೆಯನ್ನು ಪ್ರೌಢ ಶಿಕ್ಷಣ ಪಡೆದ ಆ ಇಬ್ಬರಲ್ಲಿಯೂ ಉಂಟಾಗಿರುವ ಮಾನಸಿಕ ಮಾರ್ಪಾಟುಗಳನ್ನು ಇದು ಪ್ರತಿಫಲಿಸುತ್ತದೆ. ಹೂವಯ್ಯ–ರಾಮಯ್ಯರು ಕುಳಿತಿದ್ದ ಗಾಡಿಯನ್ನು ಹತ್ತುವಾಗ ಹೂವಯ್ಯನು ಧೂಳೀಮಯವಾಗಿದ್ದ ಸಿಂಗಪ್ಪಗೌಡರ ಕಾಲುಗಳನ್ನು ನೋಡಿ "ಕಕ್ಕಯ್ಯ ಜಮಖಾನವೆಲ್ಲ ಕೊಳೆಯಾಗುತ್ತದೆ. ಅದನ್ನು ಮಡಿಚಿ ಹುಲ್ಲಿಗೆ ಕಾಲಿ ತಿಕ್ಕಿದರೆ ವಾಸಿ" ಎಂದನು. ಈ ಸಂದರ್ಭವೊಂದೇ ಸಾಕು ಹೂವಯ್ಯನಲ್ಲಿ ಉಂಟಾಗಿದ್ದ ನಾಗರಿಕತೆಯ ಬೆಳವಣಿಗೆಯನ್ನು ಗುರುತಿಸಲು(ಪು.೧೨)

ಸಾಮಾಜದಲ್ಲಿರುವ ಮೇಲು ಕೀಳು ಭಾವನೆ ಮತ್ತು ಅಸ್ಪೃಶ್ಯತೆಯ ಚಿತ್ರಣ ಈ ಕಾದಂಬರಿಯಲ್ಲಿ ಬರುತ್ತದೆ. ವಾಸು ಗಂಗನನ್ನು ಕೋಪದಿಂದ ಗುದ್ದಿ ತರುವಾಯ 'ಬೇಲರವನನ್ನು ಮುಟ್ಟಿದ್ದಕ್ಕೆ ಪ್ರಾಯಶ್ಚಿತ್ತರೂಪವಾಗಿ ಹಟ್ಟಿಗೆ ಹೋಗಿ ಸೆಗಣಿಯನ್ನು ಮೆಟ್ಟಿ, ಹಿತ್ತಲು ಕಡೆಯ ಬಾಗಿಲಿನಿಂದ ಮನೆಯನ್ನು ಪ್ರವೇಶಿಸಿದನು." ಈ ಸಂದರ್ಭದಿಂದ ಸಮಾಜದಲ್ಲಿದ್ದ ಅಸ್ಪೃಶ್ಯತೆಯ ಪ್ರಜ್ಞೆ ಈ ಎಳೆಯ ಮಕ್ಕಳಲ್ಲೂ ಹೇಗೆ ಸ್ವಾಭಾವಿಕವೂ ಎಂಬಂತೆ ಹಾಸು ಹೊಕ್ಕಾಗಿತ್ತು ಎಂದು ತಿಳಿದುಬರುತ್ತದೆ. ಹಾಗೆಯೇ ಹಿಂದೂ ಸಮಾಜದಲ್ಲಿ ಪ್ರತಿ ಮೇಲಿನ ವರ್ಗವೂ ತನ್ನ ಕೆಳಗಿನ ವರ್ಗವನ್ನು ಕೀಳೆಂದು ಪರಿಗಣಿಸುತ್ತದೆ. ಮಲೆನಾಡಿನ ಸಮಾಜದಲ್ಲಿ ಭೂಮಿಕಾಣಿಕೆ ಇಟ್ಟುಕೊಂಡ ಒಕ್ಕಲಿಗರು ಬಲಿಷ್ಠರು. ಆದರೆ ಪುರೋಹಿತರು ಶ್ರೇಷ್ಠರೆಂಬ ಮನ್ನಣೆಗೆ ಪಾತ್ರರಾಗಿದ್ದಾರೆ. ಆದರೆ ಜನರ ಮೂಢನಂಬಿಕೆ ಅಸಹಾಯಕತೆಯನ್ನು ಬಳಸಿ ಕೊಂಡು ಅವರು ದುರ್ಮಾರ್ಗಕ್ಕಿಳಿದಿರುವುದನ್ನು ಇಲ್ಲಿ ಯಥಾವತ್ತಾಗಿ ನಿರೂಪಿಸಲಾಗಿದೆ. ಲೇಖಕರ ವೈಚಾರಿಕ ಪ್ರಜ್ಞೆ ಇದನ್ನು ಗುರುತಿಸಿದೆ.

"ಗೌಡರು ಜೋಯಿಸರಿಗಿಂತಲೂ ಹದಿನೈದು ಇಪ್ಪತ್ತು ವರ್ಷಗಳು ಹೆಚ್ಚು ವಯಸ್ಸಿನವರಾಗಿದ್ದರೂ, ಬ್ರಾಹ್ಮಣನು ಶೂದ್ರನನ್ನೂ ಬಹುವಚನದಲ್ಲಿ ಮಾತನಾಡಿಸುವುದು ಶಾಪಕ್ಕೆ ಸಮಾನವೆಂದೂ ಏಕವಚನದಲ್ಲಿ ಮಾತಾಡಿಸುವುದು ಅನುಗ್ರಹಕ್ಕೆ ಸಮಾನವೆಂದೂ ಭಾವಿಸಿ ವೇದಮೂರ್ತಿಗಳೆಲ್ಲ ಮ|| ರಾ|| ಶ್ರೀಗಳನ್ನು 'ಅವನು' 'ನೀನು' ಎಂದೇ ಸಂಬೋಧಿಸುತ್ತಿದ್ದುದು ಆ ನಾಡಿನ ವಾಡಿಕೆಯಾಗಿತ್ತು. ಹೀಗೆ ಸ್ವಾಭಾವಿಕವೋ ಎಂಬಂತೆ ಹಿಂದೂ ಸಮಾಜ ಜಾತಿ ವ್ಯವಸ್ಥೆಯನ್ನು ಬೆಳಸಿಕೊಂಡಿರುವುದು ಕಂಡುಬರುತ್ತದೆ. ವಾಸು ಮತ್ತು ನಿಂಗ ಒಟ್ಟಿಗೆ ಹಕ್ಕಿ ಷಿಕಾರಿಗೆ ಹೋಗುವುದು ಮೊದಲಾದ ಪ್ರಕರಣಗಳಿಂದ ಶೂದ್ರರಲ್ಲಿ ಗೌಡರ ಮಕ್ಕಳು ಮತ್ತು ಬೇಲರ ಅಥವಾ ಹೊಲೆಯರ ಹುಡುಗರು ಬೆರತಷ್ಟು ನಿಕಟವಾಗಿ ಬ್ರಾಹ್ಮಣರ ಮಕ್ಕಳ ಇತರ ಶೂದ್ರರೊಂದಿಗೆ ಬೆರೆಯುತ್ತಿರಲಿಲ್ಲ. ಇದರಿಂದ ಪ್ರಕೃತಿಯೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿರುವವರು ಹೇಗೆ ಜಾತಿ ಕಟ್ಟುಪಾಡು ಎಷ್ಟೇ ಇದ್ದರೂ ನಿಕಟ ಸಹಜೀವನ ನಡೆಸುವುದು ಅನಿವಾರ್ಯವಾಗಿತ್ತು. ಎಂದು ತಿಳಿಯುತ್ತದೆ.

ಜೋಯಿಸರು ಹೂವಯ್ಯನಿಗೆ ಟ್ರಂಕು ತಗುಲಿ ಆಗಿದ್ದ ಬೆನ್ನು ನೋವಿಗೆ "ತಾಯಿತಿ ಕಟ್ಟುವುದಾಗಿಯೂ, ಪೂಜೆ ಮಾಡಿಸುವುದಾಗಿಯೂ, ಗ್ರಹಗತಿಯನ್ನು ಸರಿಮಾಡುವುದಾಗಿಯೂ ಹೇಳಿದ ಸಂದರ್ಭ – ಪುರೋಹಿತರ ಅಜ್ಞಾನವನ್ನೂ ಸಮಾಜದ ಹೀನಸ್ಥಿತಿಯನ್ನೂ ತೋರಿಸುತ್ತದೆ. ಹೂವಯ್ಯನು ಜೋಯಿಸರ ಸ್ವಾರ್ಥಪರ ಮತ್ತು ಮೌಢ್ಯ ತುಂಬಿದ ವಿಚಾರವನ್ನು ಟೀಕಿಸುವುದು, ಸಮಾಜದಲ್ಲಿ ರೂಪುಗೊಳ್ಳುತ್ತಿದ್ದ ವೈಚಾರಿಕ ದೃಷ್ಟಿಗೆ ಸಾಕ್ಷಿಯಾಗುತ್ತದೆ. ಅವನು ಕಲಿತುಬಂದ ವಿದ್ಯೆ, ವಿಚಾರಗಳಿಂದಾಗಿ ತನ್ನ ಹಳ್ಳಿಯ ಪರಿಸರವನ್ನು ವೈಜ್ಞಾನಿಕವಾಗಿ ಪರಿಶೀಲಿಸುವ ಚಿಕಿತ್ಸಕ ದೃಷ್ಟಿಯನ್ನು ಪಡೆದುಕೊಂಡಿದ್ದನು. ರಾತ್ರಿ ಹೊತ್ತಿನಲ್ಲಿ ಜೋಯಿಸರು ಗಾಡಿಯಿಂದಿಳಿದು ಮನೆಗೆ ಹೋಗುವಾಗ "ಪ್ರೇತ ಪಿಶಾಚಿಗಳಿಗೆ ಕೇಳಿಸುವಂತೆ ದೇವರ ನಾಮವನ್ನು ಗಟ್ಟಿಯಾಗಿ ಜಪಿಸುತ್ತ ಅಗ್ರಹಾರಕ್ಕೆ ಅಗಲುವ ದಾರಿಯಲ್ಲಿ ಹೋದರು." ದೆಯ್ಯದ ಹರಕೆಯಲ್ಲಿ ಪುರೋಹಿತರು ಭೂತಗಳಿಗೆಲ್ಲಾ ಪೂಜೆ ಮಾಡಿಸಿ ರಕ್ತ ಬಲಿಗೆ ಮುಂಚೆ ಜೈನೆಡೆ ಹಾಕುವುದು ವೈದಿಕ ವೃತ್ತಿಯ ವಿಕೃತ ಸ್ವರೂಪವೇ ಸರಿ. ಇಂಥ ಪದ್ಧತಿಗಳನ್ನು ಇಂದಿಗೂ ಮಲೆನಾಡಿನಲ್ಲಿ ಕಾಣಬಹುದು. ಭೂತ–ಬಿಡಿಸುವುದಕ್ಕಾಗಿ ಸೀತೆಗೆ ಬರೆ ಹಾಕಿಸಲು ಮುಂದಾದ ಜೋಯಿಸರ ವಾಮಾಚಾರ ಸಮಾಜರ ಅನಿಷ್ಟಪದ್ಧತಿಯ ಪರಾಕಾಷ್ಠತೆಯನ್ನು ತೋರಿಸುತ್ತದೆ. ಒಂದು ಕಾಲಕ್ಕೆ ಪಾವಿತ್ರ್ಯ, ಆಚಾರ ವಿಚಾರ, ಸರಳ ಸಜ್ಜನಿಕೆ, ಪಾಂಡಿತ್ಯಗಳ ನಿಧಿಯಾಗಿದ್ದವರು ಹೇಗೆ ಸ್ಥಳೀಯ ಆಚರಣೆಗಳಿಂದ ಪ್ರಭಾವಿತರಾಗಿ ತಮ್ಮತನವನ್ನು ಕಳೆದುಕೊಂಡು ಸ್ವಾರ್ಥಪರರೂ ಸಂಕುಚಿತ ಮನೋಭಾವದವರೂ ಆಗಿದ್ದು ದಿಕ್ಕಾಣದೆ ತೊಳಲುತ್ತಿದ್ದರು ಎಂಬುದು ಅರಿವಾಗುತ್ತದೆ.

'ಮಲೆಗಳಲ್ಲಿ ಮದುಮಗಳು' ಮದುಮಗಳು' ಕಾದಂಬರಿಯಲ್ಲಿ ಬರುವ ಸಾಮಾಜಿಕ ಪರಿಸರಕ್ಕೂ 'ಕಾನೂರು ಹೆಗ್ಗಡಿತಿ' ಕೃತಿಯ ಪರಿಸರಕ್ಕೂ ತಲೆಮಾರಿಗೂ ಹೆಚ್ಚಿನ ಅಂತರವಿದೆ. ಇಲ್ಲಿಯ ಪಾತ್ರಗಳು ಜೀವನವನ್ನು ನೋಡುವ ದೃಷ್ಟಿಗೂ ಅಲ್ಲಿನ ಪಾತ್ರಗಳು ನೋಡುವ ದೃಷ್ಟಿಗೂ ವ್ಯತ್ಯಾಸವಿದೆ. 'ಮಲೆಗಳಲ್ಲಿ ಮದುಮಗಳು' ಕೃತಿಯ ಮುಕುಂದಯ್ಯ ಚಿನ್ನಮ್ಮರ ಪ್ರೇಮ ಪ್ರಜ್ಞೆಯ ಅಭಿವ್ಯಕ್ತಿಗಿಂತಲೂ ಹೂವಯ್ಯ-ಸೀತೆಯರ ಪ್ರೇಮ ಪ್ರಜ್ಞೆಯ ಅಭಿವ್ಯಕ್ತಿ ಹೆಚ್ಚು ವೈಯಕ್ತಿಕ ಸಂವೇದನೆಗಳಿಂದಲೂ ಬೌದ್ಧಿಕ ಮಥನದಿಂದಲೂ ಸಂಸ್ಕೃತಿಯ ಆವಿಷ್ಕಾರದಿಂದಲೂ ಮೂಡಿಬರುತ್ತದೆ. ಆ ಕಾಲದ ನಾಗರಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳು ಹಾಗೂ ಶಿಕ್ಷಣ ಮತ್ತು ಜೀವನ ದೃಷ್ಟಿಕೋನದ ಬೆಳವಣಿಗೆಯೇ ಈ ವ್ಯಕ್ತಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗುತ್ತದೆ. ಹೂವಯ್ಯ ಕೇವಲ ಶುದ್ಧ ವೈಚಾರಿಕ ವ್ಯಕ್ತಿಯಷ್ಟೇ ಅಲ್ಲದೆ ಅವನೂ ರಾಗದ್ವೇಷಗಳಿಗೆ, ಪರಿಸರದ ಪ್ರಭಾವಕ್ಕೆ ಒಳಗಾಗಿ ಬದುಕುತ್ತಿರುವ ಜೀವ ಎಂಬುದು ಅವನ ಕೆಲವು ವರ್ತನೆಗಳಿಂದ ಸ್ಪಷ್ಟವಾಗುತ್ತದೆ. "ಮಹಾಪುರುಷರ ಜೀವನಚರಿತ್ರೆಗಳನ್ನು ಓದಿದ್ದ ಆತನಲ್ಲಿ ತಾನೂ ಮಹತ್ಕಾರ್ಯಗಳನ್ನು ಸಾಧಿಸಿ ಕೀರ್ತಿವಂತನಾಗಬೇಕೆಂಬ ಮಹಾದಾಕಾಂಕ್ಷೆ ಉದ್ಭವಿಸಿತ್ತು. ಎಂತಹ ಮಹತ್ಕಾರ್ಯ, ಅದನ್ನು ಯಾವ ರೀತಿಯಲ್ಲಿ ಸಾಧಿಸಬೇಕು, ಎಂಬುದೊಂದು ಆತನಿಗೆ ಹೊಳೆದಿರಲಿಲ್ಲ"(ಪು. ೧೨೫).

ಹೂವಯ್ಯ ಈ ಸಮಾಜದಲ್ಲಿ ಮೂಡುತ್ತಿದ್ದ ಅರಿವಿಗೆ ಸಂಕೇತವಾಗಿ ನಿಲ್ಲುತ್ತಾನೆ. ಅವನು ರಸರುಚಿಯನ್ನೂ ಆತ್ಮಸಾಧನೆಯನ್ನೂ ವೀರಶ್ರದ್ಧೆಯಿಂದ ಅಭಿವೃದ್ಧಿ ಪಡಿಸಿಕೊಳ್ಳುತ್ತಿದ್ದುದರ ಜತೆಗೆ ಭಾರತ, ರಾಮಾಯಣ ಮುಂತಾದ ಕಾವ್ಯಗಳನ್ನು ವ್ಯಾಖ್ಯಾನ ಮಾಡಿ ಸರಳವಾಗಿ ಹೇಳುತ್ತಿದ್ದನು. ಹೂವಯ್ಯ ಕಥೆ ಹೇಳುವ ಸಮಯದಲ್ಲಿ ಸಮಾಜದ ಏಳಿಗೆಗೆ ಅವಶ್ಯಕವಾಗ ವಿಚಾರಗಳೆಲ್ಲವನ್ನೂ ಕುರಿತು ಸ್ವಾರಸ್ಯವಾಗಿ ವಿವರಿಸುತ್ತಿದ್ದನು. ಇದರಿಂದ ಇದುವರೆಗೂ ಹರಿಕಥೆದಾಸರು, ಐಗಳು ಮತ್ತು ನಾಟಕಗಳ ಮೂಲಕ ಪೌರಾಣಿಕ ಕತೆಗಳನ್ನು ತಿಳಿದಿದ್ದವರು ಪ್ರಥಮಬಾರಿಗೆ ವಿದ್ಯಾವಂತ, ವಿಚಾರವಾದಿಯೊಬ್ಬನಿಂದ ಇವುಗಳನ್ನು ಕೇಳುವಂತಾಯಿತು. ಇಂಥ ಪ್ರಸಂಗಗಳಿಂದ ಹೂವಯ್ಯನಲ್ಲಿ ವ್ಯಕ್ತವಾಗುವ ಸಾಮಾಜಿಕ ಪ್ರಜ್ಞೆ ಆದರ್ಶವಾದದ್ದು ಎಂದೇನೂ ತಿಳಿಯಬೇಕಾಗಿಲ್ಲ. ಅವನೂ ಅನೇಕವೇಳೆ ಪರಿಸರದ ಪ್ರಭಾವಕ್ಕೆ ಸಿಲುಕಿ ಸಾಮಾನ್ಯನಂತೆ ವರ್ತಿಸುತ್ತಿದ್ದ ಸುಬ್ಬಮ್ಮ ಚಿನ್ನವನ್ನು ಹೂವಯ್ಯನ ಬಳಿ ಬಿಟ್ಟು ಹೋದಾಗ ಅವನ ಮನಸ್ಸಿನಲ್ಲಿ ಸುಳಿದ ಆಮಿಷ: ಮನಃಶಾಸ್ತ್ರದ ಪರಿಚಯವಿದ್ದ ಅವನು ತನ್ನ ತಾಯಿಯ ಕಾಯಿಲೆ ಗುಣವಾಗಬೇಕಾದರೆ ಬಲೀಂದ್ರಹೋತವನ್ನು ಬಲಿಕೊಡಲು ಪ್ರಕಟಿಸುತ್ತವೆ. ಅದೂ ಅಲ್ಲದೆ ಹೂವಯ್ಯನ ಪಾತ್ರ ನಮ್ಮ ಸಾಮಾಜಿಕ ಜೀವನದಲ್ಲಿ ವಿರಳವಾಗಿದ್ದರೂ ಹೊರತಾದುದೇನೂ

ಅಲ್ಲ. ಈ ಹೂವಯ್ಯನ ಪಾತ್ರ ಕಾದಂಬರಿಯ ಕೇಂದ್ರಪಾತ್ರವೇನೂ ಆಗುವುದಿಲ್ಲ. ಅವನು ಕಾದಂಬರಿಯ ಧೋರಣೆಯನ್ನು ನಿರ್ದೇಶಿಸುವಂತೆ ತೋರಿದರೂ ಈ ಕಾದಂಬರಿಯ ಅರಣ್ಯ ಜಗತ್ತಿನಲ್ಲಿರುವ ಹಲವಾರು ಅನುಭವಗಳು ಪಾತ್ರವಿಶೇಷಗಳು, ಘಟನೆಗಳು ತಮ್ಮದೇ ಆದ ಮಹತ್ವದಿಂದ ಮೆರೆದಿವೆ. ಚಂದ್ರಯ್ಯಗೌಡರು, ಸುಬ್ಬಮ್ಮ, ಸೀತೆ, ರಾಮಯ್ಯ, ಓಬಯ್ಯ, ಸೇರೇಗಾರ ರಂಗಪ್ಪಸೆಟ್ಟರು, ಗಂಗೆ ಮೊದಲಾದ ಒಂದೊಂದು ಪಾತ್ರಗಳೂ ತಮ್ಮದೇ ಆದ ಭದ್ರಸ್ಥಾನವನ್ನು ಪಡೆದುಕೊಂಡು ಈ ಕಾದಂಬರಿಯ ಗತಿಯನ್ನು ನಿರ್ಧರಿಸುತ್ತವೆ. ಅವರೆಲ್ಲ ಸಮಾಜದ ಒಂದೊಂದು ಸ್ತರದ, ಒಂದೊಂದು ಮನೋಭಾವದ, ಒಂದೊಂದು ಸ್ಥಿತಿಯ ಪ್ರತಿನಿಧಿಗಳಾಗಿ ಬರುತ್ತಾರೆ.

ಇಡೀ ಸಮಾಜವನ್ನೇ ವಸ್ತುವಾಗುಳ್ಳ ಈ ಕಾದಂಬರಿಯಲ್ಲಿ ಪ್ರಮುಖ ಸಾಮಾಜಿಕ ಘಟನೆಗಳು ಯಥೋಚಿತವಾಗಿ ಬರುತ್ತವೆ. ಯಾವುದೇ ಸಮಾಜದಲ್ಲಿಯಾದರೂ ನಾವು ಮೊದಲಿಗೆ ಬದಲಾವಣೆಗಳನ್ನು ಕಾಣುವುದು ಆಯಾ ಸಮಾಜದ ಮೇಲುವರ್ಗಗಳಲ್ಲಿ ಈ ಕಾದಂಬರಿಯಲ್ಲಿ ಬರುವ ಸಮಾಜದಲ್ಲಿ ಒಕ್ಕಲಿಗರು ಪ್ರಮುಖರು ಹಳ್ಳಿಯ ಯಾವುದೇ ಆಗುಹೋಗಿಗೂ ಅವರೇ ಕಾರಣರು ಪಾಶ್ಚಾತ್ಯರ ಸಂಪರ್ಕದಿಂದಲೂ ಕಾಲಮಹಿಮೆಯಿಂದಲೂ ಅವರಲ್ಲಿ ಆದ ಸಾಮಾಜಿಕ ಬದಲಾವಣೆಯ ಅರಿವಿಗೆ ಮೂಲವಾಗಿ "ಸುಮಾರು ಮೂವತ್ತು ಮೂವತ್ತೈದು ವರ್ಷಗಳ ಹಿಂದೆ ನಾಡಿನ ಒಕ್ಕಲಿಗ ಮುಖಂಡರಲ್ಲಿ ಒಂದು ಚಳುವಳಿಯೆದ್ದಿತು. ಆ ಚಳುವಳಿಗೆ ಕ್ರೈಸ್ತ ಪಾದ್ರಿಗಳ ಉಪದೇಶವೂ ಮೈಸೂರು ಸರಕಾರದ 'ಮಲೆನಾಡು ಅಭಿವೃದ್ಧಿ ಇಲಾಖೆಯ ಭೋಧನೆಯೂ ಬ್ರಿಟಿಷ್ ಆಳ್ವಿಕೆಯಿಂದುಂಟಾದ ನಾಗರೀಕತೆಯ ಆಗಮನವೂ ಕಾಫಿ, ವೈನು, ವಿಸ್ಕಿ ಇತ್ಯಾದಿಯಾದ ವಿದೇಶಿಯ ಪಾನೀಯಗಳ ಅಮದೂ, ಸನ್ನಿವೇಶ ಪ್ರಭಾವದಿಂದ ಜನರಲ್ಲಿ ಸ್ವಾಭಾವಿಕವಾಗಿಯೇ ಉತ್ಪನ್ನವಾದ ಜಾಗ್ರತಿಯೂ ಕಾರಣಗಳಾದುವೆಂದು ಊಹಿಸಬಹುದು" (ಪು. ೨೧೦) ಈ ವರ್ಣನೆ ಲೇಖಕರು ಆ ಕಾಲದ ಸಾಮಾಜಿಕ ಘಟನೆಗಳನ್ನು ಅವುಗಳಿಗೆ ಕಾರಣವಾದ ಅಂಶಗಳನ್ನು ಎಷ್ಟು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ ಎಂಬುದಕ್ಕೆ ನಿದರ್ಶನವಾಗಿದೆ.

ಯಂತ್ರ ನಾಗರಿಕತೆ, ಇಂಗ್ಲಿಷು, ಚಾಂಚಲ್ಯ, ಉದ್ವೇಗ, ವೇಗ!... ಇವೆಲ್ಲವುಗಳು ಮಲೆನಾಡಿಗೆ ಪ್ರವೇಶಿಸುತ್ತವೆ. ಕುವೆಂಪು ಅವರು ಬೈಸಿಕಲ್ ಮತ್ತು ಅವರ ಸವಾರರನ್ನು ಅವುಗಳಿಗೆ ಪ್ರತಿಮೆಗಳಾಗಿ ಕಂಡಿದ್ದಾರೆ. ಆ ಕಾಲದಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿ ಪ್ರಾರಂಭವಾಗಿತ್ತು. ಅದು ಪತ್ರಿಕೆಗಳ ಮೂಲಕ, ಮುಖಂಡರ ಉಪನ್ಯಾಸಗಳ ಮೂಲಕ ಮಲೆನಾಡಿಗೂ ಹರಡುತ್ತಿತ್ತು. ಗಾಂಧಿ ಅವರು ದೇಶವಿದೇಶಗಳಲ್ಲಿ ದಬ್ಬಾಳಿಕೆಯ ವಿರುದ್ಧ ಸತ್ಯಾಗ್ರಹ ಹೂಡುತ್ತಿತ್ತು. "ಹೂವಯ್ಯ ಪತ್ರಿಕೆಯನ್ನು ಓದಲೆಂದು ಕೈಗೆ ತೆಗೆದುಕೊಂಡ ಮೊದಲಿನಲ್ಲಿ ಕೆಲವು ವಿಷಯಗಳನ್ನು

ಕುತೂಹಲದಿಂದ ಗ್ರಹಿಸಿದನು. ಮುಖ್ಯವಾಗಿ ಭಾರತೀಯರ ಸ್ವರಾಜ್ಯ ಸಂಪಾದನೆಯ ಪ್ರಯತ್ನ, ಸಂಕಟಗಳು, ರಾಷ್ಟ್ರನಾಯಕರ ಅಂದೋಲನಕಾರಕ ಉಪನ್ಯಾಸಗಳು, ಬ್ರಿಟಿಷರ ದಬ್ಬಾಳಿಕೆಯ ನಡತೆಗಳು, ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಮೇಲೆ ನಡೆಯುತ್ತಿದ್ದ ಅತ್ಯಾಚಾರಗಳು, ಮುಖಂಡರ ದಸ್ತಗಿರಿಗಳು ಇವುಗಳೆಲ್ಲವನ್ನು ಓದುತ್ತ ಓದುತ್ತ ಅವನ ಆತ್ಮ ಸಂಕಟಕ್ಕೀಡಾಯಿತು"(ಪು.೩೨೪). ಹೀಗೆ ಕಾದಂಬರಿಯಲ್ಲಿ ಸಾಮಾಜಿಕ ಮತ್ತು ಐತಿಹಾಸಿಕ ಪ್ರಜ್ಞೆಗಳು ಕಂಡುಬರುತ್ತವೆ. ಹೂವಯ್ಯ ಬೇಲರ ಭೈರನ ಬತ್ತವನ್ನು ಗುಡಿಸಲಿಗೆ ಹೊತ್ತುಕೊಂಡು ಹೋಗಿ ಕೊಡುವುದು, ಹೋತದ ಬಲಿ ಕೊಡುವುದನ್ನು ಶೂದ್ರಸಂಘದ ಮಹಾಸಭೆಯಲ್ಲಿ ಒಕ್ಕಲಿಗ ಮುಖಂಡರು ಇನ್ನು ಮುಂದೆ ಮಧ್ಯಪಾನ ಮಾಡುವುದಿಲ್ಲವೆಂದು ತಿರುಪತಿ, ಕಾಶಿ, ರಾಮೇಶ್ವರ, ಧರ್ಮಸ್ಥಳಗಳ ದೇವರುಗಳಿಗೆ ಆಣೆಹಾಕಿ ಮಾನಪತ್ರಕ್ಕೆ ಸಹಿಹಾಕುವುದು ಮೊದಲಾದ ಪ್ರಕರಣಗಳು ಗಾಂಧಿವಾದದ ಪ್ರಭಾವವನ್ನು ಸೂಚಿಸುತ್ತವೆ. ಆದರೆ ಜನರು ಅವಿದ್ಯಾವಂತರಾಗಿ, ಅಜ್ಞಾನಿಗಳಾಗಿ, ಕಲಿತ ಚಾಳಿಗೆ ಬದ್ಧರಾಗಿ ಉಳಿದಿರುವ ತನಕ ಇಂಥ ಪ್ರಮಾಣಗಳು ಕಾಗದದ ಮೇಲಷ್ಟೇ ಉಳಿದಿರುತ್ತವೆ. ಅವರೆಲ್ಲ ತಮ್ಮ ಮೈಗಂಟುಬಂದಿದ್ದ ಅಭ್ಯಾಸವನ್ನು ಬಿಡದೆ ಮುಚ್ಚುಮರೆಯಲ್ಲಿ ಕೆಲವರು ಬಹಿರಂಗವಾಗಿ ಪುನಃ ಕುಡಿಯುತ್ತಿದ್ದದ್ದು ಪದ್ಧತಿಗೂ ಪ್ರಜ್ಞೆಗೂ ನಡೆದ ಸಂಘರ್ಷವನ್ನು ತೋರಿಸುತ್ತದೆ.

ಈ ಕಾದಂಬರಿಯಲ್ಲಿ ಬರುವ ಸಾಮಾಜಿಕ ಚಿತ್ರಗಳು ಹಲವಾರು. ದಕ್ಷಿಣ ಕನ್ನಡ ಜಿಲ್ಲೆಯಿಂದ ಘಟ್ಟದ ಮೇಲೆ ಬಂದು ಜೀವನ ನಿರ್ವಹಣೆ ಮಾಡುವ ಘಟ್ಟದಾಳುಗಳು ಮಲೆನಾಡಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತಾರೆ. ಈ ಘಟ್ಟದಾಳುಗಳಲ್ಲಿ ವಿವಿಧ ಜಾತಿಗೆ ಸೇರಿದವರಿರುತ್ತಾರೆ. ಅವರಲ್ಲಿ ಸೆಟ್ಟರು ಮೇಲುವರ್ಗಕ್ಕೆ ಸೇರಿದವರು. ಇವರು ಮೇಸ್ತ್ರಿಗಳಾಗಿ ತಮ್ಮ ಊರಿನ ಕಡೆಯಿಂದ ಆಳುಗಳನ್ನು ತಂದು ಇಲ್ಲಿ ಭೂಮಾಲಿಕರಿಗೆ ಒದಗಿಸುತ್ತಾರೆ. ಈ ಸೇರೆಗಾರರೂ ಮಲೆನಾಡಿನಲ್ಲಿ ಒಕ್ಕಲಿಒಗರಿಗಿಂತ ಕೀಳೆಂದು ಪರಿಗಣಿತವಾಗುತ್ತಾರೆ. ಆರ್ಥಿಕ ಅನಿವಾರ್ಯತೆಯಿಂದ ಬರುವವರು ಹಲವರಾದರೆ ತಮ್ಮ ಸ್ವಂತ ಊರುಗಳಲ್ಲಿ ಯಾವುದಾರೂ ಸಾಮಾಜಿಕ ತಪ್ಪುಗಳನ್ನೆಸಗಿ ಓಡಿಬರುವವರು ಕೆಲವರು. ಇವರೆಲ್ಲ ತಮ್ಮ ಬಂಧು ಬಳಗ ದಿಂದ ಅನ್ಯವಾದ, ದೂರವಾದ ಸಮಾಜದಲ್ಲಿ ಬದುಕುವುದರಿಂದ ಇಲ್ಲಿ ಕೆಲವರು ಸ್ವೇಚ್ಛೆಯಾಗಿ ವರ್ತಿಸುವುದೂ ಉಂಟು. ಗಂಗೆ, ಸೇರೇಗಾರ ರಂಗಪ್ಪಸೆಟ್ಟರು ಮೊದಲಾದವರು ಇದಕ್ಕೆ ನಿದರ್ಶನಗಳಾಗಿ ನಿಲ್ಲುತ್ತಾರೆ, ಸೇರೆಗಾರರು ಮತ್ತು ಕಾನೂರು ಹೆಗ್ಗಡಿತಿ ಸುಬ್ಬಮ್ಮನ ಸಂಬಂಧ ಕಾದಂಬರಿಯಲ್ಲಿ ವಿಶಿಷ್ಟ ಮಹತ್ವದಿಂದ ಕೂಡಿದೆ. ಸುಬ್ಬಮ್ಮನ ಅಕೃತ್ಯ ಕಣ್ಣಿಗೆ ಹೊಡೆದಂತೆ ಕಾಣಿಸಿದರೂ ಅವಳು ಚಂದ್ರಯ್ಯಗೌಡರಿಗೆ ಮೂರನೆ ಹೆಂಡತಿಯಾಗಿ ಬಂದದ್ದು; ಅವರ ಅಸಫಲದಾಂಪತ್ಯ ತರುವಾಯ ವಿಧವಾ ಜೀವನದಲ್ಲಿ ಸ್ವೇಚ್ಛೆಯಾಗಿದ್ದದ್ದು ಮೊದಲಾದವು

ಅದಕ್ಕೆ ಹಿನ್ನಲೆಯಾಗಿ ಬೇರೆ ಮುಖಗಳನ್ನು ಪ್ರದರ್ಶಿಸಿಸುತ್ತವೆ. ಮೇಲುವರ್ಗದ ಪುರುಷರು ಕೆಳವರ್ಗಕ್ಕೆ ಸೇರಿದ ಸ್ತ್ರೀಯರೊಂದಿಗೆ ದೇಹಸಂಬಂಧ ಬೆಳಸುವ ಪ್ರಕರಣಗಳೇ ಇತ್ತೀಚಿನ ಸಾಹಿತ್ಯವೂ ಸೇರಿದಂತೆ–ನಮ್ಮ ಸಾಹಿತ್ಯದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ನಮ್ಮದು ನವ್ಯ, ನಾವು ಸಾಹಿತ್ಯದಲ್ಲಿ ಕ್ರಾಂತಿ ಮಾಡಿದ್ದೇವೆ ಎಂದು ಹೇಳಿಕೊಳ್ಳುವವರ ನವ್ಯದ ಸೋಗು ನಮ್ಮ ಸಾಹಿತ್ಯವನ್ನು ಸೋಂಕುವ ಮೊದಲೇ ಕುವೆಂಪು ಅವರು ಈ ರೀತಿಯು ಪ್ರಸಂಗಗಳನ್ನು ತಂದಿರುವುದು ಅವರ ಸಾಮಾಜಿಕ ಪ್ರಜ್ಞೆಗೆ, ವಸ್ತುನಿಷ್ಠತೆಗೆ ಸಾಕ್ಷಿಯಾಗಿದೆ. ಘಟ್ಟದಾಳುಗಳಲ್ಲಿ ಸೋಮಯ್ಯಸೆಟ್ಟರಂಥಹವರೂ ಇರುತ್ತಾರೆಂಬುದನ್ನು ಮರೆಯಲಾಗದು. ಇವರೆಲ್ಲ ತಾವಿರುವ ಸಮಾಜದಲ್ಲಿ ಹೇಗೆ ಸಕ್ರಿಯವಾಗಿ ತೊಡಗುತ್ತಾರೆ ಮತ್ತು ತಮ್ಮ ಪರಿಸರದಮೇಲೆ ಪ್ರಭಾವ ಬೀರುತ್ತಾರೆ ಎಂಬುದು ಇಲ್ಲಿ ಯಥಾವತ್ತಾಗಿ ಚಿತ್ರಿತವಾಗಿದೆ.

ಈ ಘಟ್ಟದಾಳುಗಳ ಜೊತೆಯೇ 'ಕೋಳಿ ಜೂಜು' ಸಹ ಮಲೆನಾಡಿಗೆ ಪ್ರವೇಶಿಸಿತು. 'ಕೋಳಿ ಅಂಕವನ್ನು' ಒಂದು ಸಣ್ಣ ಯುದ್ಧರಂಗಕ್ಕೇ ಹೋಲಿಸಬಹುದು. ಈ ಕೋಳಿ ಅಂಕದ ಪಟ್ಟಿಯಲ್ಲಿ ನಡೆಯುವ ಕೋಳಿ ಜೂಜನ್ನು ಲೇಖಕರು ಕಣ್ಣಿಗೆ ಕಟ್ಟಿದಂತೆ ವರ್ಣಿಸಿದ್ದಾರೆ. ಇಲ್ಲಿಯ ಘಟನೆಗಳು ರೋಮಾಂಚಕರವೂ ಭಯಂಕರವೂ ಆಗಿದ್ದು ಕೆಲವೊಮ್ಮೆ ದುರಂತದಲ್ಲೂ ಪರ್ಯಾವಸಾನವಾಗುವುದುಂಟು. ಇಂಥ ವಿಷಯಗಳಲ್ಲಿ ಕುವೆಂಪು ಅದಂಗಿರುವ ಪರಿಜ್ಞಾನ ಆಶ್ಚರ್ಯಕರವೇ ಸರಿ.

ಹಾಗೆಯೇ ಮಲೆನಾಡಿಗೆ ವಿಶಿಷ್ಟವಾದ ಮತ್ತು ಅದರ ಜೀವನದ ಒಂದು ಭಾಗವಾದ ಕಾಡುಕೋಳಿ ಷಿಕಾರಿ, ಕಾಡುಹಂದಿಬೇಟೆ, ಹುಲಿಯಬೇಟೆ, ಮೊದಲಾದ ಪ್ರಸಂಗಗಳನ್ನು ಚಿತ್ರಿಸಿರುವ ಶೈಲಿ ಮತ್ತು ಅವುಗಳ ವಿವರಗಳು ಕುತೂಹಲಕಾರಿಯಾಗಿವೆ. ಕುವೆಂಪು ಅವರು ತಮ್ಮ ಬಾಲ್ಯದಲ್ಲಿ ಅನುಭವಿಸಿರಬಹುದಾದ ಮತ್ತು ಕಂಡಿರಬಹುದಾದ ಇಂಥ ವಿಷಯಗಳ ಬಗ್ಗೆ ಅವರಿಗಿರುವ ಅಪಾರ ಆಸಕ್ತಿ ಮತ್ತು ಶ್ರದ್ಧೆ ಬೆರಗುಗೊಳಿಸುವಂಥದ್ದು. ಮಲೆನಾಡಿನ ಜೀವನದ ಮೇಲೆ ಅರಣ್ಯ ಹೇಗೆ ಪ್ರಭಾವ ಬೀರಿದೆಯೋ ಹಾಗೆಯೇ ಅಲ್ಲಿಯ ಕಾಡುಪ್ರಾಣಿಗಳೂ ಪ್ರಭಾವ ಬೀರಿವೆ. ಈ ಷಿಕಾರಿಗಳಲ್ಲಿ ಮನುಷ್ಯರೂ ನಾಯಿಗಳೂ ಸಹಭಾಗಿಗಳಾಗಿ ತೊಡಗುತ್ತಾರೆ. ಮೀನು ಹಿಡಿಯುವುದು, ಏಡಿ ಹಿಡಿಯುವುದು ಇವೆಲ್ಲ ಅಲ್ಲಿ ಕೆಲವರಿಗೆ ಒಂದು ಬಗೆಯ ಹವ್ಯಾಸಗಳಾಗಿಯೇ ಪರಿಣಮಿಸಿರುತ್ತವೆ.

ಕುಡಿತ ಮಲೆನಾಡಿನಲ್ಲಿ ಅವಿಭಾಜ್ಯ ಅಂಶವಾಗಿದೆ. ಕಳ್ಳಂಗಡಿಗಳಲ್ಲಿ ಮೇಲುಕೀಳೆನ್ನದೆ ಎಲ್ಲರೂ ಒಟ್ಟಿಗೆ ಸೇರಿ ಕುಡಿಯುತ್ತಾರೆ. ಸೀತೆಯನ್ನು ಮದುವೆಯಾಗುವ ಸಿದ್ಧವಾಗಿದ್ದ ಕೃಷ್ಣಪ್ಪ

ಜಾಕಿ, ಓಬಯ್ಯರೊಡನೆ ಕಳ್ಳು ಕುಡಿಯುತ್ತಿದ್ದಾಗ, ಮುತ್ತಳ್ಳಿಯ ಗಾಡಿ ಅಂಗಳಕ್ಕೆ ಬಂದು ನಿಂತಾಗ ಅವನು ತೋರಿಸಿದ ಮುಜುಗರ ಮೇಲುವರ್ಗದ ಜನ ಸಮಾಜದಲ್ಲಿ ತೆರೆಯ ಹಿಂದೆ ಒಂದು ರೀತಿ ಇರುತ್ತಾರೆ. ಬಹಿರಂಗವಾಗಿ ಒಂದು ರೀತಿ ಇರುತ್ತಾರೆ ಎಂಬುದಕ್ಕೆ ನಿದರ್ಶನವಾಗಿದೆ. ಮಲೆನಾಡ ಸಮಾಜ ಸಂಕೀಣ ಜಾತಿವ್ಯವಸ್ಥೆಯಿಂದ ಕೂಡಿದೆ. ಪಟ್ಟಣ್ಣ, ಸೇರೆಗಾರರು, ನಿಂಗ ಮೊದಲಾದವರು ಮುಟ್ಟಾಳುಗಳು . ಮುಟ್ಟಾಳೂಗಳೆಂದರೆ ಮುಟ್ಟಬಹುದಾದ ಜಾತಿಯವರು ಎಂದರ್ಥ. ಅದೇ ತಿಮ್ಮನಂತಹ ಹಳೆಪೈಕದವನು, ಬೇಲರ ಬೈರನಂತಹ ಕೀಳು ಜಾತಿಯವರು ಎಂದರ್ಥ. ಅದೇ ತಿಮ್ಮನಂತಹ ಹಳೆ ಪೈಕದವನು, ಬೇಲರ ಬೈರನಂತಹ ಕೀಳು ಜಾತಿಯವನು ಗೌಡರ ಮನೆಯ ಒಳಗಡೆ ಬರಬಹುದು. ಇದು ಹಿಂದೂ ಜಾತಿ ವ್ಯವಸ್ಥೆಯಲ್ಲಿ ಒಬ್ಬನ ಹೆಗಲ ಮೇಲೆ ಮತ್ತೊಬ್ಬ ಕುಳಿತಿರುವ ಸ್ಥಿತಿಯನ್ನು ಸೂಚಿಸುತ್ತದೆ. ಅಗ್ರಹಾರದ ದೇವಸ್ಥಾನದಲ್ಲಿ ಸೀತೆಗೆ ಹಿಡಿದಿತ್ತೆಂದು ಹೇಳಲಾದ ಕೃಷ್ಣಪ್ಪನ ದೆಯ್ಯವನು ಬಿಡಿಸಲು ವೆಂಕಪಯ್ಯ ಜೋಯಿಸರು ಮಾಡುವ ಕೃತ್ರಿಮಗಳು; ರಾಮಯ್ಯನಂಥ ವಿದ್ಯಾವಂತನಿಗೂ ಹಿಂದೆ ಮೂಢರೂ ಆಚಾರಭ್ರಾಂತರೂ ಆಗಿ ಕಂಡುಬಂದಿದ್ದ ವೆಂಕಪಯ್ಯ ಜೋಯಿಸರು ಈಗ ಮೇಧಾವಿಗಳೂ ಪಂಡಿತರೂ ಧರ್ಮವೀರರೂ ಆಗಿ ತೋರುತ್ತಾರೆ. ವೆಂಕಪಯ್ಯನವರಿಗೂ ಅಗ್ರಹಾರದ ಇತರ ಬ್ರಾಹ್ಮಣರಿಗೂ ಇದ್ದ ಅಸೂಯೆ ಮೊದಲಾದ ಸಂಗತಿಗಳು ಕ್ಷುದ್ರವಾಗಿ ಕಂಡುಬರುತ್ತವೆ. ಸಣ್ಣ ಭಟ್ಟರು ವಾಸುವಿಗೆ ಕರಿಯ ಕಲ್ಲುಹರಳನ್ನು ಸ್ನೇಹಗಾಣಿಕೆಯಾಗಿ ನೀಡಿದುದು ಮಕ್ಕಳ ನಿರ್ಮಲ ಮನಸ್ಸಿಗೆ ಸಾಕ್ಷಿ.

ಈ ಕಥೆಯ ಕೊನೆಯ ಹೊತ್ತಿಗೆ ಮಲೆನಾಡಿನ ಕಾನೂರು, ಮುತ್ತಳ್ಳಿ, ಸೀತೆಮನೆ ಮತ್ತು ಸುತ್ತಣ ಹಳ್ಳಿಗಳಲ್ಲಿ ನವಜೀವನ ಕಾಲಿಡುತ್ತದೆ. ಆಧುನಿಕ ನಾಗರಿಕ ಸಾಲಭ್ಯಗಳು ಹಳ್ಳಿಗಳಿಗೆ ಬಂದಿರುತ್ತವೆ. ಗಾಂಧಿವಾದಿಗಳು ಆಗಾಗ ಬಂದು ಉಪನ್ಯಾಸ ಕೊಡುತ್ತಿರುತ್ತಾರೆ. ಇದರಿಂದ ದೇಶಪ್ರೇಮ, ರಾಜಕೀಯ ಪ್ರಜ್ಞೆ, ಜನರಲ್ಲಿ ಮೂಡುತ್ತಿರುತ್ತದೆ. 'ಮಾರಿಯ ಹರಕೆ ದೆವ್ವದ ಪೂಜೆ ಮೊದಲಾದ ಮೂಢಾಚಾರಗಳಿಗೆ ಬದಲಾಗಿ–ಉತ್ಕೃಷ್ಟವಾದ ಮತ ವಿಧಾನಗಳು ಆಚರಣೆಗೆ ಬರುತ್ತಿದ್ದವು. ಕಾಡಿಗೆ ನಾಗರಿಕತೆ ಕಾಲಿಟ್ಟಿತ್ತು.' ಹೂವಯ್ಯ ಧ್ಯಾನ, ಏಕಗ್ರತೆ ಮತ್ತು ಆತ್ಮಸಾಧನೆಯ ಮಾರ್ಗದಲ್ಲಿ ಔನತ್ಯವನ್ನು ಸಾಧಿಸಿದ್ದರ ಜತೆಗೆ ಗುಡಿಸಲುಗಳಲ್ಲಿ ವಾಸಿಸುವ ಬಡವರು ತಮ್ಮ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಮೂಢನಂಬಿಕೆಗಳನ್ನು ತೆರೆದು ಕಾಯಿಲೆ ಬಂದಾಗ ಜೋಯಿಸರ ಬಳಿಗೆ ಹೋಗದೆ ಆಸ್ಪತ್ರೆಗೆ ಹೋಗುವಂತೆ ಮಾಡುವುದರಲ್ಲೂ ಯಶಸ್ವಿಯಾದನು. ಸೀತಿಯಿಂದ ಪುಟ್ಟನಂಥ ಹಿಂದುಳಿದ ವರ್ಗದ ಮಕ್ಕಳು ಅಕ್ಷರಸ್ಥರಾದರು. ರಾಮಯ್ಯ, ಹೂವಯ್ಯ, ಸೀತೆಯರ ಜೀವನ ವಿವಿಧ ತಿರುವನ್ನು ತೆಗೆದು ಕೊಂಡರೆ ಅದೇ ರಾಮಯ್ಯನ ತಮ್ಮ ವಾಸು,

ಸೀತೆಯ ತಂಗಿ ಲಕ್ಷ್ಮಿ, ಚಿನ್ನಯ್ಯ, ಪುಟ್ಟಮ್ಮರ ಜೀವನ ನೇರವಾಗಿ ಸಾಗುತ್ತದೆ. ಮಬ್ಬಾದ ಕಾನೂರು ಮನೆಯ ನಂದಾದೀಪ ಪುನಃ ಪ್ರಜ್ವಲಿಸಿ ಬೆಳಗುತ್ತದೆ. ಕರ್ಮಯೋಗಿ ಹೂವಯ್ಯ, ಖಾದಿ ಉಟ್ಟ ತ್ಯಾಗಜೀವಿ ಸೀತಿ, ತಾರತಮ್ಯವಿಲ್ಲದೆ ಇವರೊಡನೆ ಕೂಡಿದ ವಾಸುವಿನ ಬ್ರಾಹ್ಮಣಮಿತ್ರರು ಬುದ್ಧನ ಜನ್ಮದಿನದಂದು ನವಜೀವನ ಮಂತ್ರಗಾನವನ್ನು ಹಾಡುತ್ತಾರೆ. ಈ ಹಾಡು

ಕಣ್ದೆರೆಯಿರಿ ನವಕಾಂತಿಗೆ, ಶಾಂತಿಗೆ,

ಓ ಕ್ರಾಂತಿಯ ಪುತ್ರರೆ, ಬಾಳಿ!

ಎಂಬ ಸಂದೇಶವನ್ನು ನಾಡಿಗೆ ಸಮಾಜಕ್ಕೆ ಸಾರುತ್ತದೆ. ಹೀಗೆ ಈ ಕಾದಂಬರಿ ಕಾಡಿನ ಕಾರ್ಗತ್ತಲಲ್ಲಿ ನಡೆದು ಗಿರಿಯ ಉನ್ನತಿಗೇರಿ ನವೋದಯವನ್ನು ಹರಸಿದೆ.

'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡತಿ' ಕಾದಂಬರಿಗಳು ನಮ್ಮ ಸಮಾಜದ ಬೆಳವಣಿಗೆಯ ವಿವಿಧ ಘಟ್ಟಗಳನ್ನು ಪ್ರತಿನಿಧಿಸುತ್ತವೆ. ಕುವೆಂಪು ಅವರು ಈ ಸಮಾಜದಲ್ಲಿ ಬರುವ ಹಿರಿಕಿರಿಯ ಅಂಶಗಳಿಗೆಲ್ಲ ಗಮನವಿತ್ತಿದ್ದಾರೆ. ಅವರ ಎಲ್ಲ ಚಟುವಟಿಕೆಗಳು, ಸಂಕೀರ್ಣತೆಗಳು, ಮತ್ತು ಗತಿ ಇಲ್ಲಿ ಚಿತ್ರಿತವಾಗಿದೆ. ಇಲ್ಲಿನ ಪಾತ್ರಗಳು ಮತ್ತು ವಾಸ್ತವಿಕೆಯನ್ನು ಪ್ರದರ್ಶಿಸುವುದಷ್ಟೇ ಅಲ್ಲದೆ ಸಾಮಾಜಿಕ ಬದಲಾವಣೆಗೆ ತಕ್ಕಂಥ ಪ್ರತಿಕ್ರಿಯೆಯನ್ನು ತೋರಿಸುತ್ತವೆ. ಹೊರ ಪ್ರಭಾವಗಳಿಗೆ ಅನುಗುಣವಾಗಿ ಆ ಪಾತ್ರಗಳ ದೃಷ್ಟಿಯಲ್ಲೂ ಬದಲಾವಣೆ ಕಂಡುಬರುತ್ತದೆ. 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಕಂಡು ಬರುವ ಸಮಾಜ ತನ್ನ ಪರಿಸರಕ್ಕೆ ಹೊಂದಿಕೊಂಡು ನಂಬಿಬಂದ ನಂಬಿಕೆ, ಪದ್ಧತಿಗಳನ್ನು ನೆಚ್ಚಿಕೊಂಡಿರುವಂಥದ್ದು. ಆದರೆ ಆ ಸಮಾಜ ಹೊರಗಿನ ಪ್ರಭಾವಕ್ಕೆ ಮಣಿಯದೆ ಇರಲಾರದು. ಅನ್ಯಮತ ಅನ್ಯನಾಗರಿಕತೆ ತನ್ನ ಪರಿಸರದಲ್ಲಿ ನುಸುಳಿಬಂದಾಗ ಇಲ್ಲಿ ಮಿಶ್ರ ಪ್ರತಿಕ್ರಿಯೆಯಾಗುತ್ತದೆ. ಆದರೂ ತನ್ನ ಸಂಸ್ಕೃತಿಯ ಸತ್ವವನ್ನು ಬಲಪಡಿಸಿ ಕೊಳ್ಳುವುದರಲ್ಲೇ ಈ ಸಮಾಜ ಸಾರ್ಥಕತೆಯನ್ನು ಕಾಣುತ್ತದೆಯೇ ಹೊರತು ಪರಕೀಯತೆಯಲ್ಲಲ್ಲ. ಕುವೆಂಪು ಅವರು ಹಿಂದೂ ಸಂಸ್ಕೃತಿಯೆಂದರೆ ಅಥವಾ ಭಾರತೀಯ ಸಂಸ್ಕೃತಿಯೆಂದರೆ ಅದು ಕೇವಲ ವೈದಿಕ ಸಂಸ್ಕೃತಿಯಲ್ಲ ಅದರಲ್ಲಿ ಅನೇಕಾನೇಕ ಶಕ್ತಿಸಂಚಯನಗಳಿವೆ ಎಂದು ತೋರಿಸಿದ್ದಾರೆ. ಅವರು ಈ ಸಂಸ್ಕೃತಿಯ ಎಲ್ಲ ಸ್ತರಗಳ ಅನುಭವಗಳನ್ನು ಅಭಿವ್ಯಕ್ತಿಸುವ ಸಾಮರ್ಥ್ಯ ಪಡೆದಿದ್ದಾರೆ.

ಮುಂದೆ ವರ್ಗಕಲಹಕ್ಕೆ ನಾಂದಿಯಾಗಬಹುದಾದ ವರ್ಣತಾರತಮ್ಯ ಸ್ವರೂಪವನ್ನು ಚಿತ್ರಿಸಿದ್ದಾರೆ. 'ಕಾನೂರು ಹೆಗ್ಗಡಿತಿ'ಯಲ್ಲಂತೂ ಸಾಮಾಜಿಕ ಮತ್ತು ವೈಚಾರಿಕ ಮೌಲ್ಯಗಳ

ಸಂಘರ್ಷಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಕುವೆಂಪು ಅದರ ಸಾಮಾಜಿಕ ಪ್ರಜ್ಞೆ ಇಲ್ಲಿ ಯಥೋಚಿತವಾಗಿ ಕಂಡುಬರುತ್ತದೆ. ಅವರ ದೃಷ್ಟಿ ಕತ್ತಲೆಯಿಂದ ಬೆಳಕಿಗೆ ಒಯ್ಯುವಂಥದ್ದು; ಬದುಕಿನಿಂದ ಒಳಿತಿಗೆ ಸಾಗುವಂಥಾದ್ದು; ಭೂಮಿಯ ಮೇಲೆ ನಿಂತೇ ಆಗಸವನ್ನು ಅಳೆಯಬಲ್ಲಂಥಾದ್ದು; ಅಂದರೆ ವಾಸ್ತವತೆ ಆಧ್ಯಾತ್ಮಿಕತೆಗಳೆರಡೂ ಇವರ ಕಾದಂಬರಿಗಳಲ್ಲಿ ಮೇಳವಿಸಿವೆ. ಇದು ಭಾರತೀಯ ದೃಷ್ಟಿ; ಕುವೆಂಪು ಅವರು ಜೀವನವನ್ನು ಅನುಭವಿಸಿ ಕಲೆಯನ್ನು ಸೃಷ್ಟಿಸುತ್ತಾರೆ; ಅವರದು ಕೇವಲ ಬುದ್ಧಿ ಪೂರ್ವಕವಾದ ಸೃಷ್ಟಿಯಲ್ಲ. ಅದು ಹೃದಯದಿಂದ ಬಂದದ್ದಾದ್ದರಿಂಲೇ ಇತರರ ಹೃದಯಗಳನ್ನು ಮುಟ್ಟುವ ಶಕ್ತಿಪಡೆದಿದೆ. ಈ ಕಾದಂಬರಿಗಳು ಸಾರ್ವಕಾಲಿಕವಾದವುಗಳು, ಜೀವನ ಸತ್ಯವನ್ನು ಸಾರುವಂಥವು. ಇವು ಅತ್ಯುತ್ತಮ ಕಲಾಕೃತಿಗಳಾಗಿ ಅತ್ಯುನ್ನತ ಮಟ್ಟಕ್ಕೇರಿವೆ.

* * * * *

ಅಧ್ಯಾಯ: ೩

ಒಕ್ಕಲಿಗರ–ಗೌಡರ ಸಾಂಸಾರಿಕ ಜೀವನ

ಕುವೆಂಪು ಮಲೆನಾಡಿನ ವಿಶಾಲವಾದ ಜೀವನವನ್ನು ಒಕ್ಕಲಿಗ ರೈತರ ಹವ್ಯಾಸ ಚಟವನ್ನು ಕುರಿತು ಹೇಳುತ್ತಾರೆ. ಆ ನಾಡಿನ ಒಕ್ಕಲಿಗರಲ್ಲಿ ಬಹು ಪುರಾತನ ಕಾಲದಿಂದೆಲ್ಲ ಹೆಂಡ ಕಳ್ಳು ಮೊದಲಾದ ಮಾದಕ ಪದಾರ್ಥಗಳನ್ನೂ ಸೇವಿಸುವುದು ಅತಿ ಸಾಮಾನ್ಯವಾದ ರೂಢಿಯಾಗಿತ್ತು. ಈಗಲೂ ಅದು ಸಂಪೂರ್ಣವಾಗಿ ತೊಲಗಿಲ್ಲ. ಮೊದಲು ಎಲ್ಲೆಲ್ಲಯೂ ಬಹಿರಂಗವಾಗಿ ನಡೆಯುತ್ತಿದ್ದುದು. ಈಗ ಅಲ್ಲಲ್ಲಿ ಅಂತರಂಗವಾಗಿ ಸಾಗುತ್ತಿದೆ. ಅಂತೂ ಮಧ್ಯಪಾನ ಮಾಡುವುದು ನಾಚಿಕೆಗೇಡುತನ ಕೆಲಸವೆಂದೇನೂ ಎಲ್ಲರಿಗೂ ಗೊತ್ತಾಗಿದೆ. ಕಾರಣವೇನೆಂದರೆ ಸುಮಾರು ೩೦–೩೫ ವರ್ಷಗಳ ಹಿಂದೆ ನಾಡಿನ ಒಕ್ಕಲಿಗ ಮುಖಂಡರಲ್ಲಿ ಒಂದು ಚಳುವಳಿಯೆದ್ದಿತು. ಆ ಚಳುವಳಿಗೆ ಕ್ರೈಸ್ತಪಾದ್ರಿಗಳ ಉಪದೇಶವೂ, ಮೈಸೂರು ಸರ್ಕಾರದ ಮಲೆನಾಡು ಅಭಿವೃದ್ಧಿ ಇಲಾಖೆಯ ಭೋಧನೆಯೂ ಬ್ರಿಟಿಷ್ ಆಳ್ವಿಕೆಯಿಂದುಂಟಾದ ನಾಗರಿಕತೆಯ ಆಗಮನವೂ ಕಾಫಿ, ವೈನು, ವಿಸ್ಕಿ, ಇತ್ಯಾದಿಯಾದ ವಿದೇಶಿಯ ಪಾನೀಯಗಳ ಆಮದೂ, ಸನ್ನಿವೇಶ ಪ್ರಭಾವದಿಂದ ಜನರಲ್ಲಿ ಸ್ವಾಭಾವಿಕವಾಗಿ ಉತ್ಪನ್ನವಾದ ಜಾಗೃತಿಯೂ ಕಾರಣಗಳಾದುವೆಂದು ಊಹಿಸಬಹುದು. (ಕಾನೂರು ಹೆಗ್ಗಡತಿಪು.೨೧೦)

'ಕಾನೂರು ಹೆಗ್ಗಡತಿ' ಕಾನೂರು ಚಂದ್ರಯ್ಯಗೌಡರ ಕುಟುಂಬದ ಏಳು–ಬೀಳುಗಳನ್ನು ಗುರುತಿಸುವ ಬರವಣಿಗೆಯಾಗಿದೆ. ಈ ಏಳುಂಬೀಳುಗಳನ್ನು ನೆಲ್ಲಹಳ್ಳಿ ಸುಬ್ಬಿ ಕಾನೂರು ಹೆಗ್ಗಡತಿಯಾಗಿ ಕಾನೂರಿಗೆ ಬಂದ ನಂತರದ ಸಂದರ್ಭದಲ್ಲಿ ಸೆರೆಹಿಡಿಯಲಾಗಿರುವುದರಿಂದ ಕಾದಂಬರಿಗೆ ಈ ಹೆಸರು ನೀಡಲಾಗಿದೆ. ಅನ್ನಬಹುದು.

ಮುತ್ತಳ್ಳಿ ರಾಮಯ್ಯಗೌಡರ ಕುಟುಂಬ ಕಾನೂರು ಕುಟುಂಬದೊಂದಿಗೆ ನಿಕಟ ಸಂಬಂದ ಹೊಂದಿದ್ದರೂ ಸೀತೆಮನೆ ಸಿಂಗಪ್ಪಗೌಡರ ಕುಟುಂಬದ ಕತೆಯೂ ಇದೇ ರೀತಿಯಲ್ಲಿ ತನ್ನ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳುತ್ತದೆ. ಎನ್ನಬಹುದು. ಈ ಮೂರೂ ಕುಟುಂಬಗಳು ಜಮೀನ್ದಾರಿ ಕುಟುಂಬಗಳಾಗಿರುವುದರಿಂದ ಅವುಗಳು ಫ್ಯೂಡಲ್ ವ್ಯವಸ್ಥೆಯನ್ನು ಕುರಿತ ಕತೆಗೆ ನಿರಿಗೆಗಳನ್ನು ಸೇರಿಸುತ್ತವೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯ ಎರಡನೇ ಅಧ್ಯಾಯದಲ್ಲಿ ಲೇಖಕರು 'ಒಕ್ಕಲಿಗರಿಗೂ ಹಳೆ ಪೈಳಕದವರಿಗೂ ಇದ್ದ ಸಂಘರ್ಷಮಯ ಸಂಬಂಧವನ್ನು ವರ್ಣಿಸುತ್ತಾರೆ.

"ಸಾಧಾರಣವಾಗಿ ಒಕ್ಕಲಿಗ ಒಡೆಯರ ಒಕ್ಕಲುಗಳಾಗಿದ್ದುಕೊಂಡು ಬಗನಿಯ ಮರದಿಂದ ಕಳ್ಳು ಇಳಿಯಿಸಿ ಕುಡಿದು ಮಾರಿ ಜೀವನ ಮಾಡುವ ಹಳೆ ಪೈಕದವರಿಗೆ ಸ್ವಂತ ಜಮೀನಿರುವುದು ಬಹಳ ಅಪೂರ್ವ ಮಹಾ ಅನಾಚಾರವೆಂದು ಅನೇಕರ ಮನಸ್ಸು, ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ದವೋ ಹಾಗೆಯೇ ಸ್ವಂತ ಜಮೀನು ಮಾಡುವುದು ಹಳೆ ಪೈಕದವರಿಗೆ ನಿಷಿದ್ದ ಎಂದು ಒಕ್ಕಲಿಗರಾಗಿದ್ದ ಹೆಗ್ಗಡೆಗೌಡ ನಾಯಕರುಗಳೆಲ್ಲಾ ಸೇರಿ ತೀರ್ಮಾನ ಮಾಡಿದ್ದರು. ಅಷ್ಟೇ ಅಲ್ಲದೆ ಮದುವೆ ಮೊದಲಾದ ಸಂಭ್ರಮಗಳಲ್ಲಿ ಹಳೆ ಪೈಕದವರು ಒಕ್ಕಲಿಗರನ್ನೂ ಯಾವ ವಿಧದಲ್ಲಿಯೂ ಅನುಕರಿಸಕೂಡದೆಂದೂ ಮಾಮೂಲು ಕಟ್ಟಾಗಿತ್ತು.

ಹಳೆಪೈಕದವರಿಗೂ ಒಕ್ಕಲಿಗರಿಗೂ ಸಂಘ–ಏರ್ಪಟ್ಟಂತಹ ಸಂದರ್ಭದಲ್ಲಿ ಜಲಪಕ್ಷಿಪಾತಿಯಾಗಿದ್ದ ಸರ್ಕಾರ ಬಲಿಷ್ಠರೂ ಬಹುಸಂಖ್ಯಾತರೂ ಆಗಿದ್ದ ಒಕ್ಕಲಿಗರ ಪರವಾಗಿಯೇ ತೀರ್ಪುಕೊಟ್ಟಿತ್ತಷ್ಟೆ:

"ಸರ್ಕಾರದಿಂದ ಕಾನೂನಾಗಿ ಬಂದ ಮಾತ್ರಕ್ಕೆ ಅನ್ಯಾಯ ನ್ಯಾಯವಾಗುತ್ತದೆಯೇ ಎಂದು ಕೆಲವು ಸ್ವತಂತ್ರ ದೃಷ್ಟಿಯ ಹಳೆ ಪೈಕದ ನಾಯಕರು ಅದಕ್ಕೆ ವ್ಯಕ್ತಿರಿಕ್ತವಾಗಿ ನಡೆಯಲು ಪ್ರಯತ್ನಿಸುತ್ತಿದ್ದರು. ಅವರ ಆ ಪ್ರಯತ್ನ ಸರ್ಕಾರವೆಂದಿಗೂ ಅಡ್ಡ ಬರುತ್ತಿರಲಿಲ್ಲವೆಂದು ದೇವರಾಣೆ ಹಾಕಿ ಬೇಕಾದರೂ ಹೇಳಬಹುದು. ಆದರೆ ಒಕ್ಕಲಿಗರು ತಮ್ಮ ಹಕ್ಕಿನ ರಕ್ಷಣೆಗಾಗಿ ಪಣ ತೊಟ್ಟಿದ್ದರು."

ಒಕ್ಕಲಿಗೆ ಜಮೀನುದಾರರ ಆಳುಗಳೂ ಆಗಿದ್ದ ಹಳೆಪೈಕದವರು ಬಹಿರಂಗವಾಗಿ ಯಾವ ತಂಟೆ ತಕರಾರುಗಳ ಗೋಜಿಗೂ ಹೋಗುತ್ತಿರಲಿಲ್ಲ ಆದರೆ ಸೇಸನಾಯ್ಕನಂತಹ ಸ್ವಂತ ಜಮೀನುದಾರರಿಗೆ ಅವರಿಗಿಂತ ನಾವೇನು ಕಡಿಮೆ? ನಮ್ಮ ಕುದುರೆ ನಮ್ಮ ದಂಡಿಗೆ ನಮ್ಮ ವಾದ, ನಮ್ಮ ಬೋವಿಗಳೂ ನಮ್ಮ ದುಡ್ಡು, ನಾವು ಖರ್ಚು ಮಾಡುವುದಕ್ಕೆ ಇವರದೇನು ಅಡ್ಡಿ? ಎಂಬ ಹುಮ್ಮಸ್ಸು ಇರುತ್ತಿತ್ತು. (ಮಲೆಗಳಲ್ಲಿ ಮದುಮಗಳು ಪು.೧೩) ಮಣ್ಣಿನ ಮಕ್ಕಳಿಗೆ ತವಾಗೆ ಅನ್ನ ಕೂಡುವ ಭೂಮಿ ತಾಯಿಯಂತೆಯೇ ಇನ್ನಿತರ ಪಶು ಪ್ರಾಣಿಗಳಲ್ಲಿಯೂ ಅಧಿಕ ಪ್ರೀತಿ, ತಾವು, ಸಾಕಿದ ದನ ಕುರಿ ನಾಯಿ ಹಂದಿ ಕೋಳಿಗಳ ಬಗ್ಗೆ ವಿಶೇಷ ಮಮತೆ ಅವುಗಳನ್ನು ತಮ್ಮ ಕುಟುಂಬದ ಸದಸ್ಯರಂತೆ ವಿಶ್ವಾಸದಿಂದ ನೋಡಿಕೊಳ್ಳುತ್ತಾರೆ. ಈ ವಿಚಾರದಲ್ಲಿ ಹಳೆಮನೆ ಸುಬ್ಬಣ್ಣ ಹೆಗಡೆಯವರಂತೂ ಅಪ್ಪಟ ಶೂದ್ರರು, ಅವರಿಗೆ ಕೋಳಿಒಡ್ಡಿ, ಕುರಿಒಡ್ಡಿ, ಹಂದಿಒಡ್ಡಿಗಳೆಂದರೆ ಗದ್ದೆ ತೋಟಗಳಷ್ಟೇ ಮುಖ್ಯ, ಕುಟುಂಬದ ಯೋಗಕ್ಷೇಮಕ್ಕಿಂತಲೂ ಅವರಿಗೆ ಕೋಳಿ ಕುರಿ ಹಂದಿಗಳ ಸೇವೆಯೇ ಹೆಚ್ಚು ಪ್ರಿಯವಾದುದು. ಬಟ್ಟೆಯ ವಾಸನೆ, ಅವರಿಗೆ ಸ್ನೇಹಿತನ ಆಗಮನದಷ್ಟೇ ಸಂತೋಷವನ್ನುಂಟು ಮಾಡುತ್ತದೆ.

ಬೇಟೆಗಾರನಿಗೆ ನಾಯಿಗಳಿಂದ ಪ್ರಾಣ, ಅವುಗಳಿಗಾಗುವ ಅಪಾಯ ತನ್ನ ಅಂಗಾಂಗಳಿಗಾಗುವ ಅಪಾಯದಂತೆಯೇ ಎಂದು ಭಾವಿಸುತ್ತಾನೆ, ಹೆಗ್ಗಡತಿಯಲ್ಲಿ ಬರುವ ನಾಯಿ 'ಟೈಗರ್' ಮತ್ತು ಪುಟ್ಟಣ್ಣನ ಮೈತ್ರಿಯಿಂದ ನಾಯಿಗಳ ಬಗೆಗೆ ಅವರಿಗಿರುವ ಪ್ರೀತಿ ಎಷ್ಟರ ಮಟ್ಟಿನದೆಂಬುದನ್ನು ನೋಡಬಹುದು. ಜಾಕಿಯ ದೋಣಿಯ ಪೆಟ್ಟಿನಿಂದ ಟೈಗರ್ ಸತ್ತಾಗ ಪುಟ್ಟಣ್ಣ ನಿಗಾದ ವ್ಯಥೆ ಅಷ್ಟಿಷ್ಟಲ್ಲ. ಅದರ ಮೈಸವರುತ್ತಾ, 'ಟೋಪಿ'ಯಿಂದ ಗಾಳಿ ಬೀಸುತ್ತಾನೆ. ಟೈಗರ್ ಟೈಗರ್ ಎಂದು ಕೂಗುತ್ತಾನೆ. ಟೈಗರಿನಾದ ಅವ್ಯಸ್ಥೆಯನ್ನು ಕಂಡು ಅವನ ಕರುಳಿಗೆ ಏರಿ ಹೊತ್ತಿಸಿದಂತೆ ಆಗುತ್ತದೆ. ಬಿಕ್ಕಿ ಬಿಕ್ಕಿ ಆಳುತ್ತಾನೆ. ಟೈಗರಿನ ಶವವನ್ನು ಬೈರನಿಂದ ಹೊರಸಿ ಕೊಂಡು ಬಂದು ಕಾನು ಬೈಲಿನ ಪ್ರಶಸ್ತವಾದ ಸ್ಥಳದಲ್ಲಿ ಮಣ್ಣು ಮಾಡುತ್ತಾನೆ. ಇಷ್ಟಕ್ಕೆ ಸಮಾಧಾನವಾಗುವುದಿಲ್ಲ. ಒಂದು ಬಂಡೆಯ ಮೇಲೆರಿ ಚಿಮತಾಮನ್ನನಾಗಿ ಟೈಗರಿನ ಜೀವನವನ್ನು ಸ್ಮರಿಸುತ್ತ ಕುಳ್ಳಿರಬೇಕಾದರೆ ವಲಗಿಯೊಂದು ನಾಯಿಯ ಆಕಾರವನ್ನೂ ತಾಳಿ ಸಂಜೆಯ ಮಾಯೆಯಲ್ಲಿ ಸಜೀವವಾದಂತೆ ಕಂಡು ಬರುತ್ತದೆ. ಅದರೆ ಆತ್ಮ ಮುಗಿಲಿನ ರೂಪದಲ್ಲಿ ಸ್ವರ್ಗಕ್ಕೆ ಹೋಗುತ್ತಿದೆ. ಎಂದು ಸಂತೋಷಪಡುತ್ತಾನೆ. ಪುಟ್ಟಣ್ಣ ಮತ್ತು ಟೈಗರಿನ ಸಂಬಂಧ ಮನುಷ್ಯ ಮನುಷ್ಯರ ಸಂಬಂದಕ್ಕಿಂತ ಕಡಿಮೆಯೇನಲ್ಲ. ತನ್ನ ಪ್ರೀತಿಯ ನಾಯಿಯನ್ನೇ ಕೊನೆಗೆ ಸ್ವರ್ಗಕ್ಕೆ ಕಳುಹಿಸಿದಾಗಲೇ ಪುಟ್ಟಣ್ಣನಿಗೆ ಸಮಾನಧಾನವಾಗುವುದು. ಮಣ್ಣಿನ ಮಕ್ಕಳು ಹೇಗೆ ಪಶು ಪ್ರಾಣಿಗಳಲ್ಲಿಯೂ ದೈವವನ್ನು ಕಾಣುತ್ತಾರೆ ಎಂಬುದನ್ನು ಕುವೆಂಪು ಹೃದಯ ಸ್ಪರ್ಶಿಯಾಗಿ ಚಿತ್ರಿಸುತ್ತಾರೆ. ಪ್ರಾಣಿಗಳೂ ಪ್ರಕೃತಿಯ ಒಂದಂಶ ಅವುಗಳಿಗೂ ತನ್ನಮತೆ ವ್ಯಕ್ತಿತ್ವ ವಿದೆಯೆಂಬುದು ಅವರ ಭಾವ, ಈ ಮೂಲಕ ಪ್ರಾಣಿಗಳ ಜೊತೆ ಕೂಡಿ ಒಡನಾಡಿಯಾಗಿ ಜೀವಿಸಿದವರಿಗಲ್ಲದೆ ಇತರರಿಗೆ ಅಂತಹ ಆತ್ಮೀಯತೆ ಬರುವುದು ಕಷ್ಟ ಶೂದ್ರ ಮನೋಭಾವದ ಶ್ರೇಷ್ಟತೆ ಇಂಥ ಕಡೆ ವ್ಯಕ್ತವಾಗುತ್ತದೆ.

ಕಾನೂರಿನಲ್ಲಿ ದೆಯ್ಯದ ಹರಕೆ ಎಂದರೆ, ಅದೊಂದು ಮಹಾ ಸಂಭ್ರಮದ ಘಟನೆ ಚಂದ್ರಯ್ಯಗೌಡರ ಆಳುಗಳು ಒಕ್ಕಲು ಸಮೀಪದ ಬಂಧುಗಳು ಎಲ್ಲರೂ ಅದರಲ್ಲಿ ಬಾಗಿಗಳಾಗುವುದು ವಾಡಿಕೆಯಾಗಿತ್ತು. ಕೆಲವು ಕುರಿಗಳು ಕುಕ್ಕುಟಗಳು ಆದಿನ ಭೂತ ರಣ, ಬೇಟೆರಣ, ದೆಯ್ಯ, ದೇವರುಗಳಿಗೆ ಬಲಿಯಾಗುತ್ತಿದ್ದರಿಂದ ಕೆಲವರ ಹೊಟ್ಟೆಗೆ ಹಬ್ಬವಾಗುತ್ತಿತ್ತು. ಕೆಲವು ಬಂಧುಗಳು ಒಕ್ಕಲಿಗರು ಹಿಂದಿನ ದಿನವೇ ಮನೆಗೆ ಬಂದುಬಿಡುತ್ತಿದ್ದರು.

ಮರುದಿನ ಬೆಳಿಗ್ಗೆ ಆಳುಗಳೆಲ್ಲಾ ಹಾಜರಾಗುವರು. ಬೇಲರ ಭೈರ ಸಿದ್ಧ, ಹಳೆಪೈಕದ ತಿಮ್ಮ ಕೆಳಕಾನೂರು ಅಣ್ಣಯ್ಯಗೌಡರು ಹೀಗೆ ಹತ್ತಿರದ ಸಂಬಂಧಿಕರು ಸೇರಿ 'ದೆವ್ವದ ಹರಕೆ' ಯಲ್ಲಿ ಪಾಲ್ಗೊಳ್ಳುತ್ತಿದ್ದರು. ರೈತರೆಲ್ಲಾ ಆ ದಿನ ಸಂಭ್ರಮದಿಂದ ಇರುತ್ತಿದ್ದರು.

ಮೇಲುಜಾತಿಯ ಕೆಲವರು ಪಾಪಕಾರ್ಯಕ್ಕೆ ನಿಂತರು ಕಡುಬಿಗೆ ಹಿಟ್ಟು ಕುಟ್ಟುವುದು, ಮಾಂಸಕ್ಕೆ ಕಾರ ಕಡೆಯುವುದು, ತೆಂಗಿನಕಾಯಿ ತುರಿಯುವುದು, ಮಸಾಲೆ ಸಾಮಾನು ಸಜ್ಜುಗೊಳಿಸುವುದು. ಬಾಳೆಯಲೆ ಬಾಡಿಸುವುದು, ಕೆರೆಯ ಬಳಿ ಕತ್ತಿ ಮಸೆಯುವುದು, ಕುರಿಕೋಳಿಗಳನ್ನು ಹಸಿಗೆ ಮಾಡಲು ಬೆಂಕಿಗಾಗಿ ಕಟ್ಟಿಗೆ ತಂದೊಡ್ಡುವುದು, ಹೀಗೆ ನಾನಾ ರೀತಿಯ ಕಾರ್ಯಗಳನ್ನು ಆ ದಿನ ನೆರವೇರಿಸಲಾಗುತ್ತಿತ್ತು. ಗೌಡರ ಸಂಸಾರ ಆ ದಿನದಂದು ತುಂಬಿ ತುಳುಕುತ್ತಿತ್ತು.

ಕಾನೂರು ಚಂದ್ರಯ್ಯಗೌಡರ ಮಂಗಳೂರು ಹೆಂಚಿನ ದೊಡ್ಡಮನೆ ಒಂಟಿಯಾಗಿತ್ತು. ಪಶ್ಚಿಮ ದಕ್ಷಿಣ ದಿಕ್ಕುಗಳಲ್ಲಿ ಅವರ ಗದ್ದೆ ತೋಟಗಳೂ, ಒಕ್ಕಲು ಮತ್ತು ಆಳುಗಳ ಹುಲ್ಲುಮನೆ ಮತ್ತು ಬಿಡಾರಗಳು, ಕಣ ಕೊಟ್ಟಿಗೆ ಹಟ್ಟಿಗಳೂ, ಇದ್ದವು. ಆ ಮನೆಯಲ್ಲಿ ೩೦-೪೦ ಮಂದಿ ನಿರಾತಂಕವಾಗಿ ವಾಸಮಾಡಬಹುದಾಗಿತ್ತು. ಈ ಕಥೆಯ ಕಾಲಕ್ಕೆ ಪೂರ್ವದಲ್ಲಿ ಗಂಡಸರು ಹೆಂಗಸರು ಮಕ್ಕಳು ಎಲ್ಲಾ ಇಪ್ಪತ್ತೊದು ಮೂವತ್ತು ಮಂದಿ ಮನೆಯವರೂ ಹತ್ತು ಹದಿನೈದು ಜನ ಸೇವರಕರು ಒಟ್ಟು ೪೦-೪೫ ಜನಗಳ ಮಟ್ಟಿಗೆ ಮನೆಯಲ್ಲಿ ತುಂಬಿರುತ್ತಿದ್ದರಂತೆ, ಆದರೆ-ಕಾಯಿಲೆಯಿಂದಾಗಿ ಸತ್ತು, ಆ ಕುಟುಂಬದಲ್ಲಿ ಏಳು ಜನ ಮಾತ್ರ ಇದ್ದರು ಅದರಲ್ಲಿಯೂ ಹೂವಯ್ಯ ರಾಮಯ್ಯರು ಓದಲು ಹೋಗಿದ್ದುದರಿಂದ ತತ್ಕಾಲದಲ್ಲಿ ಆಳುಗಳನ್ನು ಬಿಟ್ಟರೆ ಮನೆಯರಾಗಿದ್ದವರು, ಐದೇ ಮಂದಿ ಯಜಮಾನರಾಗಿದ್ದ ಚಂದ್ರಯ್ಯಗೌಡರು ಅವರ ಮೂರನೆಯ ಹೆಂಡತಿ ಸುಬ್ಬಮ್ಮ ಅವರ ಎರಡನೆಯ ಹೆಂಡತಿಯ ಮಕ್ಕಳಾದ ಪುಟ್ಟಮ್ಮ ವಾಸು, ಚಂದ್ರಯ್ಯಗೌಡರ ಗತಿಸಿದ ಅಣ್ಣನ ಹೆಂಡತಿ ಹೂವಯ್ಯನ ತಾಯಿಯೂ ಆದ ನಾಗಮ್ಮನವರು

ಚಂದ್ರಯ್ಯಗೌಡರಿಗೆ ಮೊದಲು ಅವರ ಅಣ್ಣ ಸುಬ್ಬಯ್ಯ ಗೌಡರು ಮನೆಗೆ ಯಜಮಾನರಾಗಿದ್ದರು. ಸುಬ್ಬಯ್ಯಗೌಡರು ಸಾಯುವಾಗ ಅವರಿಗೂ ಚಂದ್ರಯ್ಯಗೌಡರಿಗೂ ಮನಸ್ಸು ಸರಿಯಿರಲಿಲ್ಲ ನಾಗಮ್ಮನವರು ತಮ್ಮ ಗಂಡನ ಸಾವಿಗೆ ಚಂದ್ರಯ್ಯಗೌಡರೇ ಕಾರಣರೆಂದು ಎಲ್ಲರೊಂದಿಗೂ ಸಾರುತ್ತಿದ್ದರು.

"ರಾಮಯ್ಯನ ತಾಯಿ ಚಂದ್ರಯ್ಯಗೌಡರ ಪ್ರಥಮ ಪತ್ನಿ ತೀರಿಕೊಂಡಾಗ ಅವರು ದುಃಖಾತಿರೇಕದಿಂದ ಆತ್ಮಹತ್ಯೆ ಮಾಡಿಕೊಳ್ಳಲೋಸುಗ ಬಂದೂಕನ್ನು ಕೈಗೆ ತೆಗೆದುಕೊಂಡಿದ್ದರು. ಒಂದು ವರ್ಷದ ಒಳಗಾಗಿಯೇ ಅವರಿಗೆ ಎರಡನೇ ವಿವಾಹ ನಡೆದು ಹೋಗಿತ್ತು. ಎರಡನೇ ಹೆಂಡತಿ ಪುಟ್ಟಮ್ಮ ವಾಸು ಇಬ್ಬರನ್ನು ಹೆತ್ತು ಮೂರನೆಯ ಹೆರಿಗೆಯಲ್ಲಿ ಶಿಶುಸಮೇತ ದಿವಂಗತರಾದರು. ನಂತರ ಮೂರನೆಯ ಮದುವೆಯಾಗಿ ಕಾನೂರಿನ ಸುಬ್ಬಮ್ಮನನ್ನು ವಿವಾಹವಾದರು. ನೆಲ್ಲುಹಳ್ಳಿಯ ಜನರಿಂದ 'ಸುಬ್ಬಿ' ಎಂದು ಕರೆಯಿಸಿಕೊಳ್ಳುತ್ತಿದ್ದವಳು ಚಂದ್ರಯ್ಯಗೌಡರ ಕೃಪೆಯಿಂದ ಕಾನೂರು ಸುಬ್ಬಮ್ಮ ಹೆಗ್ಗಡಿತಿಯಾಗಿದ್ದಳು.

ರಾಮಯ್ಯನ ಮದುವೆಯಾಯ್ತು ಕಾನೂರು ಚಂದ್ರಯ್ಯಗೌಡರು ಬಾಳೂರು ಸಿಂಗೇಗೌಡರು ಮೈಸೂರು ಬಸವೇಗೌಡರು, ಎಂಟೂರು ಶೇಷೇಗೌಡರು, ಅತ್ತಿಗದ್ದೆ ಹಿರಯಣ್ಣಗೌಡರು, ನುಗ್ಗಿಮನೆ ತಮ್ಮಣ್ಣಗೌಡರು, ಸಂಪಗೆ ಪುಟ್ಟಯ್ಯಗೌಡರು, ಇತ್ಯಾದಿ ದೊಡ್ಡ ಗೌಡರುಗಳಿಗಾಗಿ ಶ್ಯಾಮಯ್ಯಗೌಡರು ಪ್ರತ್ಯೇಕವಾದ ಉಪಚಾರಗಳನ್ನು ಏರ್ಪಡಿಸಿದ್ದರು. ಅದಕ್ಕಾಗಿ ಕೊಡಪಾನಗಟ್ಟಲೆ ಬಗನಿ ಕಳ್ಳು ಹೆಂಡೆಗಟ್ಟಲೆ, ಅಕ್ಕಿಹೆಂಡ, ಶೀಸೆಗಟ್ಟಲೆ ಸರಾಯಿ ಸಿದ್ಧವಾಗಿತ್ತು. ಬೇಕಾದಷ್ಟು ಕಂಬಳಿಕುರಿ, ಸೊಪ್ಪು ಕುರಿಗಳು ಹತವಾಗಿದ್ದವು. (ಕಾನೂನು ಹೆಗ್ಗಡತಿ ಪುಟ-೪೩೯-೪೪೧)

ಕೊನೆಗೂ ರಾಮಯ್ಯನ ಮದುವೆ ಸೀತೆಯೊಡನೆ ನೆರವೇರಿಯೇ ತೀರಿತು. ಅಣ್ಣಯ್ಯಗೌಡರು ಕಾನೂರಿಗೆ ಹೆಚ್ಚು ಕಡಿಮೆ ಒಂದು ಮೈಲಿ ದೂರವಿದ್ದ ಕೆಳಕಾನೂರಿನಲ್ಲಿ ಚಂದ್ರಯ್ಯಗೌಡರ ಗದ್ದೆ ತೋಟಗಳನ್ನೂ ಗಡಿ ಗುತ್ತಿಗೆಗೆ ಮಾಡಿಕೊಂಡು ಒಕ್ಕಲಾಗಿದ್ದರು. ಅವರಿಗೆ ಚಂದ್ರಯ್ಯಗೌಡರ ತಂದೆ ತಾತ ಎಲ್ಲರೂ ಪರಿಚಿತರಾಗಿದ್ದರು. ಒಕ್ಕಲುತನದಲ್ಲಿ ಮೊದಲು ನೆಮ್ಮದಿಯಾಗಿದ್ದವರು ಹೆಣ್ಣುಗಳಿಗಾಗಿ ತೆರವನ್ನು ತೆತ್ತೂ ತೆತ್ತೂ ಈಚೆಗೆ ಬಹಳ ದರಿದ್ರಾವಸ್ಥೆಗೆ ಇಳಿದಿದ್ದರು. ಅವರ ಗ್ರಹಚಾರಕ್ಕೆ ತಕ್ಕಂತೆ ಮೂವರು ಹೆಂಡಿರು ಸತ್ತು ನಾಲ್ಕನೇ ಹೆಂಡತಿಯೂ ರೋಗದಿಂದ ನರಳುತ್ತಿದ್ದಳು. ಅವರ ದ್ವಿತೀಯ ಪತ್ನಿಯಲ್ಲಿ ಹುಟ್ಟಿದ್ದ ಓಬಯ್ಯನೆಂಬ ಮಗನಿಗೆ ಇಪ್ಪತ್ತೈದು ವರ್ಷವಾಗಿತ್ತು. ತೃತೀಯ ಪತ್ನಿಗೆ ಏಳೆಂಟು ವರ್ಷದ ಹುಡುಗಿಯೊಬ್ಬಳಿದ್ದಳು (ಕಾನೂರು ಹೆಗ್ಗಡತಿ – ಪುಟ – ೬೩)

ಮಲೆನಾಡಿನ ಒಕ್ಕಲಿಗರಲ್ಲಿ ಬಹುಪುರಾತನದಿಂದಲೂ ಹೆಂಡ ಕಳ್ಳು, ಮೊದಲಾದ ಮಾದಕ ಪದಾರ್ಥಗಳನ್ನೂ ಸೇವಿಸುವುದು ಅತಿ ಸಾಮಾನ್ಯವಾದ ರೂಢಿಯಾಗಿತ್ತು. ಈಗಲೂ ಅವು ಸಂಪೂರ್ಣವಾಗಿ ತೊಲಗಿಲ್ಲ ಮೊದಲು ಎಲ್ಲೆಲ್ಲಿಯೂ ಬಹಿರಂಗವಾಗಿ ನಡೆಯುತ್ತಿದ್ದುದು ಈಗ ಅಲ್ಲಿಲ್ಲ ಅಂತರಂಗವಾಗಿ ಸಾಗುತ್ತಿದೆ. ಅಂತೂ ಮದ್ಯಪಾನ ಮಾಡುವುದು ನಾಚಿಕೆಗೇಡಿನ ಕೆಲಸವೆಂದೇನೂ ಎಲ್ಲರಿಗೂ ಗೊತ್ತಾಗಿದೆ. ಕಾರಣವೇನೆಂದರೆ ಸುಮಾರು ಮೂವತ್ತು ಮೂವತ್ತೈದು ವರ್ಷಗಳ ಹಿಂದೆ ನಾಡಿನ ಒಕ್ಕಲಿಗ ಮುಖಂಡರಲ್ಲಿ ಒಂದು ಚಳುವಳಿಯದ್ದಿತು ಆ ಚಳುವಳಿಗೆ ಕ್ರೈಸ್ತಪಾದ್ರಿಗಳ ಉಪದೇಶವೂ ಮೈಸೂರು ಸರ್ಕಾರದ ಮಲೆನಾಡು ಅಭಿವೃದ್ಧಿ ಇಲಾಖೆಯ ಬೋಧನೆಯೂ ಬ್ರಿಟೀಷ್ ಆಳ್ವಿಕೆಯಿಂದುಂಟಾದ ನಾಗರಿಕತೆಯ ಆಗಮನವೂ ಕಾಫಿ, ಮೆನು, ವಿಸ್ಕಿ, ಇತ್ಯಾದಿ ವಿದೇಶಿಯ ಪಾನೀಯಗಳ ಆಮದು ಸನ್ನಿವೇಶ ಪ್ರಭಾವದಿಂದ ಜನರಲ್ಲಿ ಸ್ವಾಭಾವಿಕವಾಗಿಯೇ ಉತ್ಪನ್ನವಾದ ಜಾಗೃತಿಯೂ ಕಾರಣಗಳಾದುವೆಂದು ಊಹಿಸಬಹುದು.

ಆಗ ಮಲೆನಾಡಿನಲ್ಲಿ ನೆಂಟರ ಮನೆಗೆ ಹೋದರೆ ಮೊದಲು ಕಾಲು ತೊಳೆಯಲು ನೀರು ಕೊಡುತ್ತಿದ್ದರು. ನಂತರ ತಾಂಬೂಲ ನಿವೇದನವಾಗುತ್ತಿತ್ತು. ತರುವಾಯ ಹುರಿಮಾಂಸ

ಅಥವಾ ಉಪ್ಪುಮೀನು ಅಥವಾ ಉಪ್ಪಿನಕಾಯಿ ಇತ್ಯಾದಿ ಯಾವುದಾದರೊಂದು ವ್ಯಂಜನದ ಸಮೇತವಾಗಿ ಬಾಯಿ ಲೊಚಗುಟ್ಟುವಷ್ಟರ ಮಟ್ಟಿಗೆ ಹುಳಿ-ಹುಳಿಯಾದ ಹೆಂಡ ಕಳ್ಳುಗಳನ್ನು ಅದರಪೂರ್ವಕವಾಗಿವಿನಿಯೋಗಿಸಿ ಅತಿಥಿಸತ್ಕಾರ ಮಾಡುತ್ತಿದ್ದರು.

(ಕಾನೂರು ಹೆಗ್ಗಡತಿ-ಪುಟ-೧೯೧-೧೯೨)

ಮಲೆಗಳಲ್ಲಿ ಮದುಮಗಳು ಪ್ರಕಟನೆಯ ದೃಷ್ಟಿಯಿಂದ ಎರಡನೇ ಕಾದಂಬರಿಯಾದರೂ ಕಥಾನಕದ ಕಾಲಕ್ರಮದಿಂದಾಗಿ ಅದು ಕಾನೂರು ಹೆಗ್ಗಡತಿಗಿಂತ ಹಿಂದೆ ಸರಿಯುತ್ತದೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದ ಕಥೆ ಇಲ್ಲಿದೆ. ಇದರಲ್ಲಿ ಒಂದೆಡೆಗೆ ಕಾನೂನು ಚಂದ್ರಯ್ಯಗೌಡರು ಮುತ್ತಳ್ಳಿ ಶಾಮಯ್ಯಗೌಡರು ಕಾಣಿಸಿಕೊಳ್ಳುತ್ತಾರೆ. ಅವರು ಅಲ್ಲಿ ರಸಿಕ ಯುವಕರಾಗಿದ್ದು ದೋಣಿಗಂಡಿಯಲ್ಲಿ ನದಿ ದಾಟಲು ಕಾಯುತ್ತಿರುತ್ತಾರೆ. ಹೀಗೆ ಎರಡು ಕಥಾನಕಗಳು ಸಂಬಂಧ ಪಡೆದಿವೆ. ಕುವೆಂಪು ಎರಡನೇ ಕಾದಂಬರಿಯಲ್ಲಿ ಕಾಲದ ದೃಷ್ಟಿಯಿಂದ ಹಿಂದಕ್ಕೆ ಹೋದುದೇಕೆ? ಎಂಬ ಪ್ರಶ್ನೆ ಎದುರಾಗುತ್ತದೆ. ಸಮಕಾಲೀನ ಸಮಸ್ಯೆಗಳನ್ನು ಇತಿಹಾಸದ ಬೆಳಕಿನಲ್ಲಿ ಇಟ್ಟು ನೋಡುವುದು. ಜೊತೆಗೆ ಮಲೆನಾಡು ಆಧುನಿಕತೆಯ ಪ್ರಕ್ರಿಯೆಗೆ ಸಿಕ್ಕು ತನ್ನ ಹಸಿರು ಉಸಿರು ಕಳೆದುಕೊಳ್ಳುತ್ತಿದ್ದುದ್ದು ಕುವೆಂಪು ಅವರಿಗೆ ಯಾತನೆಯ ಸಂಗತಿಯಾಗಿತ್ತು. ತಮ್ಮ ಬಾಲ್ಯಕಾಲದ ಅದಕ್ಕೂ ಹಿಂದಿನ ಮಲೆನಾಡನೂ ಕಟ್ಟಿಕೊಡುವ ಯತ್ನವೂ ಇಲ್ಲಿದೆ.

ಇಲ್ಲಿಯದು ತೀರ್ಥಹಳ್ಳಿ ಮೇಗರವಳ್ಳಿ ಲಕ್ಕುಂಡ ಸೀಮೆಯ ಹತ್ತಾರು ದಿನಗಳಲ್ಲಿ ನಡೆದುಬಿಡುವ ಕಥಾನಕವಾಗಿದೆ. ಕಾಡು ಕಾಡಿನ ಬದುಕು ಜನರ ಬದುಕು ಅವುಗಳ ವಿವರಗಳು ಒಂದರಲ್ಲೊಂದು ಸೇರಿಕೊಂಡು ಒಂದಕ್ಕೊಂದು ಪ್ರತಿಸ್ಪರ್ಧಿಸುತ್ತಾ ಮುಂಬರಿಯುತ್ತವೆ. ಅಲ್ಲಿಯ ವಿವಿಧ ಸ್ತರಗಳ ಜನರ ಸಾಮಾಜಿಕ ಬದುಕು ಆ ಪ್ರದೇಶದ ಬಣ್ಣ ವಾಸನೆಗಳೊಂದಿಗೆ ಆತ್ಮೀಯವಾಗಿ ಚಿತ್ರಿತವಾಗಿದೆ.

ಜೀವನ ಸಮೃದ್ಧಿಯು ಕಾದಂಬರಿಯ ಅನೇಕ ಪಾತ್ರಗಳಿಂದ ಘಟನೆಗಳಿಂದ ವ್ಯಕ್ತವಾಗಿದೆ. ಕಾದಂಬರಿಯ ಕೇಂದ್ರ ಬೆಳಕು ಮಲೆನಾಡಿನ ಜಮೀನ್ದಾರರ ಮನೆಗಳ ಆಗುಹೋಗುಗಳ ಮೇಲೆ ಹೆಚ್ಚು ಬೀಳುವುದಾದರೂ ಅದು ಅಲ್ಲಿ ದುಡಿಯುವ ವರ್ಗಗಳ ಬದುಕನ್ನು ಕುಶಲತೆಯಿಂದ ಕಾಣಿಸುತ್ತದೆ. ಕಾನೂರು ಹೆಗ್ಗಡತಿಯಲ್ಲಂತೂ ಸಾಮಾಜಿಕ ಮತ್ತು ವೈಚಾರಿಕ ಮೌಲ್ಯಗಳ ಸಂಘರ್ಷಗಳು ಸ್ಪಷ್ಟವಾಗಿ ಗೋಚರಿಸುತ್ತವೆ..

ಒಕ್ಕಲಿಗ ಗೌಡರ ಸಂಸಾರಿಕ ಜೀವನ ಪದ್ಧತಿ ಮಲೆನಾಡಿನಂತಹ ಪ್ರದೇಶದಲ್ಲಿ ವೈವಿಧ್ಯಮಯವಾಗಿದ್ದು ಮಲೆನಾಡ ಬದುಕಿಗೆ ಹತ್ತಿರವಾಗಿದೆ.

"ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಕಾದಂಬರಿಯ ಮುಖ್ಯ ಪಾತ್ರಗಳು ಚಂದ್ರಯ್ಯ ಗೌಡ ಮತ್ತು ಸುಬ್ಬಮ್ಮ. ಕೆಟ್ಟಬಾಳಿಯ ಚಂದ್ರಯ್ಯಗೌಡ ಮತ್ತು ಕುಸಂಸ್ಕೃತಿಯ ಸುಬ್ಬಮ್ಮ ಇವರ

ದಾಂಪತ್ಯಜೀವನವು ವಿರಸದ್ದಾಗಿತ್ತು. ಅವರ ಬಾಳಿನಲ್ಲಿ ಸಾಂಸಾರಿಕ ಸುಖವಿಲ್ಲ, ನೆಮ್ಮದಿಯಿಲ್ಲ. ಮದುವೆಗೆ ಬಂದ ಮಗನಿರುವಾಗ ಚಂದ್ರಯ್ಯಗೌಡ ಮೂರನೆಯ ಮದುವೆಗೆ ಸಿದ್ಧನಾಗುತ್ತಾನೆ. ವಧುವಾಗಿ ದೊರೆತ ಸುಬ್ಬಮ್ಮ ಅಸಂಸ್ಕೃತ, ಬಡತನದ ಮನೆಯಿಂದ

ಬಂದವಳು. ಗೌಡರು ಕಾಮಲಂಪಟರು, ಪಾನಾಸಕ್ತಿಯುಳ್ಳವರು. ಅವರಿಗೆ ಸಿರಿವಂತಿಕೆಯ ದರ್ಪವಿತ್ತು. ತಮ್ಮ ತರುಣ ಪತ್ನಿಯ ಬಗೆಗೆ ಅವರಿಗೆ ಅಸೂಯೆ ಸಂದೇಹಗಳೂ ಇದ್ದವು. ಅಂತೆಯೆ ಅವರು ಸುಬ್ಬಮ್ಮನೊಂದಿಗೆ ಕ್ರೂರತನದಿಂದ ವರ್ತಿಸುತ್ತಾರೆ. ಅವಳನ್ನು ಬೈಯುತ್ತಾರೆ, ಹೊಡೆಯುತ್ತಾರೆ. ಸಿರಿವಂತ ಮನೆತನಕ್ಕೆ ಬಂದ ತರುಣ ಪತ್ನಿಗೆ ಪ್ರತಿಷ್ಠೆ, ಪ್ರದರ್ಶನ ಪ್ರಿಯತೆಗಳು ಸಹಜವಾದವು. ಆದರೆ ದಾಂಪತ್ಯಜೀವನದಲ್ಲಿ ಸುಬ್ಬಮ್ಮನಿಗೆ ಅತೃಪ್ತಿ ನಿರಾಶೆಗಳೇ ಒದಗಿಬಂದವು. ಹೀಗಾಗಿ ಈ ದಾಂಪತ್ಯಜೀವನವು ವಿರಸದಲ್ಲಿಯೇ ಕೊನೆಗೊಳ್ಳುವುದು ಅನಿವಾರ್ಯವಾಯಿತು. ಈ ವಿರಸವು ಸಂಬಂಧಿಸಿದ ಇತರ ವ್ಯಕ್ತಿಗಳ ಬಾಳಿನಲ್ಲಿಯೂ ಕಹಿಯನ್ನು ತರುವಂತಾಯಿತು.

ಚಂದ್ರಯ್ಯಗೌಡನ ಆಶ್ರಿತ ಕೆಳಕಾನೂರು ಅಣ್ಣಯ್ಯಗೌಡ. ಆತನ ಮೂರನೆಯ ಹೆಂಡತಿಯ ಸಂಸಾರವೊಂದು ಅವರಿಗೆ ಶೂಲವಾಗಿತ್ತು. ಬಡತನದ ಆ ಸಂಸಾರಕ್ಕೆ ಸಾಲದ ಭಾರ ಹೆಚ್ಚುತ್ತಿದೆ. ಆ ಬಾಳಿನ ಕಷ್ಟಕಾರ್ಪಣ್ಯಗಳು ಕನಿಕರಸ್ಪದವಾಗಿವೆ.

ಚಂದ್ರಯ್ಯಗೌಡನ ಮೂರನೆಯ ಹೆಂಡತಿ ಸುಬ್ಬಮ್ಮನ ತಂದೆ ನೆಲ್ಲುಹಳ್ಳಿ ಪೆದ್ದೇ ಗೌಡನ ಸಂಸಾರದಲ್ಲಿಯೂ ಸುಖವಿಲ್ಲ. ಮಗಳ ವಿಷಯ ವಿವಾಹದ ಗೋಳು ಪೆದ್ದೇಗೌಡನನ್ನು ಅವರಿಸುತ್ತಿದೆ.

ಸ್ವಾರ್ಥಕ್ಕೆ, ಸೇಡಿನ ಬುದ್ಧಿಗೆ ಒಳಗಾದ ಸೀತೆಮನೆ ಸಿಂಗಪ್ಪಗೌಡನ ಕುಟಿಲತೆಯು ಆತನ ಬಾಳನ್ನು ಹಸಗೆಡಿಸಿತು. ಹೂವಯ್ಯ ಸೀತೆಯರ ಬಾಳಿನಲ್ಲಿಯೂ ಹುಳಿ ಹಿಂಡಿತು.

ಪರಿಸರ ಹೀಗಿರುವಾಗಲೂ ನೆಮ್ಮದಿಯ ಸಂಸಾರ ಸಾಗಿಸಿದ ದಂಪತಿಗಳೂ ಇಲ್ಲಿ ಇದ್ದಾರೆ. ಚಂದ್ರಯ್ಯಗೌಡರ ಬೀಗರಾದ ಮುತ್ತಳ್ಳಿಯ ಶ್ಯಾಮಯ್ಯಗೌಡರ ದಾಂಪತ್ಯವು ಇದಕ್ಕೆ ಚಂದ್ರಯ್ಯಗೌಡರ ಬೀಗರಾದ ಮುತ್ತಳ್ಳಿಯ ಶ್ಯಾಮಯ್ಯಗೌಡರ ದಾಂಪತ್ಯವು ಇದಕ್ಕೆ ಒಂದು ಉದಾಹರಣೆಯಾಗಿದೆ. ಶ್ಯಾಮಯ್ಯಗೌಡ ವಿವೇಕಿ–ಅವರ ಪತ್ನಿ ಗೌರಮ್ಮ ಒಳ್ಳೆಯ ಗೃಹಿಣಿ ಆದುದರಿಂದ ಅವರ ದಾಂಪತ್ಯಜೀವನದಲ್ಲಿ ಮಧುರ ಬಾಂಧವ್ಯವಿದೆ, ನೆಮ್ಮದಿಯಿದೆ. ಗಂಡಹೆಂಡಿರ ಅಭಿರುಚಿ, ದೃಷ್ಟಿಕೋನ ಒಂದೇ ಬಗೆಯವಾದಾಗ ದಾಂಪತ್ಯ ಜೀವನವು ಸರಸವಾದುದೇ ಆಗುವುದು. ಇದು ಬಾಳಿನಲ್ಲಿ ಸಾಹಿತ್ಯಸೃಷ್ಟಿಯಲ್ಲಿ ಕಂಡುಬರುವ ಸಂಗತಿಯಾಗಿದೆ.

ಶ್ಯಾಮಯ್ಯ ಗೌಡ-ಗೌರಮ್ಮ ಅವರ ಮಧುರ ಬಾಂಧವ್ಯದ ಪ್ರಭಾವದಿಂದಾಗಿ ತರುಣ ಪೀಳಿಗೆಯ ಚಿನ್ನಯ್ಯ-ಪುಟ್ಟಮ್ಮ ಅವರ ದಾಂಪತ್ಯ ಜೀವನವೂ ನೆಮ್ಮದಿಯದಾಗಿದೆ. ಅದಕ್ಕೆ ಈ ದಂಪತಿಗಳ ಸರಳಸ್ವಭಾವವೂ ಕಾರಣವಾಗುತ್ತದೆ. ಯಾವುದೋ ಅತಿಯಾಗದೆ, ವಿಷ ರೀತಕ್ಕೆ ಒಳಗಾಗದೆ ಇದ್ದ ದಾಂಪತ್ಯ ಜೀವನವು ಸುಗಮಾಗಿ ಸಾಗಿ ಸುಖಮಯವಾಗುವುದು. ವಾಸು-ಲಕ್ಷ್ಮಿಯರ ದಾಂಪತ್ಯವೂ ಈ ಬಗೆಯದಾಗಿದೆ.

ವಿವೇಕಿಯಾದರೂ ಶ್ಯಾಮಯ್ಯಗೌಡ ಒಂದು ವಿಷಯದಲ್ಲಿ ತಪ್ಪು ಮಾಡಿದ ಸನ್ನಿವೇಶವೊಂದಿದೆ. ಅದೇಂದರೆ ಆತನು ತನ್ನ ಪತ್ನಿಯ ಸಲಹೆಯನ್ನು ಗಮನಿಸದೆ ಸೀತೆಯನ್ನು ರಾಮಯ್ಯನಿಗೆ ಕೊಡಲು ಒಪ್ಪಿದುದು. ಇದರಿಂದಾಗಿ ಸೀತೆಯ ಬಾಳು ದುಃಖಮಯವಾಯಿತು. ಸೀತೆ-ರಾಮಯ್ಯನ ಕೈಹಿಡಿದು ಸುಖಸಂತೃಪ್ತಿಗಳನ್ನು ಪಡೆಯುವುದು ಸಾಧ್ಯವಿರಲಿಲ್ಲ.

ತಮ್ಮ ಅನುರಾಗದಲ್ಲಿ ವಿಫಲರಾದ ಸೀತೆ-ಹೂವಯ್ಯರು 'ಶುದ್ದಾತ್ಮಕ್ಕೆ ಸಂಬಂಧಪಟ್ಟ ಅತೀಂದ್ರಿಯ'ದ ಆನಂದವನ್ನು ಅರಸಬೇಕಾಯಿತೆಂದು ಕುವೆಂಪು ಹೇಳಿದ್ದಾರೆ.

'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಕಾದಂಬರಿಯಲ್ಲಿಯ ಜನಜೀವನವು ಪ್ರಮುಖವಾಗಿ ಅಸಂಸ್ಕೃತ ಮಟ್ಟದ್ದು. ಈ ಕಾದಂಬರಿಗೆ ಇನ್ನೂ ಹಿಂದಿನಕಾಲದ ಕಾಡುಮಾನವ ಮಟ್ಟದ ಚಿತ್ರವು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬಂದಿದೆ. ಲೇಖಕರೇ ಹೇಳಿದಂತೆ ಅದು ನಾಗರಿಕತೆಯ ಐತಿಹಾಸಿಕ ಪ್ರವಾಹಕ್ಕೆ ದೂರವಾದ ಅರಣ್ಯಕ ಪ್ರಪಂಚದ 'ಕ್ಷುದ್ರ, ಅಲ್ಪ ಜಟಿಲ ರಾಗದ್ವೇಷಮಯ ಜೀವನ ಜಾಲ'ವಾಗಿದೆ. ಇಲ್ಲಿಯ ಕೀಳ್ಮಟ್ಟದ ಜನಾಂಗದ ದಂಪತ್ಯಜೀವನವೆಂದರೆ ಲೈಂಗಿಕ ವ್ಯವಹಾರ ಮಾತ್ರ. ಗಂಡಹೆಂಡಿರು ವ್ಯಭಿಚಾರದಲ್ಲಿ ತೊಡಗಿದರೂ ಅದರಿಂದ ಯಾರು ತಲೆಕೆಡಿಸಿಕೊಳ್ಳದಂತಹ ಪರಿಸ್ಥಿತಿ ಅಲ್ಲಿದೆ. ಅಂತೆಯೆ ಕಾಮಪಂಕದಲ್ಲಿ ಹೊರಳಾಡುವ ಗಂಡು ಹೆಣ್ಣುಗಳ ಬಾಳನ್ನು ನಾವಿಲ್ಲಿ ಕಾಣುತ್ತೇವೆ.

ಬಲದಿಂದಲೋ ಕುಯುಕ್ತಿಯಿಂದಲೋ ಹೆಣ್ಣನ್ನು ಹಾರಿಸಿಕೊಂಡು ಹೋಗುವುದು, ಕಾಮಕೇಳಿಯಲ್ಲಿ ಪ್ರವೃತ್ತವಾಗುವುದು ಸಹಜವೆನ್ನುವಂತೆ ಇಲ್ಲಿ ನಡೆಯುತ್ತಿದೆ. 'ಕುಡಿತ, ಕೋಳಿ ಅಂಕ, ಜೂಜು.... ಹಾದರ, ಅತ್ಯಾಚಾರ ಇತ್ಯಾದಿಗಳಿಗೆಲ್ಲ' ಕುಪ್ರಸಿದ್ಧವಾದ ತಾಣಗಳೂ ಇಲ್ಲಿವೆ. 'ಕತ್ತಲೆ ಇದೆ ಎಂಬುದೇ ಮನಸ್ಸಿಗೆ ಬರಲೊಲ್ಲದ' ಮಟ್ಟದ ಚಿತ್ರವದು.

ಕಾದಂಬರಿಯ ಆರಂಭದಲ್ಲಿಯೆ ಕಂಡುಬರುವ ಗುತ್ತಿಯು ಪಯಣ ಕೈಗೊಂಡದ್ದು ತಿಮ್ಮಿ ಎಂಬ ಹೆಣ್ಣನ್ನು ಹಾರಿಸಿಕೊಂಡು ಬರಲೆಂದೇ. ಆ ಪಯಣಕ್ಕಾಗಿ ಬೇರೊಂದು ಕಾರಣವೂ ಒದಗಿಬಂದಿತ್ತು. ಗುತ್ತಿ ತನ್ನ ಉದ್ದಿಷ್ಟ ಕಾರ್ಯವನ್ನು ಸಾಧಿಸಿಯೇ ತೀರುತ್ತಾನೆ. ಆ ದಿಸೆಯಲ್ಲಿ

ಕಣ್ಣಾಪಂಡಿತರು ತನಗೆ ಕಟ್ಟಿದ ತಾಯಿತವು ನೆರವಾಯಿತೆಂದು ಆತನು ಭಾವಿಸುತ್ತಾನೆ. ಇನ್ನೊಬ್ಬನ ಮದುವಣಗಿತ್ತಿಯಾಗಬೇಕಾಗಿದ್ದ ತಿಮ್ಮಿ ರಾತ್ರಿ ಗುತ್ತಿಯೊಂದಿಗೆ ಪರಾರಿಯಾಗುತ್ತಾಳೆ. ಪಯಣದ ಮಧ್ಯದಲ್ಲಿಯೇ ಇಬ್ಬರೂ ಉದ್ರಿಕ್ತ ಕಾಮದ ಸಮಾಚಾರವನ್ನು ತಿಮ್ಮಿ ಹೇಳುತ್ತಾಳೆ. ಈ ಸಂಗತಿಯು ಗುತ್ತಿಗಾಗಲಿ ತಿಮ್ಮಿಗಾಗಲಿ ಮಹತ್ವದ ವಿಷಯವೆಂದು ತೋರುವುದಿಲ್ಲ. ಅಂತೆಯೆ ಅದು ಅವರ ಮನಸ್ಸಿಗೆ ಕಿರಿಕಿರಿಯನ್ನುಂಟುಮಾಡುವುದಿಲ್ಲ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಜನಜೀವನವನ್ನು ಪ್ರತಿನಿಧಿಸುವಂತಿದೆ ಈ ಎರಡು ಪಾತ್ರಗಳು

ಗುತ್ತಿ ಹಾರಿಸಿಕೊಂಡು ಬಂದ ತಿಮ್ಮಿಯ ತಂದೆ ಆಕೆಯನ್ನು ತಿರುಗಿ ಕರೆದುಕೊಂಡು ಹೋಗುವ ಮತ್ತು ಗುತ್ತಿಯನ್ನು ಪೋಲೀಸರಿಗೆ ಒಪ್ಪಿಸುವ ಸಿದ್ಧತೆ ಕೈಕೊಳ್ಳುತ್ತಾನೆ. ಈ ಸಮಾಚಾರ ತಿಳಿದಾಗ ಇವರಿಬ್ಬರೂ ಸ್ವಸ್ಥಾನ ತೊರೆದು ಬೇರೆ ಕಡೆಗೆ ಸುಳಿಯುತ್ತಾರೆ. ಪ್ರತ್ಯೇಕವಾಗಿ ಇಬ್ಬರೂ ಪೀಂಚಲು ಮನೆಗೆ ಬಂದು ಅಲ್ಲಿ ಆಶ್ರಯ ಕೋರುತ್ತಾರೆ. ಪೀಂಚಲು ಬಳಿ ತಿಮ್ಮಿಯನ್ನು ಕಂಡ ಐತ ಆಕೆ ಯಾರೆಂದು ಕೇಳಿದಾಗ ತಮ್ಮ ತಂಗಿಯೆಂದು ಆಕೆ ಹೇಳುತ್ತಾಳೆ. ತನ್ನ ಹೆಂಡತಿ ತಂಗಿಯ ಬಳಿ ಮಲಗಿ ತನ್ನನ್ನು ದೂರ ಮಲಗಿಸುವಳೆಂಬ ಸಂಕಟ ಐತನಿಗಾಗುತ್ತದೆ. ಆದರೆ ಪೀಂಚಲು ಉಪಾಯವಾಗಿ ತಿಮ್ಮಿಯನ್ನು ಗುತ್ತಿಯ ಬಳಿ ಮಲಗಲು ಕಳಿಸುತ್ತಾಳೆ. ಐತ ತನ್ನ ಪತ್ನಿಯ 'ಶಯನ ಸಂವಿಧಾನ ರಾಜಕಾರಣ ತಂತ್ರಜ್ಞತೆ'ಯನ್ನು ಮೆಚ್ಚಿಕೊಳ್ಳುತ್ತಾನೆ. ಆಗ ಗುಡಿಸಲಿನಲ್ಲಿ ಕವಿದ ಕತ್ತಲೆಯ 'ಮನ್ಮಥ ಧೈರ್ಯ ಪ್ರಚೋದಿಯಾಯಿತಂತೆ. 'ರತಿ ಕುತೂಹಲ'ದ ಹಲವು ಸನ್ನಿವೇಶಗಳು ಈ ಕಾದಂಬರಿಯಲ್ಲಿವೆ.

ಪಿಜಿಣ-ಅಕ್ಕಣಿಯರದು ಇನ್ನೊಂದು ದಾಂಪತ್ಯ. ರೋಗಗ್ರಸ್ತನಾಗಿ ದುರ್ಬಲನಾಗಿದ್ದ ಪಿಜಿಣನಿಂದ ಅಕ್ಕಣಿಗೆ ಲೈಂಗಿಕ ತೃಪ್ತಿಯಿರಲಿಲ್ಲ. ಚೀಂಕ್ರನೆಂಬ ಧೂರ್ತ ಅವಳಿಗೆ ಆ ತೃಪ್ತಿಯನ್ನು ಒದಗಿಸಿದ. ಆತನು ಆಕೆಯನ್ನು ಗಂಡನಿಂದ ಹಾರಿಸಿಕೊಂಡು ಹೋಗುವ ಸನ್ನಾಹವನ್ನೂ ತೋರಿದ. ಅದಕ್ಕೆ ಅಕ್ಕಣಿಯ ಒಪ್ಪಿಗೆಯಿರಲಿಲ್ಲ. ಗಂಡನು ತನ್ನವನೆಂಬ ಅಭಿಮಾನ ಆಕೆಗೆ ತಪ್ಪಿರಲಿಲ್ಲ. "ಅವನ ಕೈಮೀರಿ ಅವನಿಗೆ ಒದಗಿದ್ದ ಅಸ್ವಸ್ಥತೆಯೊಂದೇ ಪಿಜಣನಲ್ಲಿದ್ದ ದೋಷವಾಗಿತ್ತು.....ತನ್ನ ಗಂಡನ ಗೌರವವನ್ನು ಬಿಟ್ಟುಕೊಡಲು ಅವಳು ಸಿದ್ಧಳಿರಲಿಲ್ಲ" ಗಂಡನ ರೋಗ ಗುಣವಾಗುವುದಿಲ್ಲವೆಂಬುದು ಅಕ್ಕಣಿಗೆ ಖಾತ್ರಿಯಾಗಿತ್ತು. ಗಂಡ ಸತ್ತಮೇಲೆ ಕೆಲದಿನಗಳ ನಂತರ ಚೀಂಕ್ರನ ಕೃಪೆಯಿಂದ ಮತ್ತೆ ನವವಧುವಾಗುವ ಆಶೆಯೂ ಒಮ್ಮೊಮ್ಮೆ ಅವಳಲ್ಲಿ ತಲೆದೋರುತ್ತಿತ್ತು. ಆಗ ಆಕೆಯ ಅಂತರಾಳದ ಧರ್ಮಪ್ರಜ್ಞೆ "ಚಿಃ ನೀನು ಎಂತಹ ಹಾದರಗಿತ್ತಿ ಆಗಿಹೋದೆ? ಗಂಡನ ಸಾವನ್ನು ಬಯಸಿ ಮಿಂಡನನ್ನು ಕೂಡಿಕೆಯಾಗುವ ಸಂಚುಮಾಡುತ್ತಿದ್ದೀಯಾ?' ಎಂದು ಮೂದಲಿಸಿದಂತಾಗುತ್ತಿತ್ತು.

ದೇವಯ್ಯಗೌಡ-ದೇವಮ್ಮರದು ಮತ್ತೊಂದು ದಾಂಪತ್ಯ. ಈ ಕಾದಂಬರಿಯ ಹಲವು ವ್ಯಕ್ತಿಗಳಂತೆ ದೇವಯ್ಯಗೌಡ 'ಸಡಿಲ ಕಚ್ಚೆ'ಯವನಾಗಿದ್ದ. ಈ ಬಗೆಗೆ ದೇವಮ್ಮ ಹೇಳುವ ಮಾತಿದು: "ಗಂಡಸರ ಹಣೆಯ ಬರಹವೇ ಹಾಗೆ. ನನ್ನ ಗಂಡ ಒಬ್ಬನನ್ನೇ ಬೇರೆಯ ರೀತಿಯಲ್ಲಿ ನಡೆ ಎಂದರೆ ನಡೆಯುತ್ತಾನೆಯೆ?.... ದೇವರೇ, ಅವರು ತಮ್ಮ ಸಂತೋಷಕ್ಕೆ ಏನನ್ನಾದರೂ ಮಾಡಲಿ ನನ್ನ ಮುತ್ತೈದೆತನ ಮಾತ್ರ ದೀರ್ಘಾಯುವಾಗುವಂತೆ ಕರುಣಿಸು".

ದೇವಯ್ಯಗೌಡ ಪಾದ್ರಿಯ ಮಗಳ ಮೋಹಕ್ಕೆ ಒಳಗಾಗಿದ್ದ ಆದುದರಿಂದ ಆತನು ಮತಾಂತರ ಮಾಡಲಿದ್ದಾನೆಂಬ ಸಮಾಚಾರವೂ ದೇವಯ್ಯನ ಕಿವಿಗೆ ಬಿದ್ದಿತು. "ತನ್ನ ಗಂಡನ ಇತರ ಎಲ್ಲ ಆಕ್ಷೇಪಣೀಯ ವರ್ತನೆಗಳನ್ನೂ ಆಗಿನ ಕಾಲದ ಅವಿಭಕ್ತ ಕುಟುಂಬದ ಹಿಂದೂ ಸ್ತ್ರೀಗೆ ಸಹಜವಾಗಿದ್ದ ಅನಿವಾರ್ಯ ಔದಾರ್ಯದಿಂದ ಕ್ಷಮಿಸಲು ಮಾತ್ರ ಸಹಿಸಲು ಸಿದ್ಧಳಾಗಿರಲಿಲ್ಲ..... ಅವಳಿಗೆ ಗಂಡನನ್ನು ಮತಾಂತರ ಹೊಂದುವುದಕ್ಕೆ ಬಿಡುವ ಮುನ್ನ ತಾನು ತನ್ನ ಶಿಶುವಿನೊಡನೆ ಮೃತ್ಯುವನ್ನಪ್ಪುವುದೇ ಶ್ರೇಯಸ್ಕರ, ಎಂದು ತೋರಿಸ್ತು." ದೇವಮ್ಮನ ಈ ಧೀರ ಸಂಕಲ್ಪ ಫಲಕಾರಿಯಾಯಿತು. ದೇವಯ್ಯಗೌಡ ಮತಾಂತರ ಹೊಂದುವುದು. ತಪ್ಪಿತು.

ದೇವಯ್ಯನ ಮತಾಂತರವನ್ನು ತಪ್ಪಿಸಲು ಸಾಹಸದಿಂದ ಮುಂದುವರಿದವ ಮುಕುಂದಯ್ಯ ಅವನು ಚಿನ್ನಮ್ಮನಲ್ಲಿ ಅನುರಕ್ತನಾಗಿದ್ದ. ಒಂದು ದೃಷ್ಟಿಯಿಂದ ಅವರಿಬ್ಬರದೂ ವಿವಾಹ ಪೂರ್ವ ಪ್ರಣಯವೆನ್ನಬಹುದು.

ದೇವಯ್ಯಗೌಡನ ಮತಾಂತರ ತಪ್ಪಿಸುವ ಸಾಹಸಕ್ಕೆ ಅಣಿಯಾಗಿ ಪ್ರಬಲ ಪಾದ್ರಿ ಸಂಘಟನೆಯನ್ನು ಎದುರಿಸಲು ಕೋವಿ ಹಿಡಿದು ಮುಕುಂದಯ್ಯ ಹೊರಟಿದ್ದಾನೆ. ಆಗ ಚಿನ್ನಮ್ಮ ಅವನನ್ನು ಸಂಧಿಸುತ್ತಾಳೆ "ತನ್ನ ಮಾಂಗಲ್ಯವನ್ನು ರಕ್ಷಿಸಿಕೊಳ್ಳುವ ಮಹತ್ಕಾರ್ಯಕ್ಕಾಗಿ ಧಾವಿಸಿ ಬಂದಿದ್ದಳು. ಆ ಮಲೆಯ ಕನ್ಯೆ. ಅವಳಿನ್ನೂ ಅವನನ್ನು ಶಾಸ್ತ್ರೋಕ್ತವಾಗಿ ಮದುವೆಯಾಗಿರಲಿಲ್ಲ. ತಾಳಿ ಕಟ್ಟಿಸಿಕೊಂಡಿರಲಿಲ್ಲ. ನಿಜ. ಆದರೆ ಉಳಿದೆಲ್ಲ ರೀತಿಯಿಂದಲೂ ಅವಳು ಅವನ ಹೆಂಡತಿಯಾಗಿಬಿಟ್ಟದ್ದಳು. ತನ್ನ ಕನ್ಯೆತನವೂ ಅವನಿಗೆ ಸಮರ್ಪಿತವಾಗಿ ಬಿಟ್ಟಿತ್ತು. ಅವನಿಗಾಗಿ ಮಲೆನಾಡಿನ ಮನೆತನದ ಹೆಣ್ಣು ಮಾಡಬಾರದ್ದನ್ನೆಲ್ಲ ಮಾಡಿದ್ದಳು. ಅವನನ್ನು ಬಿಟ್ಟು ತನ್ನಗಿನ್ನು ಇಹಜೀವನವಿರಲಿಲ್ಲ"

"ಅಕ್ರಮಾತಿಕ್ರಮದ ಪ್ರಣಯ ಪ್ರಪಂಚ"ದ ಮಲೆನಾಡಿನ ಅಂದಿನ ಜನಜೀವನದ ಚಿತ್ರಣ ಈ ಕಾದಂಬರಿಯಲ್ಲಿದೆ.

'ಕಾನೂರು ಹೆಗ್ಗಡಿತಿ'ಯ ಬಾಡುಗಳ್ಳ ಸೋಮನನ್ನು ಗಮನಿಸಬಹುದು. ಸೋಮಕಾನೂರು ಚಂದ್ರಯ್ಯಗೌಡರ ಒಕ್ಕಲು ಮಗ. ಗಟ್ಟದ ತಳಗಿಂದ ಬಂದು ಕಾನೂರಿನಲ್ಲಿ ನೆಲಸಿದ್ದನು.

ಸೋಮನಿಗೆ ಮಾಂಸವೆಂದ್ರೆ ಜೀವಕ್ಕಿಂತಲೂ ಹೆಚ್ಚು ಆಸೆ. ಅವನಿಗೆ ಜ್ವರಗಡ್ಡೆಯಿಂದ ಡೊಳ್ಳು ಬಂದಿತ್ತು. ಆದರೆ ಹಳ್ಳಿಯವರೆಲ್ಲ ಅವನು ತಿನ್ನುತ್ತಿದ್ದ ಮಾಂಸವೇ ಅದಕ್ಕೆ ಕಾರಣ ಎನ್ನುತ್ತಿದ್ದರು. ಸೋಮನಿಗೆ ಮಾಂಸದಲ್ಲಿದ್ದ ಅತ್ಯಾಸೆಯನ್ನು ಅಡಗಿಸಿಕೊಳ್ಳುವಷ್ಟು ಸಂಯಮವಿರಲಿಲ್ಲ.

ಹಂದಿಯ ಆಸೆಗಾಗಿ ಸೋಮನು ಕಿಲಿಸ್ತರ ಜಾತಿಯಿಂದ ಏಟು ತಿಂದರೂ ಅವನಿಗೆ ಮಾಂಸದ ಆಸೆ ತೀರಲಿಲ್ಲ. ಅವನ ದೃಷ್ಟಿ ಹಂದಿಯ ಮೇಲೆ ಇತ್ತು. ಏಟುತಿಂದ ಮಾರನೆಯ ದಿನ ಸೋಮ ಕೈನೋವಿನಿಂದ ಕೆಲಸಕ್ಕೆ ಹೋಗದೆ ಮನೆಯಲ್ಲೇ ಮಲಗಿದ್ದ. ಎಲ್ಲರೂ ಕೆಲಸಕ್ಕೆ ಹೊರಟುಹೋದಮೇಲ, ಸೋಮನ ಮೂಗಿಗೆ ಮಾಂಸದ ವಾಸನೆ ಹೊಡೆದು, ಬಾಯಲ್ಲಿ ನೀರೂರಿತ್ತು. ಮಡಕೆಯಲ್ಲಿದ್ದ ಹುರಿದ ಹಂದಿಯ ಮಾಂಸವನ್ನು ಯಥೇಚ್ಚವಾಗಿ ತಿಂದು, ಗಂಟಲಿನಲ್ಲಿ ಮಾಂಸದ ತುಂಡು ಸಿಕ್ಕಿಹಾಕಿಕೊಂಡಿತ್ತು. ಉಸಿರುಕಟ್ಟಿ ಒದ್ದಾಡುತ್ತಿದ್ದ ಸೋಮನನ್ನು ಆಕಸ್ಮಿಕವಾಗಿ ಅಲ್ಲಿಗೆ ಬಂದ ಫುಟ್ಟಣ್ಣ ಕಂಡು, ಅವನ ಕುತ್ತಿಗೆಯ ಮೇಲೆ ಏಟುಕೊಟ್ಟು ಪ್ರಾಣ ಉಳಿಸಿದ್ದನು. ತಿಂದ ಮಾಂಸವನ್ನು ವಾಂತಿಮಾಡಿಕೊಂಡ ಮೇಲೆ ಸೋಮ ಸಲೀಸಾಗಿ ಉಸಿರಾಡಿದ್ದ. ಆಮೇಲೆ ಅವನಿಗೆ ಅದು 'ದೆಯ್ಯದ ಹಂದಿ' ಎಂದು ಸಂಶಯ ಮೂಡುತ್ತದೆ.

ಒಂದು ದಿನ ಬೇಲರ ಭೈರ ತನ್ನ ಮಗ ಗಂಗನೊಡನೆ ಹೊಂಡ ತೋಣಕುತ್ತಿದ್ದಾಗ ಸೋಮ ಅಲ್ಲಿಗೆ ಬಂದನು. ಭೈರ ಹಿಡಿದಿದ್ದ ಒಂದು ಮೀನಿನ ಕಡೆಯೇ ಸೋಮನ ಕಣ್ಣು ನೆಟ್ಟಿತ್ತು. ಜ್ವರದಿಂದ ನಾಲಗೆ ಕೆಟ್ಟುಹೋಗಿದೆಯೆಂದು ಹೇಳಿ, ಮೀನನ್ನು ಕಸಿದುಕೊಳ್ಳಲು ಉಪಾಯ ಹೂಡಿದ್ದ. ಭೈರ ಕೊಡವೆ ಇರಲು ಏನೇನು ಹೇಳಿದರೂ ಸಾಧ್ಯವಾಗಲಿಲ್ಲ. ಭೈರನ ಹೆಸರು ಹೇಳಿಕೊಂಡು ತಿನ್ನುವುದಾಗಿ ಕಾಡಿ ಬೇಡಿ ಸೋಮ ಮೀನನ್ನು ಗಿಟ್ಟಿಸಿಯೇ ಬಿಟ್ಟ.

ಮಾಂಸದ ಜೊತೆಗೆ ಸೋಮನಿಗೆ ಹೆಂಡದ ಆಸೆಯೂ ಸೇರಿತ್ತು. ಕಳ್ಳಂಗಡಿಯಲ್ಲಿ ಸಾಲಮಾಡಿ ಕುಡಿಯುತ್ತಿದ್ದ. ಒಂದು ದಿನ ಕಳ್ಳಂಗಡಿಯವನು ಸಾಲ ವಸೂಲು ಮಾಡಲು ಸೋಮನ ಗುಡಿಸಲಿಗೇ ಹುಡುಕಿಕೊಂಡು ಬಂದನು. ವಿಷಯ ಮೊದಲೇ ತಿಳಿದ ಸೋಮ ಅವನು ಹೊರಟು ಹೋಗುವವರೆಗೆ ಅವಿತ್ತಿದ್ದು ಆಮೇಲೆ ಮೆಲ್ಲಗೆ ಒಳಗೆ ಬಂದ. ಕಳ್ಳಂಗಡಿಯವನೂ ಅವಿತ್ತಿದ್ದ ಸೋಮನ ಬರವನ್ನೇ ಕಾದು ಹಿಡಿದುಬಿಟ್ಟ. ಸೋಮ ಗೋಗರೆದು, ಇನ್ನೊಂದು ದಿನ ಅವಕಾಶ ಕೊಡಬೇಕೆಂದು ಬೇಡಿಕೊಂಡು ಬಿಡುಗಡೆಯಾದ. ಮಾರನೆಯ ದಿನ ಮುಂಜಾನೆ ಹಳೆಪೈಕದ ತಿಮ್ಮನ ಗುಡಿಸಲಿಗೆ ನುಗ್ಗಿ, ಕೋಳಿ ಹುಂಜವನ್ನು ಕದ್ದುತಂದು, ಕಳ್ಳಂಗಡಿಯವನಿಗೆ ಕೊಟ್ಟು ಸಾಲ ತೀರಿಸಿ, ಮತ್ತೆ ಕುಡಿದು ಸಾಲ ಮಾಡಿದ.

ಸೋಮನ ಬಾಡುಬಕ್ಕತನವನ್ನು ತಿಳಿಸುವ ಇನ್ನೊಂದು ಘಟನೆ ನಡೆಯಿತು. ಚಂದ್ರೇ ಗೌಡರಿಗೆ ಸುಬ್ಬಮ್ಮನ ದೆಸೆಯಿಂದಾದ ಮತಿಭ್ರಾಂತಿಯನ್ನು ಶಮನಮಾಡಲು ಭೂತರಾಯನಿಗೆ

ಶಾಂತಿಮಾಡಬೇಕೆಂದು ತೀರ್ಮಾನವಾಗಿತ್ತು. ಹೂವಯ್ಯನ 'ಬಲೀಂದ್ರ' ಹೋತವನ್ನು ತಂದು ಭೂತರಾಯನಿಗೆ ಬಲಿಕೊಡಬೇಕೆಂದೂ ತೀರ್ಮಾನವಾಯಿತು. ಹೋತವನ್ನು ಕದ್ದು ತರಬೇಕೆಂದು ಸೋಮನಿಗೆ ಹೇಳಿದಾಗ, ಅವನು ಮೊದಲು ನಿರಾಕರಿಸಿ, ಆಮೇಲೆ ಅದರಲ್ಲಿ ಪಾಲು ಇದೆಯೆಂದಾಗ ಮಾಂಸದ ಲೋಭದಿಂದ ಸಾಹಸಕ್ಕೂ ಒಪ್ಪಿಕೊಂಡ. ಕತ್ತಲೆಯಲ್ಲಿ ಕೆಳಕಾನೂರಿಗೆ ಹೋಗಿ, ಹೋತವನ್ನು ಕಟ್ಟಿದ್ದ ಗುಡಿಸಲಿಗೆ ಮೆಲ್ಲಗೆ ನುಸುಳಿ, ಹೋತದ ಹಗ್ಗವನ್ನು ಬಿಚ್ಚಿ ತನ್ನ ಡೊಳ್ಳು ಹೊಟ್ಟೆಗೆ ಕಟ್ಟಿಕೊಂಡ, ತಪ್ಪಿಸಿಕೊಂಡು ಹೋದೀತೆಂದು ಸ್ವಲ್ಪ ದೂರ ಬಂದ ಮೇಲೆ ನಾಯಿಗಳ ಬೊಗಳುವಿಕೆಗೆ ಬೆದರಿ ಹೋತ ಎಳೆಯಲು ಪ್ರಾರಂಭಿಸಿತು. ಸೋಮ ಹೋತವನ್ನು ಮುಂದಕ್ಕೆ ಎಳೆದರೆ ಅದು ಹಿಂದಕ್ಕೆ ಎಳೆಯುತ್ತಿತ್ತು. ಹೆದರಿಕೆಯಿಂದ ಹೋತ ಜೋರಾಗಿ ಎಳೆದಾಗ ಸೋಮ ತಳಕ್ಕೆ ಬಿದ್ದ. ಹೋತ ದರದರನೆ ಎಳೆದುಕೊಂಡು ತಿಪ್ಪೆಯ ಹತ್ತಿರಕ್ಕೆ ಬಂತು. ಸೋಮ ತಿಪ್ಪೆಯ ಒಳಕ್ಕೆ ಬಿದ್ದು, ಒಂದು ಗಿಡವನ್ನು ಬಲವಾಗಿ ಹಿಡಿದುಕೊಂಡ. ನಾಯಿಗಳ ಕಿರುಚಾಟವನ್ನು ಕೇಳಿ ಹೂವಯ್ಯ, ಪುಟ್ಟಣ್ಣ ಮೊದಲಾದವರು ಅಲ್ಲಿಗೆ ಬಂದು, ತಿಪ್ಪೆಯೊಳಗೆ ಬಿದ್ದಿದ್ದ ಸೋಮನನ್ನು ಎತ್ತಿತಂದು ಉಪಚರಿಸಿದರು. ಬಾಡಿನ ಆಸೆಯಿಂದ ಎಂಥ ಸಾಹಸಕ್ಕೂ ಕೈಹಾಕಲು ಹಿಂಜರಿಯುತ್ತಿರಲಿಲ್ಲ.

ಕೆಳಕಾನೂರಿನಲ್ಲಿ ಸೋಮ ನೆಲಸಿದ ಮೇಲೆ ಹೂವಯ್ಯ ಅವನ ಕೈಲಿ ಐವತ್ತು ರೂಪಾಯಿ ಕೊಟ್ಟು ಸೀತೆ ಮನೆಗೆ ಕೊಟ್ಟು ಬರುವಂತೆ ಕಳುಹಿಸುತ್ತಾರೆ. ಮಧ್ಯ ದಾರಿಯಲ್ಲಿ ಕೋಳಿ ಅಂಕ ಅವನ ಮನಸ್ಸನ್ನು ಸೆಳೆಯುತ್ತದೆ. ಮನಸ್ಸನ್ನು ಹತೋಟಿಯಲ್ಲಿಡಲು ಎಷ್ಟೇ ಪ್ರಯತ್ನ ಮಾಡಿದರೂ ಸಾಧ್ಯವಾಗದೆ, ಕೋಳಿಬಾಡಿನ ಆಸೆಯಿಂದಲೂ ಸೇರೆಗಾರರ ಮೇಲಿನ ಸೇಡಿನಿಂದಲೂ ಅಂಕಕ್ಕೆ ಇಳಿದು ಸೋಲುತ್ತಾನೆ. ಇದೇ ಸಮಯದಲ್ಲಿ ತಾನು ಹಿಂದೆ ತಿಮ್ಮನ ಕೋಳಿಯನ್ನು ಕದ್ದು ಕಳ್ಳಂಗಡಿಯವನಿಗೆ ಮಾರಿದ್ದ ವಿಷಯವೂ ಬಯಲಾದಾಗ ಜಗಳವೂ ಆಗಿ, ಅದರಲ್ಲಿ ಸೋಮ ತನ್ನ ಜೇಬಿನಲ್ಲಿದ್ದ ಉಳಿದ ಹಣವನ್ನೂ ಕಳೆದುಕೊಳ್ಳುತ್ತಾನೆ. ಕಾನೂರಿಗೆ ಬಂದು ಹೂವಯ್ಯನಿಗೆ ನಡೆದುದನ್ನೆಲ್ಲಾ ಹೇಳಿ ಅವನ ಕಾಲು ಹಿಡಿದುಬಿಡುತ್ತಾನೆ. ಸೋಮ ಮಾಂಸ, ಹೆಂಡ, ಕೋಳಿ ಅಂಕಗಳ ಪಕ್ಷಪಾತಿಯಾಗಿ, ಅವುಗಳಿಗಾಗಿ ಎಂಥೆಂಥ ಸಾಹಸಗಳಿಗೂ ಸಿದ್ಧನಾಗಿದ್ದ. ಆದರೆ ಮೋಸ, ವಂಚನೆಗಳನ್ನು ಅರಿಯದವನು ಅವನು. ಮುಂದೆ ಹೂವಯ್ಯನ ಸೇವೆಯಲ್ಲಿ ನಿರತನಾಗಿ, ಸೇರೆಗಾರ ರಂಗಪ್ಪಸೆಟ್ಟರು ಗಂಗೆಯ ಜೊತೆ ಗಟ್ಟದ ತಳಕ್ಕೆ ಪರಾರಿಯಾದ ಮೇಲೆ ಅವರ ಸ್ಥಾನವನ್ನು ಆಕ್ರಮಿಸಿ ಸೇರೆಗಾರ ಸೋನು ಸೆಟ್ಟರಾಗುತ್ತಾನೆ!

ಓಬಯ್ಯನ ಪಾತ್ರವೂ ಈ ದೃಷ್ಟಿಯಿಂದ ಮುಖ್ಯವಾದುದು. ಕೆಳಕಾನೂರು ಅಣ್ಣಯ್ಯ ಗೌಡರ ಒಬ್ಬನೇ ಮಗ ಓಬಯ್ಯ. ಅಣ್ಣಯ್ಯಗೌಡರು ಚಂದ್ರಯ್ಯಗೌಡರ ಗದ್ದೆ ತೋಟ ಮಾಡಿ

ಕೊಂಡಿದ್ದ ಒಕ್ಕಲು. ಒಂದರ ಮೇಲೊಂದು ಮೂರು ಮದುವೆ ಮಾಡಿಕೊಂಡು, ರೋಗಿಷ್ಟೆಯಾದ ಹೆಂಡತಿ, ಒಡಕಲಾದ ಮಗಳು, ಮತ್ತು ಕೇಳದ ಮಗ ಇವರಿಂದ ಮುದುಕನಾದ ಅಣ್ಣಯ್ಯಗೌಡರಿಗೆ ಸಂಸಾರ ಶೂಲಪ್ರಾಯವಾಗಿತ್ತು. ಓಬಯ್ಯನಿಗೆ ಮಲತಾಯಿಯ ಮೇಲೆ ಪ್ರೀತಿಯಿರಲಿಲ್ಲ. ತಂದೆ ಮತ್ತು ತಂಗಿಯರ ಮೇಲೂ ಅಷ್ಟೇ. ತಂದೆ ಚಂದ್ರಯ್ಯಗೌಡರಲ್ಲಿ ಸಾಲ ಮಾಡಿ, ಮತ್ತು ತಂಗಿಯರ ಮೇಲೂ ಅಷ್ಟೇ. ಈಗ ಚಂದ್ರೇಗೌಡರು ಯಾವುದಕ್ಕೂ ಸಾಲ ಕೊಡುವಂತಿರಲಿಲ್ಲ. ಓಬಯ್ಯ ತನ್ನ ಮಲತಾಯಿಯ ಆರೋಗ್ಯಕ್ಕಾಗಿ ಚಂದ್ರಮೌಳೇಶ್ವರನಿಗೆ ಹರಕೆ ತೆರಬೇಕೆಂದು ತಂಗಿಯ ಬೆಳ್ಳಿಯ ಕಡಗವನ್ನು ಕಸಿದುಕೊಂಡು ಹೊರಟ, ಅಗ್ರಹಾರದ ವೆಂಕಪ್ಪಯ್ಯನವರಿಂದ ಪೂಜೆ ಮಾಡಿಸುವುದಕ್ಕಾಗಿ.

ದಾರಿಯಲ್ಲಿ ಮಳೆಯಿಂದ ತಪ್ಪಿಸಿಕೊಳ್ಳಲು ಓಬಯ್ಯ ಗಂಗೆಯ ಗುಡಿಸಲಿಗೆ ಬರುತ್ತಾನೆ. ಹೆಣ್ಣಿನ ಅನುಭವವಿಲ್ಲದ ಓಬಯ್ಯನ ಅನಿರೀಕ್ಷಿತ ಆಗಮನ ಗಂಗೆಗೆ ಅಪ್ಯಾಯಮಾನವಾಗಿತ್ತು. ಸ್ವರ್ಗವೇ ಸಿಕ್ಕಂತಾಗಿತ್ತು. ಅವನನ್ನು ಒಲಿಸಿಕೊಳ್ಳಲು ಎಲ್ಲಿಲ್ಲದ ಉಪಚಾರ, ಉಪಾಯ ಮಾಡಿದಳು. ಮಳೆಯಲ್ಲಿ ಹೋಗುವುದು ಸಾಧ್ಯವಿಲ್ಲವೆಂದು ಹೇಳಿ, ತನ್ನ ಗುಡಿಸಲಿನಲ್ಲಿಯೇ ಮಲಗುವಂತೆ ಮಾಡಿ ಅವನಿಗೆ ಸುಖದ ಅನುಭವ ಮಾಡಿಕೊಟ್ಟಳು, ತಾನೂ ಸುಖಿಸಿದಳು. ಓಬಯ್ಯ ಮರುದಿನ ಹೊಸ ಅನುಭವದಿಂದ ಅಲ್ಲಿಂದ ಹೊರಟ. ತಂದೆ ಅಷ್ಟೆಲ್ಲ ಮುದುವೆಯಾದುದಕ್ಕೆ ಅರ್ಥ ಆ ದಿನ ಹೊಳೆಯಿತು.

ಓಬಯ್ಯ ಅಗ್ರಹಾರದ ಚಂದ್ರಮೌಳೇಶ್ವರನಿಗೆ ಕಾಣಿಕೆಯಾಗಿ ತೆಗೆದುಕೊಂಡು ಹೋದ ಒಡವೆಯನ್ನು ಕಳ್ಳಂಗಡಿಗೆ ಕೊಟ್ಟು ಚೆನ್ನಾಗಿ ಕುಡಿದುಬಿಟ್ಟ, ದೇವಸ್ಥಾನದ ಸನ್ನಿಧಿಯ ಮೀನುಗಳನ್ನು ಕದ್ದು ಹಿಡಿದು ಅವನ್ನೂ ಕಳ್ಳಂಗಡಿಯವನಿಗೆ ಕೊಟ್ಟು ಕುಡಿದು ನಾಲಗೆಯ ಚಪಲ ತೀರಿಸಿಕೊಂಡನು. ಅಂತು ಓಬಯ್ಯನಿಗೆ ಹೆಂಡ, ಹೆಣ್ಣು ಎರಡರ ರುಚಿಯೂ ಹಿಡಿದಿತ್ತು, ನೀತಿಅನೀತಿಗಳನ್ನು ಲೆಕ್ಕಿಸದೆ ಮೈಮರೆಯುವಷ್ಟರ ಮಟ್ಟಿಗೆ ಅವುಗಳಿಗೆ ಅವನು ದಾಸನಾಗಿದ್ದ.

ಓಬಯ್ಯ ಕಳ್ಳಿನ ಆಸೆಯಿಂದ ಸುಬ್ಬಮ್ಮನಿಗೆ ನೂರುರೂಪಾಯಿ ನೋಟನ್ನು ತೆಗೆದು ಕೊಂಡು ಬಂದು, ಕಳ್ಳಿಂಗಡಿಯಲ್ಲಿ ಕಳ್ಳುಕುಡಿದು ನೋಟನ್ನು ಕೊಟ್ಟಾಗ, ಮಾಲೀಕ ನೋಟು ತುಂಡಾಗಿರುವುದನ್ನು ಕಂಡು ಬೇರೆ ನೋಟನ್ನು ಕೇಳುತ್ತಾನೆ. ಆ ವಿಷಯಕ್ಕೆ ಅವರಿಬ್ಬರಿಗೂ ಜಗಳವಾಗಿ ಚಂದ್ರೇಗೌಡರಿಗೂ ಆ ಸುದ್ದಿ ತಿಳಿಯುತ್ತದೆ. ಚಂದ್ರೇಗೌಡರು ತುಂಡಾದ ನೋಟು ತಮ್ಮದೆಂದು ಗುರುತಿಸಿ, ಓಬಯ್ಯನಿಗೆ ಅದು ಹೇಗೆ ಬಂತೆಂದು ಬಾಯಿ ಬಿಡಿಸಲು ಚೆನ್ನಾಗಿ ಬಡಿಯುತ್ತಾರೆ. ನಾಗಮ್ಮನಿಂದ ಅದು ಇವನಿಗೆ ಬಂದಿರಬಹುದೆಂದೂ, ಹಾಗೆಂದು ಅವನು ಹೇಳಿದರೆ ತಕ್ಷಣ ನಾಗಮ್ಮ ಮತ್ತು ಹೂವಯ್ಯರಿಗೆ ಪಾಲುಕೊಟ್ಟು ಬೇರೆಹಾಕಬಹುದೆಂದೂ

ಆಲೋಚಿಸುತ್ತಾರೆ. ಓಬಯ್ಯ ಏಟು ತಡೆಯಲಾರದೆ ಕೊನೆಗೆ ಸತ್ಯವನ್ನೇ ಹೇಳುತ್ತಾನೆ. "ಅಮ್ಮ ಕೊಟ್ಟರು; ನಾ ಕದೀಲಿಲ್ಲ!" 'ಅಮ್ಮ' ಸುಬ್ಬಮ್ಮನೆಂದು ಗೊತ್ತಾದ ಮೇಲೆ ಚಂದ್ರೇ ಗೌಡರಿಗೆ ಆಕಾಶವೇ ಕಳಚಿಕೊಂಡಂತಾಗುತ್ತದೆ.

ಚಂದ್ರೇಗೌಡರಿಂದ ಏಟುತಿಂದ ಓಬಯ್ಯ ಅವರ ಮೇಲಿನ ಕೋಪದಿಂದ ಕಾನೂರನ್ನು ಬಿಟ್ಟು ಸೀತೆ ಮನೆಗೆ ಹೋಗಲು ತಂದೆಯನ್ನು ಒಪ್ಪಿಸುತ್ತಾನೆ. ಮನೆ ಬಿಡುವ ವಿಷಯ ತಿಳಿದು ಚಂದ್ರೇಗೌಡರು ತಮ್ಮ ಸಾಲಕ್ಕೆ ಅವರ ದನಕರುಗಳನ್ನು ಹಿಡಿದುಕೊಂಡು ಬರಿಗೈಯಲ್ಲಿ ಅವರನ್ನು ಮನೆಯಿಂದ ಓಡಿಸಿದರು. ಕಾನೂರನ್ನು ಬಿಟ್ಟು ಸೀತೆ ಮನೆಗೆ ಬಂದಮೇಲೆ ಓಬಯ್ಯ ತಂದೆ, ಮಲತಾಯಿಯರನ್ನು ಕಳೆದುಕೊಂಡು, ಅನೇಕ ಕಷ್ಟನಷ್ಟಗಳಿಗೆ ಒಳಗಾಗಿ ದೇಶಾಂತರವಾಗುತ್ತಾನೆ. ಕೊನೆಗೆ ವಿರೂಪನಾಗಿ ಮತ್ತೆ ಕೆಳಕಾನೂರಿಗೇ ಬರುತ್ತಾನೆ. ಆಮೇಲೆ ಕೆಳ ಕಾನೂರಿನಲ್ಲಿಯೇ ಸೇವೆಮಾಡುತ್ತಾ ಶಾಶ್ವತವಾಗಿ ನೆಲೆಸುತ್ತಾನೆ. ಓಬಯ್ಯನ ಪಾತ್ರ ಅರಿಯದ ಮುಗ್ಧನ ದುಡುಕು ಸ್ವಭಾವ, ದುಶ್ಚಟಗಳನ್ನು ಚಿತ್ರಿಸುತ್ತದೆ.

ಪ್ರಾಕೃತಿಕ ಸಮಾಜದ ಸ್ವಭಾವಗಳಿಗೆ ಅಪವಾದವಾಗಿ ಬರುವ ಗಂಗೆ, ಸೇರೆಗಾರ, ರಂಗಪ್ಪಶೆಟ್ಟರು (ಕಾನೂರು ಹೆಗ್ಗಡಿತಿ), ನಾಗತ್ತೆ, ಅಂತಕ್ಕ (ಮಲೆಗಳಲ್ಲಿ ಮದುಮಗಳು) ಮೊದಲಾದ ಪಾತ್ರಗಳೂ ಕೂಡ ತಮ್ಮ ಪರಿಸ್ಥಿತಿ, ಪರಿಸರಗಳ ಒತ್ತಡದಿಂದ ಆ ಸ್ವಭಾವಗಳನ್ನು ರೂಢಿಸಿಕೊಂಡವರು. ನಾಗರಿಕ ಪರಿಸರಣದ ಸಂಸರ್ಗ, ಒಂದು ಸಂಸ್ಕೃತಿ ಸಮಾಜದಲ್ಲಿ ಹುಟ್ಟಿ ಬೆಳೆದು ಅನ್ಯಸಂಸ್ಕೃತಿ ಸಮಾಜದಲ್ಲಿ ಬದುಕುವ ಪರಿಸ್ಥಿತಿ, ಅಲೆಮಾರಿತನ, ಅಸಹಾಯತೆಗಳು ಸಾಮಾನ್ಯವಾಗಿ ನೈತಿಕ ಅಧಃಪತನಕ್ಕೆ ಕಾರಣವಾಗುತ್ತವೆ.

ಒಟ್ಟಿನಲ್ಲಿ ಕುವೆಂಪು ಚಿತ್ರಿಸಿದ ಶ್ರೀಸಾಮಾನ್ಯರು ಸಾಮಾನ್ಯವಾಗಿ ನಿಷ್ಕಪಟಗಳು, ಸರಳ ಸ್ವಭಾವದವರು, ಉದಾರಿಗಳು, ಕಷ್ಟಸಹಿಷ್ಣುಗಳು, ಸೌಜನ್ಯಮೂರ್ತಿಗಳು, ನಿರ್ಮತ್ಸರಿಗಳು, ನಿಷ್ಠಾವಂತರು ಮತ್ತು ಮುಗ್ಧರು. ಸಾಮಾಜಿಕ ಸಾಹಿತ್ಯದಲ್ಲಿ ಬರುವ ಶ್ರೀಸಾಮಾನ್ಯರು ಬಹುವಾಗಿ ವ್ಯವಸಾಯವನ್ನು ಅವಲಂಬಿಸಿದ ಒಕ್ಕಲು ಮಕ್ಕಳು ಮತ್ತು ವ್ಯವಸಾಯಾವಲಂಬಿಗಳನ್ನು ಅವಲಂಬಿಸಿದವರು. ಇವರೆಲ್ಲ ಮಲೆನಾಡಿನ ಪ್ರಕೃತಿಯ ಪರಿಸರಣದವರು. ಆದ್ದರಿಂದಲೇ ಆ ಶ್ರೀಸಾಮಾನ್ಯರಲ್ಲಿ ಕೆಲವರು ಭಾವಜೀವಿಗಳು, ಕತೆಗಾರರು, ಸಂಪ್ರದಾಯಸ್ಥರು ಮತ್ತು ರಸಿಕರು ಒಟ್ಟಿನಲ್ಲಿ ಸಾತ್ವಿಕಗುಣ ಕೆವೆಂಪು ಚಿತ್ರಿಸಿದ ಎಲ್ಲಾ ಶೀಸಾಮಾನ್ಯ ಪಾತ್ರಗಳ ಒಳ ಪದರವಾಗಿದೆ.

'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು ಇವು ಕುವೆಂಪು ಅವರು ರಚಿಸಿರುವ ಬೃಹತ್ ಕಾದಂಬರಿಗಳು; ಈ ಶತಮಾನದ ಕನ್ನಡ ಕಾದಂಬರಿ ಪರಂಪರೆಯಲ್ಲಿ

ಅತ್ಯಂತ ಮಹತ್ವದ ಸ್ಥಾನ ಗಳಿಸಿರುವಂಥವು. ಈ ಕಾದಂಬರಿಗಳು ಭಾರತ ಹಾಗೂ ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಹಳತು ಮಾಸಿ ಹೊಸತು ಅರಳುವ ಸಂಧಿಕಾಲದ ಸಮಾಜವನ್ನು ಕುರಿತು ಚಿತ್ರಿಸಿವೆ. ಅದ್ದರಿಂದ ನಾವು ಇಲ್ಲಿ ಆಧುನಿಕ ವಿಚಾರಗಳಿಗೆ ಹೊರತಾದ ಸನಾತನ ಸಮಾಜವನ್ನು, ಹೊಸ ನಾಗರಿಕತೆ, ಹೊಸ ಸಾಮಾಜಿಕ ಮೌಲ್ಯಗಳು ಮತ್ತು ವಿಚಾರಗಳು ಪ್ರವೇಶಿಸಿ ನಡೆಸುವ ಸಂಘರ್ಷವನ್ನೂ, ಈ ಸಂಘರ್ಷಕ್ಕೆ ಹಳೆಯ ಮೌಲ್ಯಗಳನ್ನು ನಂಬಿ ನಡೆದವರು ತೋರಿಸುವ ಪ್ರತಿಕ್ರಿಯೆಯನ್ನೂ ಕಾಣಬಹುದು. ಇದರೊಂದಿಗೆ ಸಮೃದ್ಧವೂ, ರುದ್ರರಮಣೀಯವೂ ಆಗಿದ್ದ ಸಮಾಜದ ಜೀವನ ಕ್ರಮವನ್ನೇ ಮಾರ್ಪಡಿಸಬಲ್ಲದು ಆದ ನಿಸರ್ಗದೊಡನೆಯ ನಿಕಟಸಂಪರ್ಕದಿಂದ ಕೂಡಿದ ಜೀವನ ಚಿತ್ರಣವನ್ನೊಳಗೊಂಡ ಈ ಕಾದಂಬರಿಗಳು ನಿಜಕ್ಕೂ ಒಂದು ಪ್ರತ್ಯೇಕ ಪ್ರಪಂಚವನ್ನೇ ಹಿಡಿದಿರುತ್ತವೆ. ಪರಿವರ್ತನಾಯುಗಕ್ಕೆ ಸೇರಿದ್ದು, ಸಮಾಜದ ಸರ್ವಾಂಗಗಳನ್ನು ಚಿತ್ರಿಸುವ ಈ ಕಾದಂಬರಿಗಳಲ್ಲಿ ಮೂಡಿರುವ ಸಾಮಾಜಿಕ ಪ್ರಜ್ಞೆಯು ಲೇಖಕರ ಜೀವನಾನುಭವ ಮತ್ತು ವೈಚಾರಿಕ ದೃಷ್ಟಿಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ಪ್ರಕಟಣೆಯ ದೃಷ್ಟಿಯಿಂದ 'ಮಲೆಗಳಲ್ಲಿ ಮದುಮಗಳು' ಕೃತಿ, 'ಕಾನೂರು ಹೆಗ್ಗಡಿತಿಯ ತರುವಾಯ ಬಂದರೂ ಕಾದಂಬರಿಯ ಸಾಮಾಜಿಕ ಸನ್ನಿವೇಶದ ದೃಷ್ಟಿಯಿಂದ 'ಕಾನೂನು ಹೆಗ್ಗಡಿತಿ'ಗಿಂತ ಮೊದಲು ಬರುತ್ತದೆ. ಈ ಕಾರಣದಿಂದ ನಾವು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಮೊದಲಿಗೆ ಎತ್ತಿಕೊಳ್ಳುವುದು ಸೂಕ್ತವೆನಿಸುತ್ತದೆ. 'ಮಲೆಗಳಲ್ಲಿ ಮದುಮಗಳು' ಕೃತಿ ಮಲೆನಾಡಿನ ಅದರಲ್ಲೂ ತೀರ್ಥಹಳ್ಳಿ ತಾಲ್ಲೂಕಿನ 'ಮೇಗರವಳ್ಳಿ' ಸೀಮೆಯ ಜನಜೀವನದ ಚಿತ್ರಣವನ್ನು ಮುಖ್ಯವಾಗಿ ಕೊಡುತ್ತದೆ. ಒಟ್ಟಿನಲ್ಲಿ ಇದು ಮಲೆನಾಡಿನ ಸಾಮಾಜಿಕ ಹಿನ್ನಲೆ ಪಡೆದ ಕಾದಂಬರಿ. ಇನ್ನು ಕಾಲದ ದೃಷ್ಟಿಯಿಂದ ಗುರುತಿಸಲು ನಮಗೆ ಕಾದಂಬರಿಯಲ್ಲಿಯೇ ಸಾಕಷ್ಟು ಆಧಾರಗಳಿವೆ. ಕಾದಂಬರಿಯ ಪ್ರಾರಂಭದಲ್ಲೇ ಬರುವ "ಮೈಸೂರು ಸಂಸ್ಥಾನದ ಅಂಚಾಗಿ, ದುರ್ಗಮವಾದ ಪರ್ವತಾರಣ್ಯಗಳ ಬೀಡಾಗಿ ಆಗತಾನೆ ನಗರ, ಕೌಲೆ ದುರ್ಗ ಮೊದಲಾದ ಪಾಳೆಯಪಟ್ಟುಗಳ ಕಿರುಕುಳದಿಂದ ಪಾರಾಗಿದ್ದ ಮಲೆನಾಡಿಗೆ" (ಪು.೧೦) ಎಂಬ ಈ ವಿವರಣೆಯಿಂದ ಹಾಗೂ ಕಾದಂಬರಿಯ ಕೊನೆಯ ಭಾಗದಲ್ಲಿ ಬರುವ "ಕ್ರಿ.ಶ. ೧೮೯೩ರಲ್ಲಿ ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ ಸ್ವಾಮಿ ವಿವೇಕಾನಂದರು ಅಮೇರಿಕಾದ ಅನೇಕ ನಗರಗಳಲ್ಲಿ ಸಂಚರಿಸುತ್ತಿದ್ದು ಅವರು ತಮ್ಮ ಮಾತೃ ಭೂಮಿಯ ಒಂದು ಪರ್ವತಾರಣ್ಯ ಪ್ರದೇಶದ ಮೂಲೆಯಲ್ಲಿ ನಡೆಯುತ್ತಿದ್ದ ಕ್ರೈಸ್ತಮತ ಪ್ರಚಾರವನ್ನು ಕುರಿತು ಪ್ರಸ್ತಾಪಿಸುವ ಪ್ರಸಂಗದಿಂದ" (ಪು.೮೧೩) ಈ ಕಾದಂಬರಿ ಒಳ ಗೊಂಡಿರುವ ಸಾಮಾಜಿಕ ಸನ್ನಿವೇಶದ ಕಾಲ ಸುಮಾರು ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗ ಎಂದು ಗೊತ್ತಾಗುತ್ತದೆ.

ಕಾದಂಬರಿಯ ಎರಡನೆಯ ಅಧ್ಯಾಯದಲ್ಲಿ ಬರುವ ಲಕ್ಕುಂದದ ವಿವರಣೆ ಆ ಕಾಲದ ಸಾಮಾಜಿಕ ಪದ್ಧತಿಯನ್ನು ಚಿತ್ರಿಸುತ್ತದೆ. "ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ಧವೋ ಹಾಗೆಯೇ ಸ್ವಂತ ಜಮೀನು ಮಾಡುವುದು ಹಳೇಪೈಕದವರಿಗೆ ನಿಷಿದ್ಧ ಎಂದು ಒಕ್ಕಲಿಗರಾಗಿದ್ದ ಹೆಗ್ಗಡೆ, ಗೌಡ, ನಾಯಕರುಗಳೆಲ್ಲ ಸೇರಿ ತೀರ್ಮಾನ ಮಾಡಿದ್ದರು. ಅಷ್ಟೇ ಅಲ್ಲದೆ, ಮದುವೆ ಮೊದಲಾದ ಸಂಭ್ರಮಗಳಲ್ಲಿ ಹಳೆಪೈಕದವರು ಒಕ್ಕಲಿಗರನ್ನು ಯಾವ ವಿಧದಲ್ಲೂ ಅನುಕರಿಸ ಕೂಡದೆಂದು ಮಾಮೂಲು ಕಟ್ಟಾಗಿತ್ತು." ಆಗತಾನೆ ಇಂಗ್ಲಿಷರ ಕಾನೂನು ಕಾಯಿದೆಗಳು ಜಾರಿಗೆ ಬರಲು ತೊಡಗಿದ್ದ ಆ ಸಮಾಜದಲ್ಲಿ ಪಾಳೆಯಗಾರಿಕೆಯ ಮತ್ತು ಗೌಡಾಳಿಕೆಯ ಆ ಹಳೆಯ ವಾಸನೆ ಇನ್ನೂ ತೊಡಗಿ ಹೋಗಿರಲಿಲ್ಲ ಎಂಬುದು ಮನವರಿಕೆಯಾಗುತ್ತದೆ. ಇಲ್ಲಿ ಕಂಡುಬರುವ ಇನ್ನೊಂದು ವೈಶಿಷ್ಟ್ಯವೆಂದರೆ ಪ್ರತಿ ಜಾತಿಯ ಅಪ್ರಜ್ಞಾಪೂರ್ವಕವಾಗಿಯೇ ತನ್ನ ಹಿತಾಸಕ್ತಿಗಳನ್ನು ರಕ್ಷಿಸುವ ಪ್ರಯತ್ನದಲ್ಲಿರುವುದು.

ಗುತ್ತಿಯಂಥ. ಹಳ್ಳಿಗರಿಗೆ ಪೇಟೆಯಾಗಿದ್ದರೂ ನಿಜವಾಗಿಯೂ ಕೊಂಪೆಯಾಗಿದ್ದ "ಆಗಿನ ಮೇಗರವಳ್ಳಿಯಲ್ಲಿ ಆಸ್ಪತ್ರೆ, ಸ್ಕೂಲು, ಷಾಪು, ಹೋಟೆಲು, ಮಿಲ್ಲು ಯಾವುವೂ ಇರಲಿಲ್ಲ. ಆದರೆ ಮಲೆಯಾಳಿಯ ವೈದ್ಯರಾದ ಕಣ್ಣಾಪಂಡಿತರಿದ್ದರು. ಮಾಪಿಳ್ಳೆಯವರಾಗಿದ್ದ ಕರಿಮೀನು ಸಾಬರು ಅಂಗಡಿಯಿಟ್ಟಿದ್ದರು. ಒಂದು ಕಳ್ಳಿನಂಗಡಿಯೂ ಇದ್ದು ಆಟ, ಊಟ ಕೂಟಗಳಿಗೆ ಒಂದು ತೆರನಾದ ಕ್ಲಬ್ಬು ಆಗಿತ್ತು. ಸೆಟ್ಟಿಗಿತ್ತಿ ಅಂತಕ್ಕನ ಮನೆ ತಕ್ಕ ಮಟ್ಟಿಗೆ ಹೋಟೆಲ್ಲೂ ಆಗಿತ್ತು. ತೀರ್ಥಹಳ್ಳಿ ಆಗುಂಬೆಯ ಮುಖಾಂತರವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ಬರುತ್ತಿದ್ದ ವ್ಯಾಪಾರಿಗಳೂ, ಸೇರೆಗಾರರೂ, ಕೂಲಿಯಾಳುಗಳೂ ಗಂಧದ ಮರಗಳನ್ನು ಸಾಗಿಸುತ್ತಿದ್ದ ಗುಪ್ತ ದಳ್ಳಾಳಿಗಳೂ ಮುಂತಾದವರೂ ಆಗಾಗ ತಂಗುತ್ತಿದ್ದರಿಂದ ಆ ಸ್ಥಳಕ್ಕೊಂದು ಪ್ರಾಮುಖ್ಯತೆ ಬಂದಿತ್ತು." ಇದು ಆಗಿನ ಮೇಗರವಳ್ಳಿಯ ಸ್ಥಿತಿ ಮಾತ್ರವಾಗಿರದೆ ಆ ಕಾಲದಲ್ಲಿ ಮಲೆನಾಡಿನಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗುವ ಘಾಟಿ ಮಾರ್ಗಗಳ ಮಧ್ಯೆ ಬರುವ ಎಲ್ಲ ಪ್ರಮುಖ ಊರುಗಳ ಸ್ಥಿತಿಯೂ ಹೌದು. ಇಲ್ಲಿ ಬರುವ ಕೇರಳದ ಮಲೆಯಾಳಿ ವೈದ್ಯರು, ವ್ಯಾಪಾರ ಮಾಡುತ್ತಿದ್ದ ಕರಿಮೀನುಸಾಬರು, ಮತ್ತು ಸೆಟ್ಟಿಗಿತ್ತಿ, ಸೇರೆಗಾರರು ಮಲೆನಾಡಿನೊಡನೆ ಹೊರಪ್ರದೇಶಗಳ ಜನರು ಹೊಂದಿದ್ದ ಸಂಬಂಧವನ್ನು ಪ್ರತಿನಿಧಿಸುತ್ತಾರೆ, ಸಾಧಾರಣವಾಗಿ ತೆಳುವಾದ ಜನಸಂಖ್ಯೆ ಹೊಂದಿದ್ದ ಮಲೆನಾಡಿಗೆ ದಕ್ಷಿಣಕನ್ನಡ ಜಿಲ್ಲೆಯ ಕೂಲಿ ಆಳುಗಳು, ಮೇಸ್ತ್ರಿಗಳಾದ ಸೇರೆಗಾರರೂ ಬರುವುದು ಸಾಮಾನ್ಯ ಮಾಪಿಳ್ಳೆಗಳು ಅಂಗಡಿ ಇಟ್ಟು ವ್ಯಾಪಾರ ಮಾಡುವದಲ್ಲದೆ ತಲೆಮೇಲೆ ಮಾರುವ ಸಾಮಾನು, ಮಾಪಿಳ್ಳೆಗಳು ಅಂಗಡಿ ಇಟ್ಟು ವ್ಯಾಪಾರ ಮಾಡುತ್ತಾರೆ. ಇಂಥವರಿಗೆ ಯಾವಾಗಲೂ ಇಲ್ಲಿ ಅವಕಾಶವಿದೆ. ಲೇಖಕರು ಕಾದಂಬರಿಗೆ

ಒಂದು ಕಾಲದ ಸಾಮಾಜಿಕ ಪರಿಸರವನ್ನು ಸೃಷ್ಟಿಸಿಕೊಂಡು ಹೇಗೆ ತಮ್ಮ ಅನುಭವ ಮತ್ತು ಸೃಷ್ಟ್ಯಾತ್ಮಕ ಸಾಮರ್ಥ್ಯದಿಂದ ಆ ಕಾಲದ ಸಾಮಾಜಿಕ ಪ್ರಜ್ಞೆಯನ್ನು ಅಭಿವ್ಯಕ್ತಿಸುತ್ತಾರೆ ಎಂಬುದನ್ನು ಅವಲೋಕಿಸಬಹುದು.

ನಾಗತ್ತೆ ಮತ್ತು ನಾಗಣ್ಣನ ತಂದೆಯ ನಡುವೆ ನಡೆಯುವ 'ಸೀರುಡಿಕೆ' ಅಥವಾ ಕೂಡಾವಳಿ ಸಮಾಜದಲ್ಲಿ ವಿಧವಾ ವಿವಾಹದ ಬಗ್ಗೆ ಬೆಳಕು ಬೀರುತ್ತದೆ. ಹಾಗೆಯೇ ನಾಗಕ್ಕನನ್ನು ವೆಂಕಣ್ಣನೊಂದಿಗೆ ಸೀರುಡಿಗೆ ಮಾಡಿಸಲು ನಾಗತ್ತೆ ನಡೆಸಿದ ವಾಮಾಚಾರ ಮಾರ್ಗದ ಚಿತ್ರಣ ಲೇಖಕರಿಗೆ ಸಮಾಜದ ಕ್ಷುಲ್ಲಕ ವಿಷಯಗಳ ಬಗ್ಗೆ ಇರುವ ತಿಳಿವಳಿಕೆಯನ್ನು ಪ್ರಕಟಿಸುತ್ತದೆ.

ಹಿಂದೂಗಳ ವಿವಿಧ ವರ್ಗಗಳಲ್ಲಿ ಮನೆಮಾಡಿದ್ದ ದೆಯ್ಯ ಭೂತ, ಪಂಜರೊಳ್ಳಿಗಳು ಮುಸ್ಲಿಮರನ್ನೂ ಕಾಡದೆ ಬಿಟ್ಟಿರಲಿಲ್ಲ. "ಕರೀಂಸಾಬರಿಗೆ ಆ ಉಂಗುರ ಸೇರೆಗಾರನಿಂದ ದಕ್ಕಿದ್ದರೂ ಅದನ್ನು ದೆವ್ವದಿಂದ ದಕ್ಕಿಸಿಕೊಳ್ಳುವಷ್ಟು ಧೈರ್ಯವಿಲ್ಲ." ಇದು ಹಿಂದೂ ಸಮಾಜ ಗ್ರಾಮಾಂತರ ಪ್ರದೇಶಗಳಲ್ಲಿ ಹೇಗೆ ಸಕಲ ಧರ್ಮದವರನ್ನು ತನ್ನ ಪರಿಧಿಯೊಳಗೆ ಸೆಳೆದುಕೊಳ್ಳುತ್ತದೆ. ಎಂಬುದಕ್ಕೆ ಸಾಕ್ಷಿಯಾಗಿದೆ. ಇಂದೂ ಕೆಲವು ಮುಸ್ಲಿಮರು ದರ್ಶನಕೊಡುವ ದೇವರುಗಳ ಬಳಿಗೆ ಹೋಗಿ ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುವುದುಂಟು ಮಲೆನಾಡಿನಲ್ಲಿ ಅದರೂ ಹಿಂದೂ ಧರ್ಮದಲ್ಲೆ ಬಹಳ ದೌರ್ಬಲ್ಯವಿತ್ತು. ಆಗಿನ ಕಾಲದ ಹಿಂದೂಗಳ ಪವಿತ್ರಸ್ಥಳಗಳ ಗುರುಗಳು "ಅಜ್ಞರೂ ಮೌಢ್ಯಾಂಧರೂ ಆಗಿದ್ದ ಶೂದ್ರವರ್ಗದ ಸಾಮಾನ್ಯ ಜನರಿಂದ ಪಾದಪೂಜೆ ಮಾಡಿಸಿಕೊಳ್ಳುತ್ತಿದ್ದರು. ಅಡ್ಡಪಲ್ಲಕ್ಕಿ ಸೇವೆ ಸಲ್ಲಿಸಿಕೊಳ್ಳುತ್ತಿದ್ದರು; ದಾನ, ದಕ್ಷಿಣೆ, ಸಾಷ್ಟಾಂಗ ನಮಸ್ಕಾರಗಳನ್ನು ಸ್ವೀಕರಿಸುತ್ತಿದ್ದರು. ಆರ್ಶೀವಾದ ಮಾಡುತ್ತಿದ್ದರು. ತಮ್ಮ ತಮ್ಮ ಪಂಗಡಕ್ಕೆ ಸೇರಿದ ಬ್ರಾಹ್ಮಣೋತ್ತಮರಿಗೆ, ಭೂಸುರರಿಗೆ, ಸಮಾರಾಧನೆ ಮಾಡಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಬಹುಶಃ ಶಾಸ್ತ್ರಕ್ಕಾಗಿ ತಮ್ಮ ವರ್ಗಕ್ಕೆ ಸೇರಿದ ವಿದ್ವಾಂಸರನ್ನು ನೆರಪಿ ವಾಕ್ಯರ್ಥ ಏರ್ಪಡಿಸುತ್ತಿದ್ದರೂ ಇರಬಹುದು. ಶೂದ್ರರು ವೇದೋಪನಿಷತ್ತುಗಳನ್ನು ಓದುವುದಿರಲಿ ಕೇಳಿದರೂ ಅವರ ಕಿವಿಗೆ ಸೀಸ ಕರಗಿಸಿ ಹೊಯ್ಯುವ ನರಕ ಶಿಕ್ಷೆಯನ್ನು ವಿಧಿಸಿ ಅದಕ್ಕೆ ಮನುಧರ್ಮಶಾಸ್ತ್ರವೆಂದು ಹೆಸರಿಟ್ಟವರು. ಶೂದ್ರರು ವೇದೋಪನಿಷತ್ತುಗಳನ್ನು ಓದುವುದಿರಲಿ ಕೇಳಿದರೂ ಅವರ ಕಿವಿಗೆ ಸೀಸ ಕರಗಿಸಿ ಹೊಯ್ಯುವ ನರಕ ಶಿಕ್ಷೆಯನ್ನುವಿಧಿಸಿ ಅದಕ್ಕೆ ಮನುಧರ್ಮಶಾಸ್ತ್ರವೆಂದು ಹೆಸರಿಟ್ಟವರು. ಶೂದ್ರರಿಗೆ ವೇದಾಂತ ಬೋಧನೆ ಮಾಡುವ ಪಾಪಕ್ಕೆ ಏಕೆ ಪಕ್ಕಾಗುತ್ತಾರೆ?"

ಇಲ್ಲಿ ಲೇಖಕರು ಸಮಾಜದ ಸ್ಥಿತಿಗತಿಯ ಬಗ್ಗೆ ಪುರೋಹಿತಶಾಹಿಯ ಸೋಗು ಡಂಬಾಚಾರ ಕಪಟಗಳ ಬಗ್ಗೆ ಪ್ರಶ್ನಿಸಿದ್ದಾರೆ. ಈ ಕಾದಂಬರಿಯಲ್ಲಿ ಮತ್ತು 'ಕಾನೂರು ಹೆಗ್ಗಡಿತಿ'ಯಲ್ಲಿ ಬರುವ ಇಂಥ ಘಟನೆಗಳ ಬಗ್ಗೆ ಡಾ.ಯು.ಆರ್. ಅನಂತಮೂರ್ತಿ ಅವರು "ಬ್ರಾಹ್ಮಣ

ಧರ್ಮದ ಹೊರಗೆ ಹುಟ್ಟಿ ಪ್ರಕೃತಿಗೆ ಹತ್ತಿರವಾಗಿದ್ದು ಬೆಳೆದ ಇವರಲ್ಲಿ ಇವತ್ತಿಗೂ ನಮ್ಮ ಸಂಸ್ಕೃತಿಯ ಬಗ್ಗೆ ಕೋಪ ಹೊಗೆಯಾಡುವುದನ್ನು ಕಾಣಬಹುದು 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಇವರು ಚಿತ್ರಿಸಿರುವ ಕೆಲವು ಘಟನೆಗಳ ಹಿಂದಿರುವ ರುದ್ರನಿಷ್ಠುರ ಧೋರಣೆ ಇವರ ಬಗ್ಗೆ ನಮ್ಮಲ್ಲಿ ಅಪಾರ ಆಸಕ್ತಿಯನ್ನು ಹುಟ್ಟಿಸುತ್ತದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಆದರೆ ಕುವೆಂಪು ಅವರ ಕಾದಂಬರಿಗಳನ್ನು ಓದಿದಾಗ ಅವರ ಸಾಮಾಜಿಕಪ್ರಜ್ಞೆ ಸಂಕುಚಿತ ದೃಷ್ಟಿಯಿಂದ ಪುರೋಹಿತಶಾಹಿ ಒಂದನ್ನೇ ಟೀಕಿಸಲಾಗಲಿ, ಆ ವರ್ಗದ ದೋಷ ದೌರ್ಬಲ್ಯಗಳನ್ನು ತೋರಿಸಲಾಗಲಿ ಹೋಗಿಲ್ಲ. ಹಿಂದೂ ಸಮಾಜದ ವ್ಯವಸ್ಥೆಯ ದೌರ್ಬಲ್ಯದ ಬಗ್ಗೆಯೇ ಅವರಿಗೆ ಅಸಮಾಧಾನವಿದೆ ಮತ್ತು ಕಳಕಳಿಯಿದೆ. ಅವರು ಹಿಂದೂ ಸಮಾಜದಲ್ಲಿ ಯಾವುದೇ ಒಂದು ಜಾತಿ ಇನ್ನೊಂದು ಜಾತಿಯನ್ನು ಅಥವಾ ಒಂದು ವರ್ಗ ಇನ್ನೊಂದು ವರ್ಗವನ್ನು ಶೋಷಿಸಿದರೂ ಸಹಿಸರು. ತಮ್ಮ ಜೀತದಾಳನ್ನು ಚರಾಸ್ತಿಯಂತೆ ನೋಡಿಕೊಳ್ಳುವ ಕಲ್ಲೇಗೌಡರು ಹಳೆಪೈಕದವರನ್ನೂ ಗೌಡರು ನಡೆಸಿಕೊಳ್ಳುವ ರೀತಿ, ಇವೇ ಮೊದಲಾದ ಪ್ರಸಂಗಗಳಲ್ಲಿ ಕೆಳವರ್ಗದವರನ್ನು ಮೇಲುವರ್ಗದವರು ಕಾಣುವ ರೀತಿಯನ್ನು ಎತ್ತಿ ತೋರಿಸಿದ್ದಾರೆ. ದೋಣಿ ದಾಟುವಾಗ "ತಮ್ಮಯ್ಯಣ್ಣ ನೋಡುತ್ತಾನೆ. ಗೌಡರುಗಳು ಕುಳಿತಲ್ಲಿ ಕೊಡೆಗಳು ಸೂಡಿವೆ; ಅವನಿಗೆ ಗೊತ್ತಾಯ್ತು; ಕೊಡೆ ಸೂಡಿಕೊಂಡವರು ಗೌಡರುಗಳೆ ಎಂದು ಅದರೆ ಸನ್ನಿವೇಶ ಉಗ್ರವಾಗಿತ್ತು. ಗಟ್ಟಿಯಾಗಿ ಅಬ್ಬರಿಸಿ ಗದರಿಸಿದರು. "ಯಾರ್ರೋ ಅದು? ಕೊಡೆ ಸೂಡಿದೋರು? ಸಿಡಿಸ್ತಿರೋ ಇಲ್ಲೇ; ಕಾಣಾದಿಲ್ಲೇ ಗಾಳಿ ಬೀಸಾದು?" ಒಂದು ಕಾಲಕ್ಕೆ ಸಮಾಜದ ಉತ್ತಮ ವರ್ಗದವರನ್ನು ಬಿಟ್ಟು ಉಳಿದವರಾರೂ ಕೊಡೆ ಸೊಡುವುದಾಗಲಿ, ಚಪ್ಪಲಿ ಮೆಟ್ಟುವುದಾಗಲಿ ನಿಷಿದ್ಧವಾಗಿತ್ತು. ಕುವೆಂಪು ಅವರು ಹೀಗೆ ಎಲ್ಲ ವರ್ಗಗಳ ಡಂಬಾಚಾರಕ್ಕೂ ಕನ್ನಡಿ ಹಿಡಿದಿದ್ದಾರೆ. ಇಲ್ಲಿ ರಭಸದಿಂದ ಬೀಸುವ ಗಾಳಿಯನ್ನು ಮಲೆನಾಡಿಗೆ ತೂರಿಬರುತ್ತಿದ್ದ ಮಾನವ ಸಮಾನತೆಯ ತತ್ವವನ್ನೊಳಗೊಂಡ ಕ್ರೈಸ್ತಮತಕ್ಕೂ, ಆ ಕೊಡೆ ಸೊಡಿದ ಮೇಲುವರ್ಗದವರಿಂದ ಹಿಂದೂ ಸಮಾಜಕ್ಕೆ ಒದಗಬಹುದಾದ ಹಾನಿಯನ್ನೂ ವಿಡಂಬನಾತ್ಮಕವಾಗಿ ಸೂಚಿಸುವಂತಿದೆ.

* * * * *

ಅಧ್ಯಾಯ: ೪

ಜಮೀನ್ದಾರಿ ಪದ್ಧತಿ (ಭೂ ಒಡೆತನ)

ಕಾನೂರು ಹೆಗ್ಗಡತಿ ಅವರಣದಲ್ಲಿ ಕಾನೂರು ಚಂದ್ರಯ್ಯಗೌಡರು, ಮುತ್ತಳ್ಳಿ ರಾಮಯ್ಯಗೌಡ, ಕುಟುಂಬ ಹಾಗೂ ಸೀತೆಮನೆ ಸಿಂಗಪ್ಪಗೌಡರ ಕುಟುಂಬ, ಈ ಮೂರು ಕುಟುಂಬಗಳು ಜಮೀನ್ದಾರಿ ಕುಟುಂಬಗಳಾಗಿವೆ. ಪ್ಯೂಡಲ್ ವ್ಯವಸ್ಥೆಯ ಒಂದು ತುದಿಯಲ್ಲಿ ಈ ಮೂರು ಕುಟುಂಬಗಳಿದ್ದರೆ. ಅದರ ಇನ್ನೊಂದು ತುದಿಯಲ್ಲಿ ಈ ಕುಟುಂಬದ ಜೀತದಾಳುಗಳಿದ್ದಾರೆ.

ಈ ಜೀತದಾಳುಗಳು ಬೇರೆ ಬೇರೆ ಜಾತಿಗಳಿಂದ ಬಂದವರಾಗಿದ್ದು ಅವುಗಳ ಶ್ರೇಣಿಗಳಿಗೆ ಜೀವನಮಟ್ಟ ಅನುಭವಿಸುತ್ತಾರೆ. ವ್ಯವಸಾಯ, ಬೇಟೆ, ಮುಖ್ಯವಾಗಿ ಈ ಎರಡೂ ಚಟುವಟಿಕೆಗಳಲ್ಲಿ ಅವರೆಲ್ಲಾ ತಮ್ಮ ವರ್ಗ ಮತ್ತು ವರ್ಣ ಸ್ಥಿತಿಗೆ ಅನುಗುಣವಾಗಿ ತೊಡಗಿಸಿಕೊಳ್ಳುತ್ತಾರೆ. ಇವರ ಮಧ್ಯೆ ಸೇರೆಗಾರರಿದ್ದು ಕಳ್ಳಂಗಡಿಯ ಯಜಮಾನರಂತೆ ವ್ಯಕ್ತಿಗಳಿದ್ದು ಕಾನೂರು-ಮುತ್ತಳ್ಳಿ ಸೀತೆಮನೆ ಜೀವನದ ಅವಿಭಾಜ್ಯ ಅಂಗಗಳಾಗಿದ್ದಾರೆ.

ಜಮೀನ್ದಾರಿ ವರ್ಗದಲ್ಲಿ ಎಲ್ಲರ ಮಟ್ಟ ಒಂದೇ ತೆರನಾಗಿಗೂ ಆ ಚೌಕಟ್ಟಿನಲ್ಲಿ ಅಣ್ಣಯ್ಯಗೌಡರದು ಸೋಲಿನ ಕಥೆಯಾದರೆ ಸುಬ್ಬಮ್ಮನದು ಗೆಲುವಿನ ಕಥೆ ಓಬಯ್ಯ ಮತ್ತು ಅಣ್ಣಯ್ಯಗೌಡರು ಕೆಳಕಾನೂರನ್ನು ರಾತ್ರೋ ರಾತ್ರಿ ತೊರೆದು ಸೀತೆಮನೆ ಸಿಂಗಪ್ಪಗೌಡರಲ್ಲಿ ಒಕ್ಕಲಾಗಿ ಹೋಗುವ ನಿರ್ಧಾರ ಮಾಡುವುದು ಒಂದು ಬಗೆಯ ಸಾಹಸ ಇಲ್ಲಿ ಕಾಣಸಿಗುವುದು ಒಬ್ಬ ಜಮೀನ್ದಾರನನ್ನು ತೊರೆದು ಮತ್ತೊಬ್ಬ ಜಮೀನ್ದಾರನಲ್ಲಿಗೆ ಹೆಚ್ಚಿನ ದೈನ್ಯದಿಂದ ಹೋಗುತ್ತಿದ್ದಾರೆ. ಇವರಿಬ್ಬರು ಜಿಮೀನ್ದಾರರ ಸ್ವರ್ಧೆಗೆ ನೆಪವೂ ಆಗಿದ್ದಾರೆ. ಏಕೆಂದರೆ ಚಂದ್ರಯ್ಯಗೌಡರ ಒಕ್ಕಲನ್ನು ಹಾರಿಸಿಕೊಂಡು ಹೋಗುವಲ್ಲಿ ಸಿಂಗಪ್ಪಗೌಡರ ಸಾಹಸವೂ ಅಷ್ಟೇ ಮುಖ್ಯವೆನಿಸಿಕೊಳ್ಳುತ್ತೇದೆ.

ಕುವೆಂಪು ಸುಬ್ಬಮ್ಮ ಹೂವಯ್ಯರನ್ನು ಒಳಗೊಂಡಂತೆ ಜಮೀನ್ದಾರಿ ಮೌಲ್ಯವ್ಯವಸ್ಥೆಯ ಅಂತರಂಗವನ್ನು ಓದುಗರ ಮುಂದೆ ತೆರೆದಿಡುತ್ತಾರೆ. ಸುಬ್ಬಮ್ಮ ಹೂವಯ್ಯ ಕೂಡಾ ಚಂದ್ರಯ್ಯಗೌಡ ಅಣ್ಣಯ್ಯಗೌಡ ಓಬಯ್ಯ ಸಿಂಗಪ್ಪಗೌಡರ ಹಾಗೆ ಪ್ಯೂಡಲ್ ವ್ಯವಸ್ಥೆಯ ವಿವಿಧ ಅಂತರಂಗದಲ್ಲಿದ್ದಾರೆ. ಕಾದಂಬರಿ ಸೃಷ್ಟಿಸುವ ಜಮೀನ್ದಾರಿ ವರ್ಗದ ಆಂತರಿಕ ಜಗತ್ತಿನಲ್ಲಿ ಚಲನೆ ವ್ಯಕ್ತಿ ವಿಶಿಷ್ಟ ಸ್ವರೂಪವನ್ನು ಪಡೆದು ಕೊಳ್ಳುತ್ತದೆ.

ಪ್ಯೂಡೆಲ್ ವ್ಯವಸ್ಥೆಯ ಉನ್ನತ ಶ್ರೇಣಿಯಲ್ಲಿರುವ ಜಮೀನ್ದಾರಿ ವರ್ಗದ ಒಳಜಗತ್ತು. ಅದರ ಹಲವು ಬಣ್ಣಗಳಲ್ಲಿ ವಿರೋಧ ಭಾಸಗಳಲ್ಲಿ ಒಳಶ್ರೇಣಿಗಳಲ್ಲಿ ದಾಖಲಾಗುತ್ತದೆ ಹೂವಯ್ಯನ

ಆದರ್ಶ ಕೂಡಾ ವಿರೋಧಿಯಾಗಿಲ್ಲ ಅಂದರೆ ಭೂಮಾಲಿಕ ವರ್ಗದ ಹಿತಾಶಕ್ತಿಗಳು ಹೂವಯ್ಯನ ಆದರ್ಶ ಜನಗತ್ತಿನಲ್ಲಿ ಪ್ರಶ್ನೆಗೆ ಒಳಗಾಗುವುದಿಲ್ಲ. ಹೂವಯ್ಯನ ಆದರ್ಶಗಳು ಅವನ ಆರ್ಥಿಕ ಆಸಕ್ತಿಗಳಿಗೆ ಮಾರಕವಾಗಿಲ್ಲ. ಅವನೊಬ್ಬ ಜಮೀನ್ದಾರ.

ಕಾನೂರಿನ ಆಸ್ತಿ ಹಿಸ್ಸೆಯಾಗುವ ಸಂದರ್ಭದಲ್ಲಿ ಹೂವಯ್ಯ ಪಿತ್ರಾರ್ಜಿತ-ಸ್ವಯಾರ್ಜಿತ ಎಂದು ಚಂದ್ರಯ್ಯಗೌಡರ ಕ್ಯಾತೆ ತೆಗೆದಾಗ ಪ್ರತಿಭಟಿಸುತ್ತಾನೆ. ಸ್ವಯಾರ್ಜಿತ-ಪಿತ್ರಾರ್ಜಿತ ಎಂದು ಆಸ್ತಿಯನ್ನು ವಿಭಾಗ ಮಾಡುವುದು ನ್ಯಾಯವಲ್ಲ ಒಂದು ಮನೆಗೆ ಯಜಮಾನ ನಾದವನು ಏನು ಸಂಪಾದನೆ ಮಾಡಿದರೂ ಅವು ಮನೆಯ ಸಂಪತ್ತಿಗೆ ಸೇರುತ್ತವೆ. ಯಜಮಾನನು ಮೈವಟ್ಟು ನಡೆಸುವಾಗ ಏನಾದರು ನಷ್ಟ ಸಂಭವಿಸಿದರೆ ಆ ನಷ್ಟವನ್ನು ತನ್ನೊಬ್ಬನ ಮೈಮೇಲೆಯೇ ಹಾಕಿಕೊಳ್ಳುತ್ತಾನೆಯೇ ಮನೆಯ ಲೆಕ್ಕಕೆ ಖರ್ಚು ಹಾಕುವುದಿಲ್ಲವೇನು? ನಷ್ಟದಂತೆಯೇ ಲಾಭವು ಮನೆಯ ಲೆಕ್ಕಕ್ಕೆ ಖರ್ಚು ಹಾಕುವುದಿಲ್ಲವೇನು? ನಷ್ಟದಂತೆಯೇ ಲಾಭವು ಮನೆಯ ಆಸ್ತಿಗೆ ಸೇರತ್ತಕ್ಕದ್ದು ಪಿತ್ರಾರ್ಜಿತವಾದ ಆಸ್ತಿಯ ಆಧಾರ ಬೆಂಬಲ ಧನ, ಗೌರವ, ವಿರಾಮ ಇವುಗಳೆಲ್ಲಾ ಇಲ್ಲದಿದ್ದರೆ ಯಜಮಾನನು ಹೊಸ ಆಸ್ತಿಗಳನ್ನು ಸಂಪಾದಿಸಲು ಸಾಧ್ಯವಾಗುತ್ತಿತ್ತೇ? ಆದ್ದರಿಂದ ಸಂಪಾದಿಸಿದ ಹೊಸ ಆಸ್ತಿಗಳೆಲ್ಲವೂ ಪಿತ್ರಾರ್ಜಿತ ಆಸ್ತಿ ಎಂಬ ಮೂಲಧನದ ಮೇಲೆ ಬಂದ ಬಡ್ಡಿಯಂತೆಯೇ ಹೊರಟ ಮತ್ತೆ ಬೇರೆನಲ್ಲ. ಆದ್ದರಿಂದ ಚಿಕ್ಕಯ್ಯ ಹೇಳಿದಂತೆ ಪಿತ್ರಾರ್ಜಿತ ಸ್ವಯಾರ್ಜಿತ ಎಂದು ಆಸ್ತಿಯನ್ನು ವಿಭಾಗಿಸುವುದಕ್ಕೆ ನಾನೂಪ್ಪುವುದಿಲ್ಲ. ಎಂದು ವಾದಿಸಿದನು ಈ ವಾದವನ್ನು ಕೇಳಿ ಚಂದ್ರಯ್ಯಗೌಡರಾದಿಯಾಗಿ ಎಲ್ಲರೂ ಸ್ಥಬ್ದರಾದರು.

(ಕಾನೂರು ಹೆಗ್ಗಡತಿ-ಪುಟ-೩೩೩-೩೩೪)

ಅಂದರೆ ಹೂವಯ್ಯ ನೊಂದುಕೊಳ್ಳುವುದು ಸಿಟ್ಟಾಗುವುದು ತನ್ನ ಚಿಕ್ಕಪ್ಪನ ವೈಯಕ್ತಿಕ ಸಣ್ಣತನ ಮತ್ತು ಒರಟುತನಗಳಿಂದ ಕಾನೂರು ಹೆಗ್ಗಡತಿಯಲ್ಲಿ ಭೂ ಮಾಲೀಕರ ಮತ್ತು ಕೆಳವರ್ಗದವರ ನಡುವಿನ ಘರ್ಷಣೆ ಕಾದಂಬರಿಯುದ್ದಕ್ಕೂ ಕಂಡುಬರುತ್ತದೆ. ಜಮೀನುದಾರರ ವರ್ಗದ ವಿವಿಧ ರೀತಿಯ ಹಿಂಸೆಗಳೇ ಇಲ್ಲಿಯ ಮುಖ್ಯ ಘಟನೆಗಳಿಗೆ ಕಾರಣ. ಎಲ್ಲಕ್ಕಿಂತ ಹೆಚ್ಚಾಗಿ ಇಲ್ಲಿ ಲುಂಗೀಸಾಬಿ, ಇಜಾರದಸಾಬಿ, ಅಜ್ಜೀಸಾಬು, ಮುಂತಾದವರ ಭೂ-ಮಾಲಿಕವರ್ಗದ ಗೂಂಡಾ ಪಡೆಯೂ ಇದೆ. ಇವರ ವಿರುದ್ಧ ಜೀತದವರ ಒಕ್ಕಲುಗಳ ಕೆಳಜಾತಿಯವರ ಉಗ್ರಪ್ರತಿಭಟನೆಯೂ ಇದೆ. ಗುತ್ತಿಯೂ ಸಾಬಿಯೊಬ್ಬನ ಮೇಲೆ ಹಲ್ಲೆ ಮಾಡಿ ಪೋಲಿಸರಿಂದ ತಪ್ಪಿಸಿಕೊಂಡ ಘಟನೆ ಇದಕ್ಕೆ ಸಾಕ್ಷಿ.

ಒಕ್ಕಲಿಗರು ಅಥವಾ ಗೌಡರು ಭೂ ಮಾಲೀಕರು ತಮ್ಮನ್ನೂ ಬಿಟ್ಟು ಬೇರೆಯವರು ಭೂ ಮಾಲೀಕರಾಗಕೂಡದೆಂದು ಇವರ ತಗಾದೆ. ಒಕ್ಕಲಿಗರ ವಿರುದ್ಧವಾಗಿ ಭೂ ಸಾಗುವಳಿ ಮಾಡ

ಹೊರಟ ಹಳೇಪೇಕದ ಸೇಸನಾಯ್ಕರ ಮೇಲೆ ಅವರಿಗೆ ದ್ವೇಷ, ಬ್ರಾಹ್ಮಣರನ್ನು ಬಿಟ್ಟರೆ ಇವರೆ ಮೇಲು ಜಾತಿಯವರು ಬಿಲ್ಲವರು, ಹಸಲೇರರು, ಕುಂಬಾರರು, ಹಳೆಪೈಕದವರು ಇತ್ಯಾದಿ ಘಟ್ಟದ ಕೆಳಗಿನವರು ಹಾಗೂ ಎಲ್ಲಾ ಅಸ್ಪೃಶ್ಯರು ಇವರ ಹೊಲ ಗದ್ದೆಗಳಲ್ಲಿ ದುಡಿಯುವ ಶ್ರಮಜೀವಿಗಳು.

ಒಕ್ಕಲಿಗರು, ಬ್ರಾಹ್ಮಣರನ್ನು ಬಿಟ್ಟರೆ, ಇತರ ಕೆಳಜಾತಿಯವರನ್ನು ತಮ್ಮ ಮನೆಗಳಿಗೆ ಸೇರಿಸುತ್ತಿರಲಿಲ್ಲ. ಮುಸ್ಲಿಮರು ಕ್ರಿಶ್ಚಿಯನ್ನರನ್ನು ಕೂಡ ಸೇರಿಸುತ್ತಿರಲಿಲ್ಲ.

ಬ್ರಾಹ್ಮಣರು ಬೌದ್ಧಿಕವಾಗಿ ಸಮಾಜದ ಎಲ್ಲಾ ವರ್ಗಗಳ ಮೇಲೆ ಹಿಡಿತವನ್ನಿಟ್ಟುಕೊಂಡಿದ್ದರೆ. ಗೌಡರು ಆರ್ಥಿಕವಾಗಿ ಹೆಚ್ಚಾಗಿ ಹಿಡಿತವನ್ನಿಟ್ಟುಕೊಂಡಿದ್ದಾರೆ. ಕೂಲಿಯಾಳುಗಳು ಜೀತದಾಳುಗಳು ಇವರ ಇಚ್ಚೆಗೆ ವಿರುದ್ಧವಾಗಿ ನಡೆದರೆ ಮುಸ್ಲಿಮರನ್ನು ಬಳಸಿಕೊಂಡು, ಹೊನ್ನಾಳಿ ಹೊಡೆತದ ಮೂಲಕ ತಾವು ಹೇಳಿದ ಹಾಗೆ ಕೇಳುವಂತೆ ಮಾಡಿಕೊಳ್ಳುತ್ತಿದ್ದರು. ಇಷ್ಟೇ ಅಲ್ಲದೆ ದಲಿತರ "ಬದುಕು–ಬಾಳು ಆಗು–ಹೋಗು, ಜನನ–ಮರಣ ಮದುವೆ– ಹಬ್ಬ ಸಾಲ–ಸೂಲ ಎಲ್ಲಕ್ಕೂ ಬ್ರಹ್ಮವಿಷ್ಣು ಮಹೇಶ್ವರರಾಗಿದ್ದರು. ಹೆಗ್ಗಡೆಯವರು, ಗೌಡರು ಆಸ್ತಿಯನ್ನು ಭಾಗಮಾಡಿಕೊಳ್ಳುವಂತೆ ದಲಿತರನ್ನೂ ಭಾಗ ಮಾಡಿಕೊಳ್ಳುತ್ತಿದ್ದರು. ಬ್ರಾಹ್ಮಣ ಬೌದ್ಧಿಕ ಶೋಷಣೆಯ ಒಂದು ಮುಖವಾದರೆ ಗೌಡರು ಆರ್ಥಿಕ ಶೋಷಣೆಯ ಇನ್ನೊಂದು ಮುಖ.

ಕಲ್ಲೂರು ಸಾಹುಕಾರ ಮಂಜಭಟ್ಟರು ಹೊನ್ನಳ್ಳಿ ಹೊಡೆತದ ಪ್ರ–ಪಿತಾಮಹರೆಂದು ಸ್ಪಷ್ಟಪಡಿಸಿ(ಪು–೨೨೯) ಎಲ್ಲಾ ಸಾಮಾಜಿಕ ಕೆಡಕುಗಳಿಗೂ ಬ್ರಾಹ್ಮಣರೇ ಕಾರಣರೆಂದು ರುಜುವಾತುಪಡಿಸುತಾರೆ. ಕಾದಂಬರಿಯಲ್ಲಿ ನಿರ್ಗತಿಕ ಹೊಲೆಯರನ್ನು ಚರ್ಮ ಸುಲಿಯುವಂತೆ ಹೊಡೆಸುವವರು ಬೆಟ್ಟಳ್ಳಿ ಕಲ್ಲಯ್ಯಗೌಡರು (ಪು.೨೩೦) ಪೂರ್ಣ ಫಲವನ್ನು ಜಮೀನುದಾರರೇ ಪಡೆಯುವುದರಿಂದ ಅವರ ಸ್ವಾರ್ಥವನ್ನು ರಾಕ್ಷಸತನವನ್ನೂ ಬಯಲುಮಾಡಿದ್ದಾರೆ. ಕಲ್ಲಯ್ಯಗೌಡರ ಹೃದಯ ವಿಶ್ಲೇಷಣೆ (ಪು.೩೨೭) ಮಾಡುವ ಕಲಾವಿದರು ಮಂಜಭಟ್ಟರಿಗೆ ಹೃದಯ ಇಲ್ಲವೆಂದು ಸೂಚಿಸುತ್ತಾರೆ. ಮಂಜಭಟ್ಟರೊಬ್ಬ ಧನಪಿಶಾಚಿ ಹೃದಯ ಹೀನಪಶು ಎಂಬುದು ಅರಿವಾಗುತ್ತದೆ. ಕಾನೂರು ಹೆಗ್ಗಡತಿಯ ವೆಂಕಪ್ಪಯ್ಯ ಜೋಯಿಸರು ಮತ್ತು ಮಂಜಭಟ್ಟರು ಹಾಗು ಅವರಂತವರು ಉಗುರು ಮಣ್ಣು ಮಾಡಿಕೊಳ್ಳುವಂತೆ ಜನಸಾಮನ್ಯರ ಅಜ್ಞಾನವನ್ನು ತಮ್ಮ ಲೋಕಪ್ರಜ್ಞೆ ಇರುವ ಈ ಭಟ್ಟರು ಮತ್ತು ಜೋಯಿಸ್ಸರು ಅವಿದ್ಯಾವಂತ ಶೂದ್ರರಿಗೆ ಸರಿಯಾದ ಮಾರ್ಗದರ್ಶನ ಮಾಡದೆ ಮೂಡಾಚಾರ ಹೆಚ್ಚಿಸುತ್ತಿದ್ದಾರೆಂದು ಕುವೆಂಪು ಅವರಿಗೆ ಕೋಪವಿದೆ. ಇದು ಹೂವಯ್ಯನ ಪಾತ್ರದ ಮುಖೇನ ಪ್ರತಿಭಟನೆಯಾಗಿ ತೋರುತ್ತದೆ.

ಉತ್ತಮ ಗ್ರಂಥಗಳ ವ್ಯಾಸಂಗದಿಂದ ಪ್ರಭಾವಿತನಾದ ಯುವಕ ಮುಕುಂದಯ್ಯ ನವ ಜೀವನಪದ್ಧತಿಗೆ ಪ್ರತಿನಿಧಿಯಾಗುತ್ತಾನೆ. ಸಮಾನತೆಗೆ ಶೋಷಣೆ ರಹಿತ ಸಮಾಜಕ್ಕೆ ಸಂಕೇತವಾಗುತ್ತಾನೆ. ಊಳಿಗಮಾನ್ಯ ಪದ್ದತಿ ಸಡಿಲಗೊಳ್ಳುವ ಚಿಹ್ನೆಗಳು ಕಾಣಿಸಿಕೊಳ್ಳುತ್ತವೆ.

ಜೀತಪದ್ಧತಿ

ಶೋಷಣೆಯ ಮತ್ತೊಂದು ಮೂಲ 'ಜೀತಪದ್ಧತಿ' ಎರಡೂ ಕಾದಂಬರಿಗಳಲ್ಲಿ ಜೀತದಾಳುಗಳ ಸಾಮಾಜಿಕ ಶ್ರೇಣಿಯ ವ್ಯವಸ್ಥೆ ಮೈದೋರುತ್ತದೆ. ಒಂದು ರೀತಿಯಲ್ಲಿ ಜೀತದಾಳುಗಳು ಕೂಡ ರೈತರೇ ಲಿಂಗಭೇದ ಮತ್ತು ಲೈಂಗಿಕ ಶೋಷಣೆಗಳು ಇವು ಒಟ್ಟೊಟ್ಟಿಗೆ ಸೇರಿಕೊಂಡು ಬಿಟ್ಟರೆ ದಮನಕ್ಕೆ ಸಿಕ್ಕವರ ಬಾಳು ಇನ್ನಷ್ಟು ಅಸನೀಯವಾಗುತ್ತದೆ. ಈ ದಾರುಣ ಸತ್ಯಕ್ಕೆ ಮಲೆಗಳಲ್ಲಿ ಮದುಮಗಳು ಸಾಕ್ಷಿ ಜೀತಪದ್ಧತಿಯ ಒಂದು ವಿರಾಟ್ ದರ್ಶನವನ್ನು ಈ ಕಾದಂಬರಿ ನೀಡುತ್ತದೆ. ಒಮ್ಮೆ ಜೀತಗಾರನಾಗಿ ಅಥವಾ ಜೀತಗಾರಳಾಗಿ ಓರ್ವ ವ್ಯಕ್ತಿ ಈ ಜಾಲಕ್ಕೆ ಸಿಕ್ಕಿಬಿಟ್ಟರೆ ಕೇವಲ ಸಾವು ಆ ವ್ಯಕ್ತಿಯನ್ನು ಆ ವ್ಯವಸ್ಥೆಯಿಂದ ಮುಕ್ತಗೊಳಿಸಬಹುದಷ್ಟೆ.

ದೊಡ್ಡಬೀರನಿಗೆ ತನ್ನ ಮಗಳನ್ನು ತನಗೆ ಇಚ್ಛೆ ಬಂದ ವರನೊಂದಿಗೆ ಮದುವೆ ಮಾಡಿಕೊಡುವ ಸ್ವಾತಂತ್ರ್ಯವಿಲ್ಲ ಏಕೆಂದರೆ.

ಗೌಡರ ಜೀತದಾಳಾಗಿ ಅವರಲ್ಲಿ ಸಾಲಮಾಡಿ ಅವರಿಗೆ ತನ್ನನ್ನು ಸಂಪೂರ್ಣವಾಗಿ ಮಾರಿಕೊಂಡಿದ್ದ ದೊಡ್ಡಬೀರ ಆ ವಿಚಾರದಲ್ಲಿ ನಿರುಪಾಯನಾಗಿ ಒಡೆಯರ ಆಜ್ಞೆಗೆ ತಲೆಬಾಗಿದ್ದನು. ಒಡೆಯರಿಗೆ ಬೇಕಾಗಿದ್ದುದು ಜೀತ ಮಾಡಲು ಒಂದು ಆಳು ತಮ್ಮ ಹೊಲೆಗೇರಿಯ ಒಂದು ಹೆಣ್ಣನ್ನು ಹೊರಗೆ ಕೊಟ್ಟರೆ ತಮ್ಮ ಕೆಲಸಕ್ಕೆ ಒಂದಾಳು ಖೋತಾ ಬೀಳುತ್ತದೆ. ಆದ್ದರಿಂದ ಕೇರಿಯ ಹೆಣ್ಣನ್ನು ಕೇರಿಯ ಗಂಡೇ ಮದುವೆಯಾಗಬೇಕು. ಎಂಬುದು ಅವರ ಕಟ್ಟಪ್ಪಣೆ ಬೇರೆ ಕೇರಿಯವನಿಂದ ತಾಳಿ ಕಟ್ಟಿಸಿ ಕೊಂಡಿದ್ದರೂ ಸರಿ ಅವಳನ್ನು ಎಳೆದು ತರಿಸಿ ತಾಳಿ ಕೀಳಿಸಿ ತಮ್ಮ ಕೇರಿಯವನಿಗೆ ಮದುವೆ ಮಾಡಿಸುತ್ತಿದ್ದ ರೆಂಬುದರಲ್ಲಿ ಸಂದೇಹವಿರಲಿಲ್ಲ. ಅಪ್ಪಿ-ತಪ್ಪಿ ಒಡೆಯರ ಇಚ್ಚೆಗೆ ವಿರೋಧವಾಗಿ ನಡೆದವರಿಗೆ ಹಿಂದೆ ಅಂತಹ ಗತಿಯೇ ಒದಗಿತ್ತು. ಕೀಳು ಜಾತಿಯವರಿಗೆ ಅವರ ಇಚ್ಛಾನುಸಾರ. ಒಲವು ಅಕ್ಕರೆ ಇರುವುದೆಂದರೇನು? ಒಲವು ಅಕ್ಕರೆ ಏನಿದ್ದರೂ ಎಲ್ಲಾ ಒಡೆಯರ ಲಾಭದ ವಲಯದೊಳಗಿದ್ದು ಅವರ ಇಚ್ಛಾಧಿನವಾಗಿರಬೇಕು ಅವರ ಅಜ್ಞೆಯ ಗೆರೆ ದಾಟುವಂತಿರಲಿಲ್ಲ. (ಮಲೆಗಳಲ್ಲಿ ಮದುಮಗಳು ಪುಟ-೧೭೦)

ಜೀತದಾಳು ಸಮಸ್ಯೆಯಲ್ಲಿ ಮತ್ತೊಂದು ಸಂದರ್ಭ ಇಲ್ಲಿ ಮುಖ್ಯವಾಗುತ್ತದೆ. ತಿಮ್ಮ ಗುತ್ತಿಯೊಂದಿಗೆ ಓಡಿಹೋದ ನಂತರ ತಮ್ಮ ಗದ್ದೆಯಲ್ಲಿ ದುಡಿಯುವ ಒಂದು ಜೀತದಾಳು

ಕಡಿಮೆಯಾದದ್ದಕ್ಕಾಗಿ ಕಲ್ಲೇಗೌಡರಿಗೆ ಬರಬಾರದ ಸಿಟ್ಟು ಬಂದು ಸಣ್ಣಬೀರನನ್ನು ಮರಕ್ಕೆ ಬಿಗಿಸಿ ಇಜಾರದ ಸಾಬಿಯಿಂದ ಹೊನ್ನಾಳಿ ಹೊಡೆತ ಕೊಡಿಸಿದರು. ಅದಕ್ಕೆ ಪ್ರತಿಯಾಗಿ ಸಣ್ಣಬೀರ ಕಲ್ಲೇಗೌಡರ ಮೇಲೆ ಸಿಟ್ಟು ಮಾಡಿಕೊಳ್ಳದೆ ಆ ವ್ಯವಸ್ಥೆಯ ಕೈಗೊಂಬೆಯಾಗಿ ವರ್ತಿಸುವ ಇಜಾರದ ಸಾಬಿಯ ಮೇಲೆ ಕೋಪ ಬಂದದ್ದು ಅವನಲ್ಲಿ ಪ್ರತೀಕಾರದ ಹೊಗೆಯಾಡುತ್ತದೆ. ದೊಡ್ಡಬೀರ ಸಣ್ಣಬೀರರ ಮಧ್ಯೆ ಈ ರೀತಿ ಸಂಭಾಷಣೆ ನಡೆಯುತ್ತದೆ.

"ಸಣ್ಣಬೀರ" ಆದುಣ್ಣ ಮುಂಡೆಗಂಡ ಇಜಾರದ ಸಾಬಿ ಅವನನ್ನು ಯಾರಾದರೂ ಕಡಿದು ಹಾಕಿದ್ರೆ ಒಂದು ಹಂಡೇ ಹಾಲು ಕುಡೀತಿದ್ದೆ."

ದೊಡ್ಡಬೀರ ಎಲ್ಲಿಂದ ತರ್ತೀಯೋ ಅಷ್ಟೊಂದು ಹಾಲ್ನ? ನಿನ್ನ ಹೆಂಡ್ತಿ ಹಡದ್ರೆ ಬಾಲೆಗೆ ಹಾಲುಕುಡಿಸಾಕೆ ಒಂದು ಒಳಾಲೆ ಹಾಲಿಗೆ ಗತಿಯಲ್ಲ ಎಂದು ನಗೆಯಾಡಿದ. ಸಣ್ಣಬೀರ ನೀ ತಮಾಷೆ ಮಾಡಬ್ಯಾಡ ಅಪ್ಪ ಆ ಮೂಕಿಮನೆ ಈರಣ್ಣನ ಕಡಿದು ರಕ್ತ ಕುಡಿದರಂತೆಲ್ಲಾ ಹಂಗೆ ಅವನ ರಕ್ತ ಕುಡಿದಿದ್ರೆ ನಾನು ಅಪ್ಪನಿಗೆ ಹುಟ್ಟಿದಾವ ಅಲ್ಲ ನೋಡ್ತಿರು ನನ್ನ ಬಿನ್ನಿನ ಬಾಸುಂಡೆ ಇನ್ನೂ ಮಾದಿಲ್ಲ ಏನೋ ನಮ್ಮ ಧಣಿ ಉಪ್ಪು ಅನ್ನಹಾಕಿ ಸಾಕ್ದೋರು ಇದ್ರಲ್ಲಾ ಅಂತ ಅವೊತ್ತು ಸುಮ್ಮನಿದ್ದೆ ಇನ್ನೊಂದು ಸಲ ನನಗೆ ಸಿಕ್ಲಿ ಸಮಯ ನೋಡ್ತೀನಿ ನನ್ನ ಕೈಲಿ ಏನಾಗುತ್ತದೆ ಅಂತ! ಬಗನೆ ಕತ್ತಿನ ಮಸೆದು ಇಟ್ಟುಕೊಂಡ್ಲಾಗೆ ಇಟ್ಟುಕೊಂದೇನಿ ನನ್ನ ಕೆಲಸದ ಕತ್ತೀನ ಒಂದೇ ಕೊಚ್ಚಿಗೆ ಅವನ ಆನೆ ಗಾತ್ರದ ಕುತ್ತಿಗೆ ಕತ್ತರಿಸಿ ಬೀಳಬೇಕು ಹಾಗೆ ಹೊಡಿತೀನಿ. ಎನ್ನುತಾನೆ.

ಕಲ್ಲೇಗೌಡರು ತಮ್ಮ ಸಂಬಂಧವಾಗಿ ಸಣ್ಣಬೀರನನ್ನು ಕಟ್ಟಿ ಹೊಡೆಸುವ ಪ್ರಸಂಗ ಹಲವಾರು ದೃಷ್ಟಿಗಳಿಂದ ಮಹತ್ತರ ಎನಿಸುತ್ತದೆ. ಭೂ ಮಾಲೀಕನೊಬ್ಬ ಜೀತದಾಳಿನ ಮೇಲೆ ನಡೆಸುವ ಹಲ್ಲೆ ಅಮಾನುಷವಾದುದು ಇಚಾರಸಾಬಿಯ ಹೊಡೆತಕ್ಕೆ ಸಣ್ಣಬೀರ ವಿಲಿ–ವಿಲಿ ಒದ್ದಾದುತ್ತಿದ್ದ ದೊಡ್ಡಬೀರ ಕಲ್ಲೇಗೌಡರ ಮುಂದೆ ಅಡ್ಡಬಿದ್ದು ಮಗನನ್ನು ಉಳಿಸಿಕೊಡಿ ಎಂದು ಬೇಡುತ್ತಿದ್ದ ದೊಡ್ಡಬೀರ ಕಲ್ಲೇಗೌಡರ ಮುಂದೆ ಅಡ್ಡಬಿದ್ದು ಮಗನನ್ನು ಉಳಿಸಿಕೊಡಿ ಎಂದು ಬೇಡುತ್ತಿದ್ದ ದೊಡ್ಡಬೀರನ ದೇನ್ಯವೇ ಆಗಲಿ ಕಲ್ಲೇಗೌಡರನ್ನೂ ಸ್ವಲ್ಪವೂ ಕದಲಿಸಲಿಲ್ಲ ಅವರು ಕಲ್ಲಾಗಿ ಕುಳಿತುಬಿಟ್ಟರು.

ಬ್ರಾಹ್ಮಣ ದಬ್ಬಾಳಿಕೆಯನ್ನು ವಿರೋಧಿಸುವ ದೇವಯ್ಯ ಆ ಬಡ್ಡಿ ಮಕ್ಕಳಿಗೆ ಬೆನ್ನು ಮುರಿಯಾ ಹಾಗೆ ಒಂದೆರಡು ಬೀಳಲಿ ಎನ್ನುತ್ತಿದ್ದ, ಹಟ್ಟಿಯಿಂದ ಓಡಿಬಂದ ಸೇಸಿ ಸಾಬಿ ಕೈಯಲ್ಲಿದ್ದ ಹುಣಸೆ ಬರಲನ್ನೂ ಕಿತ್ತು ಬಿಸಾಡಿದಳು. ಇಂತಹ ರೌದ್ರ ಭಯಾನಕ ಪ್ರಸಂಗಗಳಲ್ಲಿ ಕುವೆಂಪು ಅವರ ಸೇಸಿಯ ತಾಯ್ತನದ ಭವ್ಯತೆಯನ್ನು ಹೊಗಳುವುದು ಅನುಚಿತ ಎನಿಸುತ್ತದೆ. ಈ

ಸಂದರ್ಭದಲ್ಲಿ ಜೀತದಾಳೊಬ್ಬನ ಮೇಲೆ ನಡೆಸಿದ ಹಲ್ಲೆಯನ್ನೂ ಕುವೆಂಪು ಪ್ರತಿಭಟಿಸದೆ ಇರುವುದು ಸೋಜಿಗದ ಸಂಗತಿ.

ಜೀತ ಊಳಿಗಮಾನ್ಯ ಪದ್ಧತಿಯ ಒಂದು ಮುಖವಾದರೆ ಲೈಂಗಿಕ ಶೋಷಣೆ ಅವರ ಇನ್ನೊಂದು ಮುಖ, ಹಣವಂತರು ಭೂಮಾಲೀಕರು ಕೇವಲ ಹೊಟ್ಟೆಪಾಡಿಗಾಗಿ ಹೊಲಗದ್ದೆಗಳಲ್ಲಿ ದುಡಿಯುವ ದಲಿತ ಹೆಣ್ಣು ಮಕ್ಕಳನ್ನೂ ತಮ್ಮ ತೀಟೆ ತೀರಿಸಿಕೊಳ್ಳಲು ಪತಾವಳಿಯಂತೆ ಬಳಸಿಕೊಳ್ಳುತ್ತಾರೆ. ಇಲ್ಲಿ ಜೀತದಾಳು ನಿಸ್ಸಾಹಯಕತೆಯನ್ನು ಮತ್ತು ದಣಿಗಳ ನಿರ್ಧಯತೆಯನ್ನು ಕಾಣಬಹುದಾಗಿದೆ.

ತನ್ನ ಮಗಳು ತಿಮ್ಮಿಯನ್ನು ನಾಯಿಗುತ್ತಿಗೇ ಕೊಡಬೇಕೆಂದು ತೀವ್ರಾತೆಯ ಸೇಸಿ ಜೀತದಾಳಾಗಿ ಆಸ್ವತಂತ್ರಗಳಾದರೂ ಮನುಷ್ಯ ಜೀವಿಯಾಗಿ ಸ್ವಾತಂತ್ರ್ಯಚ್ಚೆಯುಳ್ಳವಳು ಎಂಬುದನ್ನು ಕುವೆಂಪು ವಾಸ್ತವ ಪರಿಸರ ಮಾನವ ಮನಸ್ಪಂದನಗಳ ನಿಜ ಅರಿವಿನಿಂದ ಚಿತ್ರಿಸುತ್ತಾರೆ. ಒಡೆಯರ ಆಸ್ತಿಯಾಗಿದ್ದ ಅವರನ್ನು ಯಾರಿಗೆ ಕೊಡಬೇಕು? ಎಲ್ಲಿಗೆ ಕೊಡಬೇಕು? ಎಂಬುದನ್ನು ತಾಯಿ-ತಂದೆಗಳು ನಿರ್ಧರಿಸಲು ಸಾಧ್ಯವೇ? ತಮ್ಮ ಜಾನುವಾರುಗಳನ್ನೂ ಬಿಕರಿ ಮಾಡುವ ಹಕ್ಕು ಎಂತೋ ಅಂತೆ ಬೇಲರು, ಹೊಲೆಯರು, ಮಾದಿಗರು ಮೊದಲಾದ ತಮ್ಮ ಹೆಣ್ಣು-ಗಂಡು ಜೀತದಾಳುಗಳನ್ನು ಇಡುವ ಕೊಡುವ ಬಿಡುವ ಹಕ್ಕು ಅವರದ್ದೆ ತಾನೆ? ವಸ್ತುತಃ ಹಾಗಿದ್ದರೂ ಸೇಸಿ ಎಷ್ಟಾದರೂ ಮನುಷ್ಯ ವರ್ಗಕ್ಕೆ ಸೇರಿದವಳಲ್ಲವೆ? ಅವಳೇನು ದನ ಅಲ್ಲವಲ್ಲ ಮಾನವವರ್ಗಕ್ಕೆ ಸಹಜವಾದ ಸ್ವಾತಂತ್ರ್ಯ ಇಚ್ಚೆ ಆಸೆ ಅಪೇಕ್ಷೆಗಳು ಕೈಗೂಡಲಿ ಬಿಡಲಿ ಪ್ರಯತ್ನ ಮಾಡುವುದರಿಂದ ತಪ್ಪಿಸಿಕೊಳ್ಳಲಾದೀತೆ? ಅದರಿಂದ ಎಂತಹ ಹಾನಿಯೆ ಒದಗಲು ಸರ್ವನಾಶವೇ ಬೇಕಾದರೂ ಆಗಲಿ ಮಾನವತ್ವವನ್ನು ತಲುಪಿದ ಚೇತನ ಕಲ್ಲು-ಮಣ್ಣುಗಳಂತೆ ತಟಸ್ಥವಾಗಿ ಬಿದ್ದಿರಲು ಸಾಧ್ಯವಿಲ್ಲ (ಮಲೆಗಳಲ್ಲಿ ಮದುಮಗಳು ಪು-೩೩೪)

"ಗುತ್ತಿಗೆ ಗೊತ್ತಿತ್ತು, ಅತ್ತೆಗೆ ತನ್ನ ಮಗಳನ್ನು ಬಚ್ಚನಿಗೆ ಕೊಡುವುದಕ್ಕೆ ಸ್ವಲ್ಪವೂ ಮನಸ್ಸಿರಲಿಲ್ಲ ಎಂದು ಅಲ್ಲದೇ ತಿಮ್ಮಿಯನ್ನು ತನಗೆ ಕೊಡುವುದಕ್ಕೆ ಮನಸ್ಸಿದ್ದುದನ್ನೂ ನಾನಾ ರೀತಿಗಳಿಂದ ವ್ಯಕ್ತ ಪಡಿಸಿಯೂ ಇದ್ದಳು. ತಾನೂ ತಿಮ್ಮಿಗಾಗಿ ತಂದುಕೊಟ್ಟ ಸಣ್ಣ ಪುಟ್ಟ ಕಾಣಿಕೆಗಳನ್ನು ಹಮ್ಮೆ ಯಿಂದ ಸ್ವೀಕರಿಸಿದ್ದಳು ಆದರೆ ಗೌಡರ ಜೀತದಾಳಾಗಿ, ಅವರು ಸಾಲಮಾಡಿ ಅವರಿಗೆ ತನ್ನನ್ನು ಸಂಪೂರ್ಣವಾಗಿ ಮಾರಿಕೊಂಡಿದ್ದ ದೊಡ್ಡ ಬೀರ ಆವಿಚಾರದ ನಿರೂಪಯವಾಗಿ ಒಡೆಯರ ಆಜ್ಞೆಗೆ ತಲೆಬಾಗಿದ್ದಾನು".

ಒಡೆಯರಿಗೆ ಬೇಕಾಗಿದ್ದುದು ಜೀತ ಮಾಡಲು ಒಂದು ಆಳು ತಮ್ಮ ಹೊಲಗೇರಿಯ ಒಂದು ಹೆಣ್ಣನ್ನು ಹೊರೆಗೆ ಕೊಟ್ಟರೆ ತಮ್ಮ ಕೆಲಸಕ್ಕೆ ಒಂದಾಳು ಖೋತ ಬೀಳುತ್ತದೆ. ಆದ್ದರಿಂದ

ಕೇರಿಯ ಹೆಣ್ಣನ್ನು ಕೇರಿಯ ಗಂಡೇ ಮದುವೆಯಾಗಬೇಕು ಎಂಬುದು ಅವರ ಕಟ್ಟಪ್ಪಣೆ ಬೇರೆ ರೀತಿಯಾಗಿದೆ ವರ್ತಿಸಿದರೆ ಆ ಹೆಣ್ಣು ಇನ್ನೊಬ್ಬ ಬೇರೆ ಹಳ್ಳಿಯ ಕೇರಿಯವನಿಂದ ತಾಳಿ ಕಟ್ಟಿಸಿ ಕೊಂಡಿದ್ದರೂ ಸರಿ, ಅವಳನ್ನು ಎಳೆದು ತರಿಸಿ, ತಾಳಿ ಕೀಳಸಿ, ತಮ್ಮ ಕೇರಿಯವನಿಗೆ ಮದುವೆ ಮಾಡಿಸುತ್ತಿದ್ದರೆಂಬುದರಲ್ಲಿ ಸಂದೇಹವಿರಲಿಲ್ಲ. ಅಷ್ಟೇ ತಪ್ಪಿ ಒಡೆಯರ ಇಚ್ಚೆಗೆ ವಿರೋಧವಾಗಿ ನಡೆದವರಿಗೆ ಹಿಂದೆ ಅಂತಹ ಗತಿಯೇ ಒಂದಾಗಿತ್ತು. ಕೀಳುಜಾತಿಯವರಿಗೆ ಅವರ ಇಚ್ಚಾನುಸಾರ ಒಲವು ಅಕ್ಕರೆ ಇರುವುದೆಂದರೇನು? ಒಲವು ಅಕ್ಕರೆ ಏನಿದ್ದರೂ ಎಲ್ಲ ಒಡೆಯರ ಲಾಭದ ವಲಯದೊಳಗಿದ್ದು, ಅವರ ಇಚ್ಚಾಧೀನವಾಗಿರಬೇಕು. ಅವರ ಗಡಿ ದಾಟುವಂತಿರಲಿಲ್ಲ.

ಇಲ್ಲಿ ಸೇಸಿಯ ನಿರ್ಧಾರ, ಅಚಲವಾದುದು, ಜೀತಮಾಡುವವರಿಗೆ ಹಟ ಆಸ್ತಿ, ಅಂತಸ್ತೂ, ಏನೂ ಇಲ್ಲದೆ ಇರುವಾಗ ಜೀತ ಮಾಡುವವರಿಗೆ ಬೆಟ್ಟಳ್ಳಿಯ ಹೊಲಗೇರಿಯಲ್ಲಿದ್ದರೇನು? ಸಿಂಭಾವಿಯ ಹೊಲಗೇರಿಯಲ್ಲಿದ್ದರೇನು? ಎಂಬ ಪ್ರಶ್ನೆ ಸೇಸಿಯದು ಯಾಕೆಂದರೆ ಅವಳು ತನ್ನ ಮಗಳ ಭವಿಷ್ಯವೇ ಮುಖ್ಯ ಎಂದು ತಿಳಿಯುತ್ತಾಳೆಯೇ ಹೊರತು, ಬೆಟ್ಟಳ್ಳಿಯ ಗೌಡರು ಹೊಡಿಸಿ ಬಿಡಿಸಿದರೆ ಅಲ್ಲಿಯ ಜಾಗವನ್ನೇ ಬಿಟ್ಟು ಎಲ್ಲರೂ ಇಲ್ಲಿಗೆ ಬಂದು ಬಿಡುವ ಎಂಬ ತೀರ್ಮಾನಕ್ಕೆ ಬರುತ್ತಾಳೆ. ಅವಳ ಆಯ್ಕೆ ಸಹಜವಾಗಿದೆ. ಅವಳ ನಿರ್ಧಾರ ಅರ್ಥಪೂರ್ಣವಾಗಿದೆ.

ಗುತ್ತಿ ತಿಮ್ಮಿಯು ದೋಣಿಯಲ್ಲಿ ದಾಟುತ್ತಿರುವಾಗ ಗುತ್ತಿಯ ನಾಯಿ 'ಹುಲಿಯ' ನದಿಯೊಳಗೆ ಈಜುತ್ತಾ ಕೊಚ್ಚಿಕೊಂಡು ಹೊರಟು ಹೋಗುತ್ತದೆ. ಗುತ್ತಿ ತುಂಬಾ ಸಂಕಟವನ್ನು ಅನುಭವಿಸುತ್ತಾನೆ. ಕೊನೆಗೆ ಗುತ್ತಿ ಮತ್ತು ತಿಮ್ಮಿ ಕಾನೂರು ಚಂದ್ರಯ್ಯಗೌಡರ ಮನೆಯ ಜೀತದಾಳುಗಳಾಗಿ ಹೋಗಿ ಸೇರಿಕೊಳ್ಳುತ್ತಾರೆ. ಅವರು ತಮ್ಮ ಜೀತದ ಪರಿಸರ ಬಿಟ್ಟು ದೂರ ಹೋದರು ಅವರಿಗೆ ಆ ಜೀತದಿಂದ ಮಾತ್ರ ಬಿಡುಗಡೆಯಿಲ್ಲ.

ಕಾನೂರು ಹೆಗ್ಗಡತಿಯಲ್ಲಿ ಜಮೀನಿನ ಹಿಸ್ಸೆ ಮಾಡುವ ಸಂದರ್ಭದಲ್ಲಿ ಚಂದ್ರಯ್ಯಗೌಡರಿಗೂ ಹಾಗೂ ಹೂವಯ್ಯನಿಗೂ ಮಾತಿಗೆ ಮಾತು ಬೆಳೆಯುತ್ತವೆ.

ಜಮೀನುಗಳನ್ನು ಪಾಲು ಮಾಡುವ ಸಮಯ ಬಂದಾಗ ಚಂದ್ರಯ್ಯಗೌಡರು ತಕರಾರು ತರುತ್ತಾರೆ. ಹಿಸ್ಸೆಗೆ ಎಲ್ಲಾ ಆಸ್ತಿಯು ಸೇರಲಾರದು ಪಿತ್ರಾರ್ಜಿತವಾದ ಆಸ್ತಿ ಮಾತ್ರ ಸೇರಬೇಕು. ನನ್ನ ಸ್ವಯಾರ್ಜಿತವಾದ ಆಸ್ತಿಯಲ್ಲಿ ಪಾಲುಕೊಡಲು ನಾನು ಒಪ್ಪುವುದಿಲ್ಲ. ಬಾವಿಮಕ್ಕೆ ಜೀಮೀನು ಗದ್ದೆ, ತೋಟ ಎಲ್ಲಾ ನಾನೇ ಸ್ವತಃ ಬೆವರು ಸುರಿಸಿ ಸಂಪಾದಿಸಿದ್ದು ಹಾಗೆಯೇ ಚಿಕ್ಕೂರು ತೋಟವನ್ನು ನನ್ನ ಯಜಮಾನಿಕೆಯಲ್ಲಿ ನಾನೇ ಸಂಪಾದಿಸಿದ್ದು ಎಂದು ಇದಕ್ಕೆ ಪ್ರತಿಯಾಗಿ ಬಾಳೂರು ಸಿಂಗೇಗೌಡರು, ನಲ್ಲುಹಳ್ಳಿ, ಪೆದ್ದೇಗೌಡರೂ, ಚಂದ್ರಯ್ಯಗೌಡರ, ಹೇಳಿಕೆಯನ್ನು

ಸಮರ್ಥಿಸುತ್ತಾರೆ. ಆದರೆ ಹೂವಯ್ಯ ಇದನ್ನೇ ಪ್ರತಿಭಟಿಸುತ್ತಾನೆ. "ಒಂದು ಮನೆಗೆ ಯಜಮಾನನಾದವನು ಏನೂ ಸಂಪಾದನೆ ಮಾಡಿದರೂ ಅವು ಮನೆಯ ಸಂಪತ್ತಿಗೆ ಸೇರುತ್ತದೆ. ಯಜಮಾನನು ವೈವಟ್ಟು ನಡೆಸುವಾಗ ಏನಾದರು ನಷ್ಟ ಸಂಭವಿಸಿದರೆ ಆ ನಷ್ಟವನ್ನು ತನ್ನೊಬ್ಬನ ಮೇಲೆಯೇ ಹಾಕಿಕೊಳ್ಳುತ್ತಾನೆಯೇ ಮನೆಯ ಲೆಕ್ಕಕ್ಕೆ ಖರ್ಚು ಹಾಕುವುದಿಲ್ಲವೇನು? ನಷ್ಟದಂತೆಯೇ ಲಾಭವೂ ಮನೆಯ ಆಸ್ತಿಗೆ ಸೇರತಕ್ಕದ್ದು ಪಿತ್ರಾರ್ಜಿತವಾದ ಆಸ್ತಿಯ ಆಧಾರ ಬೆಂಬಲ ಧನ ಗೌರವ, ವಿರಾಮ ಇವಗಳೆಲ್ಲ ಇಲ್ಲದಿದ್ದರ ಯಜಮಾನನು ಹೊಸ ಆಸ್ತಿಗಳನ್ನು ಸಂಪಾದಿಸಲು ಸಾಧ್ಯವಾಗುತ್ತಿತ್ತೆ? ಆದ್ದರಿಂದ ಸಂಪಾದಿಸಿದ ಆಸ್ತಿ-ಪಾಸ್ತಿ ಗಳೆಲ್ಲವೂ ಪಿತ್ರಾರ್ಜಿತ ಆಸ್ತಿ ಎಂಬ ಮೂಲಧನದ ಮೇಲೆ ಬಂದ ಬಡ್ಡಿಯಂತೆಯೇ ಹೊರತು ಮತ್ತೆ ಬೇರನಲ್ಲ ಎಂಬುದಾಗಿ ಹೂವಯ್ಯ ವಾದಿಸುತ್ತಾನೆ.

ಅಂತೂ ಪ್ರಾರಂಭದಲ್ಲಿ ಗಂಭೀರವಾಗಿ ಪ್ರಾರಂಭವಾದ ಚರ್ಚೆ ಬರುಬರುತ್ತಾ ಬಿಸಿಹೆಚ್ಚಿ ಕೂಗಾಟದ ಕದನವಾಗಿ ಪರಿಣಮಿಸಿತು. ಕೆಳಗಡೆ ಹಬ್ಬಾಗಿಲಾಚೆ ಕುತೂಹಲದಿಂದಿದ್ದ ಆಳು ಒಕ್ಕಲುಗಳೆಲ್ಲಾ ಬೆಪ್ಪುಬೆರಗಾಗಿ ಭೀತರಾದರು. ಒಟ್ಟಿನಲ್ಲಿ ಹೂವಯ್ಯನ ಒಪ್ಪಿಗೆಯ ಮೇರೆಗೆ ಚಂದ್ರಯ್ಯ ಗೌಡರ ಇಷ್ಟವೇ ಮತ್ತೆ ಗೆದ್ದಿತು. ಅವರ ಸ್ವಯಾರ್ಜಿತ ಆಸ್ತಿಗಳನ್ನು ಅವರಿಗೇ ಬಿಟ್ಟು ಪಿತ್ರಾರ್ಜಿತ ಆಸ್ತಿಯನ್ನೇ ಎರಡು ಪಾಲು ಮಾಡುವುದೆಂದು ನಿರ್ಣಯವಾದ ಮೇಲೆ ಎಲ್ಲರೂ ಮಧ್ಯಾಹ್ನದ ಊಟಕ್ಕೆ ತೆರಳಿದರು.

ಅಪರಾಹ್ನದಲ್ಲಿ ಜಮೀನಿನ ಹಿಸ್ಸೆಗೆ ಮೊದಲಾಯಿತು. ಚಂದ್ರಯ್ಯಗೌಡರಿಗೆ ತಮ್ಮ ಜಮೀನುಗಳಲ್ಲಿ ಫಲವತ್ತಾದು ಯಾವುದು ಎಂಬ ಅರಿವಿದ್ದರಿಂದ ಉತ್ತಮ ಭೂಮಿ ಚಂದ್ರಯ್ಯಗೌಡರಿಗೆ ದಕ್ಕಿತು.

* * * * *

ಅಧ್ಯಾಯ: ೫

ಶೋಷಿತರಾಗಿ ರೈತವರ್ಗ

ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ರೈತವರ್ಗ ಸಾಮಾಜಿಕವಾಗಿ, ರಾಜಕೀಯವಾಗಿ ಆರ್ಥಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಶೋಷಣೆಗೆ ಒಳಗಾಗುವುದನ್ನು ಕಾಣಬಹುದು.

ಬ್ರಾಹ್ಮಣರು ಸಮಾಜದಲ್ಲಿ ಅತ್ಯಂತ ಮೇಲುವರ್ಗದವರು ಅವರು ದರಿದ್ರರಾಗಿರಲಿ ಕೊಳಕರಾಗಿರಲಿ, ಜಾರರಾಗಿರಲಿ, ಚೋರರಾಗಿರಲಿ, ಅವರಿಗೆ ಅಗ್ರಮರ್ಯಾದೆ ಸಲ್ಲಬೇಕು. ಮಂಜುನಾಥ ಭಟ್ಟರು ಅತ್ಯಂತ ದೀನದರಿದ್ರಾವಸ್ಥೆಯಲ್ಲಿ ಮಲೆನಾಡಿಗೆ ಬಂದವರು ತಾವು ಮೇಲುಜಾತಿಯವರೆಂಬ ಕಾರಣಕ್ಕಾಗಿ ಎಲ್ಲರಿಂದಲೂ ಗೌರವವನ್ನು ಆಶ್ರಮವನ್ನು ಪಡೆದವರು. ಆದರೆ ಕಾಲಕ್ರಮೇಣ ಅಲ್ಲಿನ ಮಣ್ಣಿನ ಮಕ್ಕಳನ್ನ ರೈತರನ್ನು ಪರಸ್ಪರ ಎತ್ತಿಕಟ್ಟಿ ತಾವು ಲಾಭ ಗಿಟ್ಟಿಸಿಕೊಂಡು ಮೋಸ ಕಪಟಗಳಿಂದ ಅವರವರ ಸ್ವತ್ತನ್ನು ಎತ್ತಿಹಾಕಿ ಭಾರಿ ಶ್ರೀಮಂತರಾದರು. ಅವರ ವೈಯಕ್ತಿಕ ಜೀವನ ಹೀನಾಯವಾದುದು ಮಗ ಚೋರ ತಮ್ಮ ಆಶ್ರಿತನ ಸತಿಯೊಡನೆ ಅನೈತಿಕ ಸಂಬಂಧವಿಟ್ಟುಕೊಂಡಿದ್ದವನು ಆದರೆ ಸದ್ಗುಣಿಗಳು ಶ್ರೀಮಂತ ವಯೋವೃದ್ಧರಾದಂತಹ ಕಲ್ಲೇಗೌಡರನ್ನು ಅಗೌರವಪೂರ್ವಕವಾಗಿ ಸಂಭೋಧಿಸುವ ಚಾಳಿ ತಮ್ಮ ಬಳಿಸಾಲು ಪಡೆದವರನ್ನೂ ಹಂದಿ ನಾಯಿಗಳಿಗಿಂತ ಕೀಳಾಗಿ ಕಾಣುವ ಮನೋಭಾವವುಳ್ಳವರು.

ಕಾನೂರು ಹೆಗ್ಗಡತಿಯ ವೆಂಕಪ್ಪ ಜೋಯಿಸರು ಜಾತಿಯ ಹಿರಿಮೆಯಿಂದ ಹಳ್ಳಿಯ ಬಡಜನರನ್ನು ಅಮಾಯಕರನ್ನು ರೈತರನ್ನು ದಲಿತರನ್ನು ಹೀನಾಯವಾಗಿ ಕಾಣುವ ಮನೋಭಾವವುಳ್ಳವರು. ದಯೆ, ದಾಕ್ಷಿಣ್ಯ, ರೀತಿ ನೀತಿ, ಧರ್ಮ, ಕರ್ಮ, ಇವುಗಳ ಯಾವ ಗೋಜಲುವಿಲ್ಲ ಸುಳ್ಳು ಮೋಸ ವಂಚನೆಗಳಿಗೆ ಇವರು ಯಜಮಾನರು ಹಳ್ಳಿಯ ಮುಗ್ಧ ಜನತೆಗೆ ಜವರ ಮಾತೆಂದರೆ ವೇದವಾಕ್ಯ ಊರಿನ ಹಿರಿಯರಾದಂತಹ ಚಂದ್ರಯ್ಯಗೌಡರನ್ನು ಏಕವಚನದಲ್ಲಿ ಮಾತನಾಡಿಸುವ ಚಾಳಿ ಇವರದು ಅವರ ದೃಷ್ಟಿಯಲ್ಲಿ ಉಪನಿಷತ್ತು ಭಗವದ್ಗೀತೆಗಳ ಹೆಸರು ಕೇಳಲು ಯೋಗ್ಯರಲ್ಲ ಇದನ್ನೆಲ್ಲ ಶೂದ್ರರು ಓದುವುದರಿಂದ ಮನೆ ಹಾಳಾಗುತ್ತೆಂಬುದು ಅವರ ಉಪದೇಶ ಇದರ ವಿರುದ್ಧ ಸವಾಲಾಗಿ ನಿಲ್ಲುವ ವ್ಯಕ್ತಿ ಹೂವಯ್ಯ.

ಅಸ್ಪೃಶ್ಯತೆಯ ಬಗ್ಗೆ ಹೇಳ ಬೇಕೆಂದರೆ ಶೂದ್ರನೊಬ್ಬ ಮುಟ್ಟಿಸಿಕೊಳ್ಳುವುದು ಹೋಗಲಿ ಹೊಲೆಯನು ಗಾಡಿ ಹೊಡೆಯುತ್ತಿಲ್ಲವೆಂದು ಗೊತ್ತಾದ ಮೇಲೆಯೇ ಇವರು ಗಾಡಿಏರುವುದು ಹಾರುವರ ಪಡ್ಡೆ ಹೈಕಳೂ ಕೂಡ ಶೂದ್ರರೆಂದು ಮಾರು ದೂರ ಹೋಗುತ್ತಾರೆ.

ಮಲೆಗಳಲ್ಲಿನ ಮದುಮಗಳು ಕಾದಂಬರಿಯಲ್ಲಿನ ಮಂಜುಭಟ್ಟರು ಅಜ್ಞರನ್ನು, ಬಡಬಗ್ಗರನ್ನು ನಾನಾ ರೀತಿಗಳಿಂದ ಸುಲಿದು ಸಾಹುಕಾರರೆನಿಸಿಕೊಂಡಿದ್ದರು. ಮಂದಬುದ್ಧಿಯ ಗೌಡರು, ನಾಯಕರು ಹೆಗ್ಗಡೆಗಳಿಗೆ ಅವರ ಜಮೀನನ್ನು ಲಪಾಟಾಯಿಸಲು ಸಾಲ ನೀಡುತ್ತಿದ್ದರು. ಕಲ್ಲೂರು ದೇವಸ್ಥಾನಕ್ಕೆ ಪೂಜಾರಿಯಾಗಿ ಕನ್ನಡ ಜಿಲ್ಲೆಯಿಂದ ಬಂದಿದ್ದ ಬಡಹಾರುವ ಕೆಲವು ವರ್ಷದಲ್ಲಿಯೇ ದೊಡ್ಡ ಜಮೀನುದಾರನಾಗಿ ಚೌಕಿ ಮನೆಯ ಯಜಮಾನರಾಗಿ ದರ್ಬಾರು ನಡೆಸುತ್ತಿದ್ದರು.

ಒಂದೊಮ್ಮೆ ಗೌಡ ಹೆಗ್ಗಡೆ ನಾಯಕರ ಮನೆಗಳಿಗೆ ಅಲೆದು ಹಕ್ಕಿ ಕಾಯಿಪಲ್ಯ ಬೇಡಿ ಜೀವನ ನಡೆಸುತ್ತಿದ್ದ ಭಟ್ಟರು ಗೌಡ ಹೆಗ್ಗಡೆಗಳನ್ನು ಕೆಳಜಗಲಿಯಲ್ಲಿ ನಿಲ್ಲಿಸುತ್ತಿದ್ದರು. ಬುದ್ಧಿವಂತ ಬ್ರಾಹ್ಮಣ ಹೇಗೆ ದಡ್ಡ ಜನರನ್ನು ಶೂದ್ರರನ್ನೂ ಮರುಳುಮಾಡಿ ಕೆಲದಿನಗಳಲ್ಲಿ ಶ್ರೀಮಂತನಾದ ಎಂಬುದನ್ನು ಕುವೆಂಪು ಸ್ಪಷ್ಟವಾಗಿ ಹೇಳುತ್ತಾರೆ.

ಮಡಿವಂತಿಕೆಯ ಮತ್ತೊಂದು ಮುಖವನ್ನು ಇಲ್ಲಿ ನೋಡಬಹುದು. ತುಂಬಿ ಹರಿಯುತ್ತಿರುವ ತುಂಗಾನದಿಯನ್ನು ದಾಟಲು ಗಟ್ಟದಾಳುಗಳು ದೋಣಿಯಲ್ಲಿ ಕುಳಿತಿರುತ್ತಾರೆ. ಆ ಸಮಯಕ್ಕೆ ಮೂರ್ನಾಲ್ಕು ಜನ ಹಾರುವರು ಓಡಿ ಬಂದವರೇ ಅಂಬಿಗನನ್ನೂ ಕುರಿತು ಸತ್ಯನಾರಾಯಣ ವ್ರತಕ್ಕೆ ಹೋಗಬೇಕಾಗಿರುವುದರಿಂದ ತಮ್ಮನ್ನು ಮೊದಲು ನದಿ ದಾಟಿಸುವಂತೆ ಹೇಳುತ್ತಾರೆ.

ತಕ್ಷಣವೇ ಅಂಬಿಗ ಗಟ್ಟದಾಳುಗಳನ್ನು ಉದ್ದೇಶಿಸಿ ಜನಿವಾರದವರು ಹತ್ತಾರೋ ಇಳಿರೋ ಎಲ್ಲ! ಎನ್ನುತ್ತಾನೆ. ಏನೋ ಅಪರಾದ ಮಾಡಿರಿರುವಂತೆ ದಿಗಿಲುಗೊಂಡು ಮರು ಮಾತಾಡದೆ ಎಲ್ಲರೂ ಇಳಿದು ದೂರ ಸರಿಯುತ್ತಾರೆ. ದೋಣಿ ಪೂರ್ತಿ ಖಾಲಿಯಾಗಿ ೨೫ ಮಂದಿ ಕೂರಬಹುದಾದ ದೋಹಿಯಲ್ಲಿ ಮೂವರು ಮಡಿ ಬ್ರಾಹ್ಮಣರು ಕೂತು ಪ್ರಯಾಣ ಮಾಡುತ್ತಾರೆ. ಇದು ಬ್ರಾಹ್ಮಣ ಶೋಷಣೆಯ ಮತ್ತೊಂದು ರೂಪ.

ಕುವೆಂಪು ತಮ್ಮ ಎರಡೂ ಕಾದಂಬರಿಗಳಲ್ಲಿ ಪುರೋಹಿತಷಾಹಿಯ ನಿಜವಾದ ಬಣ್ಣವನ್ನು ಯಥವತ್ತಾಗಿ ಚಿತ್ರಿಸಿದ್ದಾರೆ. ಹಳ್ಳಿಯ ಮುಗ್ಧ ಜನರನ್ನು ಮಾಟ, ಮಂತ್ರ, ದೆವ್ವ, ಶಾಸ್ತ್ರ, ಸಂಪ್ರದಾಯ, ದೇವರು ದಿಂಡರಿನ ಹೆಸರಿನಲ್ಲಿ ಶೋಷಿಸುತ್ತಿರುವ ಪರಿಯನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

ಅಸ್ಪೃಶ್ಯತೆ ಅಥವಾ ಮೇಲು ಕೀಳು ಕೇವಲ ಬ್ರಾಹ್ಮಣ ಮತ್ತು ಶೂದ್ರರ ನಡುವೆ ಮಾತ್ರವೇ ಅಲ್ಲ ಶೂದ್ರರಲ್ಲಿ ಕೂಡಾ ಕೆಳವರ್ಗದವರು, ಮೇಲ್ವರ್ಗದವರಲ್ಲಿ ಅಸ್ಪೃಶ್ಯರೇ, ಗೌಡರು ಹಳೇಪೈಕದವರು ಶೆಟ್ಟರು, ಹಸಲವರು, ಬಿಲ್ಲವರು, ಬೇಲರು, ಹೊಲೆಯರು, ಹೀಗೆ ನಾನಾ ಜಾತಿ ನಾನಾ ಪಂಗಡಗಳು ಹೊಲೆಯರಿಗಿಂತ, ಬಿಲ್ಲವರು ಬೇಲರು ಹೊಲೆಯರು ಹೀಗೆ

ನಾನಾ ಜಾತಿ ನಾನಾ ಪಂಗಡಗಳು ಹೊಲೆಯರಿಗಿಂತ ಬಿಲ್ಲವರು ಬಿಲ್ಲವರಿಗಿಂತ ಗೌಡರು ಮೇಲು ಹೀಗೆ ಜಾತಿ ಶ್ರೇಣಿ ವರ್ಗಗಳು ಮೇಲು ಮೇಲೆಂದು ಬೆಳೆಯುತ್ತಾ ಹೋದಂತಲ್ಲಾ ನಿಸರ್ಗದಿಂದ ದೂರವಾಗತೊಡಗುತ್ತವೆ.

ಬ್ರಾಹ್ಮಣರು ಮೈ ದಣಿಸಿ ದುಡಿಯದೆ ವೇದ ಉಪನಿಷತ್ತುಗಳ ಹೆಸರಿನಲ್ಲಿ ಹಳ್ಳಿಯ ಜನಸಾಮಾನ್ಯರಿಗೆ ರೈತರಿಗೆ ಮೌಢ್ಯವನ್ನೇ ಉಪದೇಶ ಮಾಡುವರು, ವಿಭೂತಿ ಕೊಡುವುದು ಸತ್ಯನಾರಾಯಣವ್ರತ ಮಾಡಿಸುವುದು, ದೆವ್ವ ಪಿಶಾಚಿಗಳಿಗೆ ಬಲಿ ಕೊಡಿಸುವುದು, ಖಾಯಿಲೆ ಬಿದ್ದರೆ ಔಷಧಿ ತೆಗೆದುಕೊಳ್ಳಿ ಎಂದು ಹೇಳುವ ಬದಲು ಬೂದಿ, ಕುಂಕುಮ, ಹಚ್ಚಿ ಮಂತ್ರ ಹಾಕುವುದು ಇತ್ಯಾದಿ ತಂತ್ರಗಳಿಂದ ಜನಸಾಮಾನ್ಯರನ್ನು ಶೋಷಣೆ ಮಾಡುತ್ತಾರೆ. ಇವರಿಗೆ ವೇದ-ಶಾಸ್ತ್ರ ಪುರಾಣಗಳೇ ಬಂಡವಾಳ. ಅವುಗಳಿಂದಲೇ ಅವರ ಜೀವನ ಸಾಗುವ ದಾರಿ ಆದರೂ ಅವರ ಜೀವನಕ್ಕೆ ಯಾವ ಕೊರತೆಯೂ ಇಲ್ಲ. ಬ್ರಾಹ್ಮಣರ ಅಗ್ರಹಾರದ ಊಟ ರಸಾಯನ ಶೂದ್ರರ ಪಾಲಿಗೆ ಸ್ವರ್ಗಭೋಜನ ಇವರು ಜಾತಿ ಶ್ರೇಣಿಯಲ್ಲಿ ತುತ್ತತುದಿಯಲ್ಲಿದ್ದಾರೆ. ಮಂಜಭಟ್ಟರಂಥವರು ಲೇವಾದೇವಿಯಿಂದ ಭೂ ಒಡೆತನವನ್ನೂ ಪಡೆದಿದ್ದಾರೆ. ಬೌದ್ಧಿಕವಾಗಿ ಎಲ್ಲರ ಮೇಲೂ ಅವರ ಹಿಡಿತವಿದೆ ವೇದ ಪುರಾಣಗಳನ್ನು ಪ್ರಶ್ನಿಸುವ ಹೂವಯ್ಯ ದೇವಯ್ಯನಂಥವರನ್ನು ಅವರು ಸಹಿಸರು ತಮ್ಮ ವರ್ಗಹಿತಾಶಕ್ತಿಯನ್ನು ಕಾಪಾಡಿಕೊಳ್ಳಲು ಎಂತಹ ನೀಚ ಕೆಲಸಕ್ಕೂ ಅವರು ಇಳಿಯಬಲ್ಲರು. ವೆಂಕಪ್ಪಜೋಯರಿಗೆ ಬ್ರಾಹ್ಮಣಜಾತಿಯಲ್ಲಿ ಹುಟ್ಟಿದ್ದೇನೆನ್ನುವ ಅಹಂಭಾವ ಹೊರತಾಗಿ ಬ್ರಾಹ್ಮಣನಲ್ಲಿರಬೇಕಾದ ಯಾವೊಂದು ಗುಣವೂ ಇವರಲಿಲ್ಲ. ದಯೆ ದಾಕ್ಷಿಣ್ಯ ರೀತಿ, ನೀತಿ, ಧರ್ಮ, ಕರ್ಮ ಇವುಗಳ ಯಾವ ಗೋಜೂ ಇಲ್ಲ. ಸುಳ್ಳು ಮೋಸ ವಂಚನೆಗಳಿಗೆ ಇವರು ಯಜಮಾನರು, ಹಳ್ಳಿಯ ಮುಗ್ಧ ಜನತೆಗೆ ಇವರ ಮಾತೆಂದರೆ ವೇದ ವಾಕ್ಯ, ಯಾವುದೊಂದಕ್ಕೂ ಈ ಜನ ಮೊದಲು ಹೋಗುವುದು ಜೋಯಿಸರಲ್ಲಿಗೆ, ಶುಭ ಅಶುಭ ರೋಗ ರಾಜನು ಸತ್ತರೆ ಕೆಟ್ಟರೆ ಪ್ರತಿಯೊಂದು ಜೋಯಿಸರಿಂದಲೇ ಆಗಬೇಕು, ಹಳ್ಳಿಯ ಜನರಿಗೆ ಇವರೇ ದೈವ ತಮ್ಮ ಹಣೆಬರೆಹವನ್ನು ರಿಪೇರಿ ಮಾಡುವ ಬ್ರಹ್ಮ.

ಈ ಕಾಲದ ಪುರೋಹಿತರಲ್ಲಿರಬಹುದಾದ ಎಲ್ಲಾ ಗುಣಗಳನ್ನೂ ವೆಂಕಪ್ಪ ಜೋಯಿಸರು ಅಳವಡಿಸಿಕೊಂಡಿದ್ದಾರೆ. ಅವರ ಮಾತು ನಡೆನುಡಿಗಳಲ್ಲಿ ತಾನು ಇತರರಿಗಿಂತ ಶ್ರೇಷ್ಠವೆಂಬ ಭಾವ ಪ್ರಕಟವಾಗುತ್ತದೆ. ಚಂದ್ರಯ್ಯಗೌಡರು ಊರ ಯಜಮಾನರು ಮೇಲಾಗಿ ಜೋಯಿಸರಿಗಿಂತ ಹದಿನೈದಿಪ್ಪತ್ತು ವರ್ಷ ಹಿರಿಯರು. ಆದರೂ ಅವರನ್ನೇ 'ನೀನು' ಎಂದೇ ವೆಂಕಪ್ಪ ಜೋಯಿಸರು ಸಂಭೋಧಿಸುವುದು. ಅವರ ದೃಷ್ಟಿಯಲ್ಲಿ ಶೂದ್ರರು ಉಪನಿಷತ್ತು, ಭಗವದ್ಗೀತೆ, ಗಳ ಹೆಸರು

ಕೇಳಲು ಅನರ್ಹರು ಇದನ್ನೆಲ್ಲ, ಶೂದ್ರರು ಓದುವುದರಿಂದ ಮನೆ ಹಾಳಾಗುತ್ತಿದೆಂಬುದು ಅವರ ಉಪದೇಶ, ಆದರೆ ಜೋಯಿಸರ ಅಭಿಪ್ರಾಯಕ್ಕೆ ಸವಾಲಾಗಿ ನಿಲ್ಲುತ್ತಾನೆ. ಹೂವಯ್ಯ, ಈ ಕಾರಣಕ್ಕಾಗಿಯೇ ಹೂವಯ್ಯನೆಂದರೆ ಜೋಯಿಸರಿಗೆ ಬದ್ಧದ್ವೇಷ ಪರಂಪರೆಯಿಂದ ಬಂದ್ದನ್ನು ವಿಚಾರ ಮಾಡುವ ತಪ್ಪೋ ನೆಪ್ಪೋ ಒಪ್ಪಿಕೊಂಡು ಬಿಡಬೇಕೆಂಬುದು ಹಳ್ಳಿಯವರಿಗೆ ಮೌಢ್ಯವನ್ನೇ ಉಪದೇಶಮಾಡಿ ನಿಮಿತ್ತ ಹೇಳುವುದು, ದೆವ್ವ ಪಿಶಾಚಿಗಳಿಗೆ ಬಲಿಕೊಡುವುದು ಇದರಿಂದ ಹೊಟ್ಟೆ ಹೊರೆದು ಕೊಳ್ಳುತ್ತಿದ್ದೀರಿ. ನಿಮ್ಮ ಬೋಧನೆಯಿಂದ ಎಷ್ಟು ಜನರು ರೋಗಕ್ಕೆ ಸರಿಯಾಗಿ ಮದ್ದು ಮಾಡದೆ ಬರಿಯ ಬೂದಿ ವಿಭೂತಿಗಳನ್ನೇ ಹಚ್ಚಿ ಕೊಂಡು ಪ್ರಾಣ ಕಳೆದುಕೊಳ್ಳುತ್ತಿಲ್ಲ. ಹೀಗೆ ಹೇಳುವಾಗ ಹೂವಯ್ಯ ಬ್ರಾಹ್ಮಣನನ್ನು ಪ್ರಶ್ನಿಸಿ ಯಾವುದು ಸತ್ಯ ಯಾವುದು ಮಿಥ್ಯ ಎಂಬುದನ್ನು ಕಂಡು ಕೊಳ್ಳುವುದಷ್ಟರಲ್ಲಿ ತೃಪ್ತಿ ಪಡೆಯುತ್ತಾನೆ.

ಓದು ಬರಹ ಶೂದ್ರರಿಗಲ್ಲ ಎನ್ನುವುದು ಜೋಯಿಸರ ಭಾವನೆ ಚಂದ್ರಯ್ಯಗೌಡರು ತಮ್ಮ ಮಗ ರಾಮಯ್ಯನನ್ನು ಕುರಿತು ಒಂದು ಕಡೆ ಹೇಳುತ್ತಾರೆ. ಆ ವೆಂಕಪ್ಪಯ್ಯ ಹೇಳ್ದಾಂಗೆ ಮಣ್ಣು ಕೆರೆಯೋ ಜಾತಿ ಕೈಗೆ ಲೇಖಣಿ ಕೊಟ್ಟರೆ ಇನ್ನೇನಾಗುತ್ತದೆ, ವೆಂಕಪ್ಪ ಜೋಯಿಸರ ಉಪದೇಶದ ಮುಕ್ತಾಫಲಗಳೆಂದರೆ ಇದೋ ಇಂಥವು.

ವೆಂಕಪ್ಪ ಜೋಯಿಸರನ್ನು ಕುರಿತು ಕುವೆಂಪು ಹೇಳುವ ಕೆಲ ಮಾತುಗಳು ಅವರ ವ್ಯಕ್ತಿತ್ವನ್ನು ಸ್ವಷ್ಟವಾಗಿ ಎತ್ತಿ ತೋರಿಸುತ್ತವೆ. ಆ ಸಮರ್ಥ ಜೋಯಿಸರು ರೋಗಿಯ ಕೇಡನೆಲ್ಲ ತಾವೇ ಹೊತ್ತು ಕೊಳ್ಳುವ ಧರ್ಮ ಬುದ್ಧಿಯಿಂದ ವಿಧವಿಧವಾದ ದಾನಗಳನ್ನು ಸ್ವೀಕಾರ ಮಾಡುವ ಸೇವಾ ಕಾರ್ಯಕ್ಕೆ ಕೈಹಾಕಿದರು. ಸೀತೆಗೆ ಒಳ್ಳೆಯದಾಗುವುದು ಬಿಡುವುದು ಬೇರೆ ವಿಷಯ ಆ ನೆಪದಲ್ಲಿ ಸಿಕ್ಕಿದಷ್ಟು ದೋಚುವುದು ಸೂರೆ ಮಾಡುವುದು, ಜೋಯಿಸರ ಕೆಲಸ, ಮತ್ತೊಂದು ಕಡೆ ಇನ್ನೂ ವ್ಯಂಗ್ಯವಾಗಿ ಜೋಯಿಸರನ್ನು ಕುರಿತು ಹೇಳುತ್ತ ರೋಗಿಯಾದ ಚಂದ್ರಪ್ಪ ಗೌಡರ ಬಳಿಗೆ ಬರುವಾಗ ಅವರ ದರ್ಪ ಹೇಗಿರುತ್ತೆಂಬುದನ್ನು ಹೇಗೆ ಹೇಳುತ್ತಾರೆ. ದೊಡ್ಡ ಪ್ರವಾಹದಲ್ಲಿ ಸೇತುವೆ ಒಡೆದು ಮುರಿದು ಬೀಳುವ ಚಿಹ್ನೆ ತೋರಿದಾಗ ಆದರ ರಕ್ಷಣಾರ್ಥವಾಗಿ ಅಲ್ಲಿಗೆ ಕರೆಯಲ್ಪಡುವ ಹಿರಿಯರು ಯಾವ ಅಧಿಕಾರದಿಂದ, ದರ್ಪದಿಂದ, ಹೆಮ್ಮೆಯಿಂದ ಹಕ್ಕು ಚಲಾಯಿಸುತ್ತಾರೆ. ಅದಕ್ಕಿಂತಲೂ ಹೆಚ್ಚಾದ ರೀತಿಯಲ್ಲಿ ವರ್ತಿಸುತ್ತಾರೆ. ಇನ್ನೊಂದು ಕಡೆ ಜೋಯಿಸರನ್ನು ಕುರಿತು ರಾಜ್ಯದಲ್ಲಿ ದಂಗೆಯೆದ್ದರೆ ಅದನ್ನುಡಗಿಸಲು ಆ ಪ್ರದೇಶಕ್ಕೆ ರಾಜನ ಸೈನ್ಯ ಹೋಗುವ ಠೀವಿ ಯಿಂದ ವೆಂಕಪಯ್ಯ ಜ್ಯೋಯಿಸರು ಬಂದರು. ಎನ್ನುತ್ತಾರೆ. ಈ ಎಲ್ಲಾ ಮಾತುಗಳಲ್ಲಿಯೂ ಜೋಯಿಸರು ಹೇಗೆ ಸರ್ವಶಕ್ತರಂತೆ ಪ್ರತಿಯೊಂದರಲ್ಲೂ ತಲೆ ಹಾಕುತ್ತಿದ್ದರು. ಎಂಬುದು ಸ್ಪಷ್ಟವಾಗುತ್ತದೆ. ಜೋಯಿಸರ ಅಂತರಂಗವನ್ನು

ಕುವೆಂಪು ಸಹಜವಾಗಿ ಹೊರಗೆಡವಿದ್ದಾರೆ. ವೆಂಕಪ್ಪಜೋಯಿಸರ ಧೂರ್ತತನದ ಪರಮಾಧಿಯನ್ನು ಹೂವಯ್ಯ ಮತ್ತು ಸೀತೆಯರ ವಿವಾಹ ಸಂಬಂಧದಲ್ಲಿ ಆತ ನಡೆದು ಕೊಂಡ ರೀತಿಯಿಂದ ಕಾಣಬಹುದು.

ಈ ಕಾದಂಬರಿಯಲ್ಲಿ ಚಿಕ್ಕ ಮಕ್ಕಳು ಕೀಳು ಅನ್ನುವ ಪ್ರಜ್ಞೆ ಸದಾ ಜಾಗೃತವಾಗಿರುತ್ತದೆ. ಬೇಲರ ಬೈರನ ಮಗ ಗಂಗನನ್ನು ಮುಟ್ಟಿದ್ದಕ್ಕೆ ಪ್ರಾಯಶ್ಚಿತ್ತವಾಗಿ ವಾಸು ಸೆಗಣಿ ಮೆಟ್ಟಿ ಪಾಪ ಪರಿಣಾಮ(ಪರಿಹಾರ) ಮಾಡಿಕೊಂಡು ಹಿತ್ತಲಿನ ಬಾಗಲಿನಿಂದ ಮನೆಯನ್ನು ಪ್ರವೇಶಿಸಿದನು ,ಮದುವೆ ಮನೆಯಲ್ಲಿ ವಾಲಗ ಊದುತ್ತಿರುವವರು ಹೊಲೆಯರು ಎಂದು ತಿಳಿದಾಗ ಅದುವರೆಗೂ ಕೂತೂಹಲ ದಿಂದ ನೋಡುತ್ತಿದ್ದ ಹುಡುಗರು "ಥೂ ಬನ್ರೋ ಈ ಬಡುತಿ ನ್ರೋರವಾಲಗ ಏನು ಕೇಳಾದು" ಎಂದು ದೂರ ಹೋಗುತ್ತಾರೆ, ಇಂಪಾಗಿದ್ದ ವಾಲಿಗದ ಸ್ವರ ಹೊಲೆಯರು ಅಂದ ಕೂಡಲೇ ಆ ಹುಡುಗರಿಗೆ ಕರ್ಕಶವಾಗಿ ತಿರಸ್ಕಾರವಾಗಿ ಕಂಡು ಬರುತ್ತದೆ. ಬಿಲ್ಲವರ ಪೀಂಚಲು ಮುಟ್ಟಿದೆ ಹೊಂಬಾಳೆಯನ್ನು ಮುಕುಂದಯ್ಯ ಊಟಮಾಡಲು ಕೇಳಿದಾಗ ಐತ, ಮುಕುಂದಯ್ಯ ನನ್ನ ಕುರಿತು "ಬ್ಯಾಡ ಅಯ್ಯ, ಇವಳು, ಮುಟ್ಟು ಬಿಟ್ಟಿದ್ದಾಳೆ" ಎನ್ನುತ್ತಾಳೆ. ಹೆಗ್ಗಡೆಯವರನ್ನು ಗುರುತಿಸಿದೊಡನೆ, ಗಂಡಾಳುಗಳು ಹೊಚ್ಚ ಅಡಿಯಾಗಿ ಮಣ್ಣು ದೆಣಿ ಮುಟ್ಟುವಂತೆ, ಎಲ್ಲಿ ಅಂದರಲ್ಲಿ ನಿಂತಿದ್ದ ಎಡೆಯಲ್ಲಿಯೇ ಮುಳ್ಳು ಪೊದೆ ಒಂದನ್ನು ಲೆಕ್ಕಿಸದೆ ಅಡ್ಡ ಬೀಳುತ್ತಾರೆ. ಹೆಣ್ಣಾಳುಗಳಂತೂ ಒಡೆಯರ ಕಣ್ಣಿಗೂ ನೇರವಾಗಿ ಬಿದ್ದರೆ ಅವರೆಲ್ಲ ಮೈಲಿಗೆ ಸೋಕುವುದೋ ಎಂದು ಹೆದರಿ ಹೇಳುವಿನಲ್ಲಿ ಮರೆಯಾಗುತ್ತಾರೆ. ಅಸ್ವಸ್ಥರಾಗಿ ಅನಂತಯ್ಯನವರ ಅಪ್ಪಣೆ ಕೊಟ್ಟರೂ ಹೊಲೆಯರು ಹೆದರಿ ವಿಷ ಸರ್ಪನುಗ್ಗಿದ ಗರ್ಭಗುಡಿಗೆ ಬ್ರಾಹ್ಮಣ ಪೂಜಾರಿ ಹಾವನ್ನು ಹೊಡೆದು ತನ್ನನ್ನು ಕಾಪಾಡಿ ಎಂದು ಆರ್ತನಾದರಿಂದ ಆಹ್ವಾನಿಸಲು, ಅಂಜಿ, ಅಂಜಿ, ಒಳನಗ್ಗುವ ದಂಡ ಪಾರಿ ಶೂದ್ರರಂತೆ, ಹೆಗ್ಗಡೆಯವರನ್ನು ಹಿಡಿದುಕೊಳ್ಳುತ್ತಾರೆ. ಅಸ್ಪೃಶ್ಯತೆ ಎಂಥ ಒಂದು ಪರಮಾವಧಿಯನ್ನು ಮುಟ್ಟುತ್ತದೆ ಎಂಬುದರಲ್ಲಿ ಕುವೆಂಪು ಒಂದು ಕಡೆ ಹೇಳುತ್ತಾ ಸಾಬಿಯಿಂದ ಅತ್ಯಾಚಾರಕ್ಕೊಳಗಾದ ಅಂತಕ ಶೆಟ್ಟಿಯ ಮಗಳು ಕಾವೇರಿಗೆ ತನ್ನ ಮೈಯ್ಯನ್ನು ಕೆಡಿಸಿದ ಪಾಪಿಗಳಲ್ಲಿ ಅಸ್ಪಶ್ಯನಾದ ಚೀಂಕ್ರನೂ ಸೇರಿದ್ದನೆಂಬುದು ಗೊತ್ತಾಗದಿದ್ದದ್ದು ಒಂದು ಭಗವತ್ ಕೃಷಿಯೇ ಆಗಿತ್ತು. ಎನ್ನುತ್ತಾರೆ. ಬಹುಶಃ ಆವಿಚಾರ ವೇನಾದರೂ ತಿಳಿದಿದ್ದ ಪಕ್ಷಕ್ಕೆ ಆಕ್ಷಣದಲ್ಲೇ ಆಕೆಯ ಪ್ರಾಣ ದಾರಿ ಹೋಗುತ್ತಿತ್ತೋ ಏನೋ ಅವಳ ಪ್ರಕಾರ ಆತ್ಯಾಚಾರ ಮಾತ್ರ ಆಗಿತ್ತು. ಅವಳು ಊಹಿಸಿದೆ ಇದ್ದ ಭಯಂಕಾರ ಅತ್ಯಾಚಾರವಲ್ಲ! ಶೋಷಣೆಯನ್ನು ಕುರಿತು ಬರೆಯುವ ಕುವೆಂಪುರವರಿಗೆ ಶೋಷಣಾವ್ಯವಸ್ಥೆಯ ಬಗ್ಗೆ ಸ್ಪಷ್ಟವಾದ ಅರಿವೆದೆ. ಒಂದು ಉದಾಹರಣೆ ಮೂಲಕ ನೋಡಬಹುದು. ಕಾನೂರು

ಹೆಗ್ಗಡತಿಯ ಓಬಯ್ಯ ಹರಕೆ ಒಪ್ಪಿಸಲು ಅಗ್ರಹಾರಕ್ಕೆ ಹೋಗಿ ಜೋಯಿಸರನ್ನು ಕಾಣದೆ ಬಳಲಿದ್ದ ಅವನಿಗೆ ನೀರಡಿಕೆಯಾಗಿತ್ತು. ಒಂದು ತಂಬಿಗೆ ನೀರನ್ನೂ ಬಾಳೆ ಕೀರಿನಲ್ಲಿ ಒಂದಷ್ಟು ಜೋಸಿ ಬೆಲ್ಲವನ್ನೂ ತಂದಿಡುತ್ತ, ಮೈಗೆಯ ಭೀತಿಯಿಂದ ದೂರನಿಂತು ಬ್ರಾಹ್ಮಣ ಹುಡುಗನೊಬ್ಬ ಓಬಯ್ಯನಿಗೆ ಹೇಳಿದ ಕಚ್ಚಿಕುಡಿಯ ಬೇಡವೋ ಎತ್ತಿ ಕುಡಿ' ಎಂದು, ಓಬಯ್ಯನಿಗೆ ಎತ್ತಿ ಕುಡಿತು ಅಭ್ಯಾಸ ವಿಲ್ಲದಿದ್ದರಿಂದ ಮುಖದ ಮೇಲೆಲ್ಲ ನೀರುಬಿದ್ದು ಅವಾಂತರವಾಯಿತು. ಅದನ್ನು ಕಂಡು ಬ್ರಾಹ್ಮಣ ಹುಡುಗರು ಜಿಗುಪ್ಸೆ ತಾಳಿದರು. ಇಂಥ ಸಂಧರ್ಭದಲ್ಲಿ ಶೂದ್ರರ ವಿಚಾರದಲ್ಲಿ ಅವರಿಗೆ (ಬ್ರಾಹ್ಮಣ ಹುಡುಗರಿಗೆ) ಹಿರಯರು ಕಲಿಸಿದ್ದ ತಿರಸ್ಕಾರ ಮತ್ತಿನಿತು ಹೆಚ್ಚಾಯಿತು! ಎಂದು ಬರೆಯುವ ಕುವೆಂಪು ಅವರು, ಚಂದ್ರೇಗೌಡರ ಕಿರಿಯ ಮಗ ವಾಸು ಹೊಲೆಯರ ಬೈರನ ಮಗ ಮಾಂಸದ ಆಸೆಗಾಗಿ ಹಕ್ಕಿಯ ಮರಿಗಳನ್ನೂ ಕದ್ದನೆಂದು ಕೊಪ ದಿಂದ ಬೇಲರವನನ್ನು ಮುಟ್ಟಬಾರದೆಂದು ಗೊತ್ತಿದ್ದರೂ ಒನಕೆ ಯಿಂದ ಇಟ್ಟು ಕುಟ್ಟುವಂತೆ ಗಂಗಮ್ಮೆಗೆ ಗುದ್ದಿ ತನ್ನ ಜೇಬಿನಲ್ಲಿದ್ದ ಹಕ್ಕಿಯನ್ನು ಬಿಸಾಡಿ, ದಾರಿಯಲ್ಲಿ ಬೇಲದವರನನ್ನು ಮುಟ್ಟಿದ್ದಕ್ಕೆ ಪ್ರಾಯಶ್ಚಿತ್ತವಾಗಿ ಹಟ್ಟಿಗೆ ಹೋಗಿ ಸಗಣಿ ಮುಟ್ಟಿ ಹಿತ್ತಲ ಕಡೆಯ ಬಾಗಿಲಿನಿಂದ ಮನೆಯನ್ನು ಪ್ರವೇಶಿಸಿದನು. ಎಂದಾಗ ಯಾವ ಪ್ರತಿಕ್ರಿಯೆನ್ನು ವ್ಯಕ್ತಪಡಿಸುವುದಿಲ್ಲ. ಇದಕ್ಕೆ ಇನ್ನೂ ಒಂದು ಉದಾಹರಣೆ ನೋಡಿ, ಚಿನ್ನಮ್ಮನ ಮದುವೆ ಸಂಧರ್ಭ ಹೊಲೆಯರ ಮಂಜು, ತಿಮ್ಮ ಸಿದ್ಧ ಬೈರವಾಲಗ ಊದುತ್ತಿದ್ದರು. ಆ ಬಗ್ಗೆ ಗೌಡರ ಮನೆಯ ಕಾಡ, ಕೆಮ್ಮು, ಧರ್ಮ, ಮುಂತಾದ ಹುಡುಗರು ಆಡಿಕೊಳ್ಳುವ ಮಾತು ಗಮನಾರ್ಹ.

ಒಬ್ಬ "ಕಾಡಣ್ಣಯ್ಯ ಅವನ್ನ ನೋಡಿದ್ರೆ ಹಳೆ ಮನೆ ಭೈರನ್ನ ಕಂಡ ಹಾಗೆ ಕಾಣ್ತದಲ್ಲೇನೋ."

ಮತ್ತೊಬ್ಬ "ವಾಲಗದವನೋ ಅವನು"

ಇನ್ನೊಬ್ಬ "ಹಳೆ ಮನೆ ಭೈರನ ಕೈಲಿ ಮದುವೆ ವಾಲಗ ಊದಿಸ್ತಾರೇನೋ ಯಾರಾದರೂ"

ಮತ್ತೊಬ್ಬ "ಅವ ನಿಮ್ಮ ಹೊಲೇರ ಭೈರನ್ಹಾಂಗೇ ಇಲ್ಲೇನೋ ಧರಂಭಾವ"

ಇನ್ನೊಬ್ಬ "ಥೂ, ಹೊಲೇರ ಕೈಲಿ ಯಾರಾದರೂ ಮದುವೆ ಮನೆ ವಾಲಗ ಊದಿಸ್ತಾರೇನೋ. ಅಲ್ವೇನೋ ಧರ್ಮಾ? ಇಷ್ಟರಲ್ಲಿ ತಾನು ವಾಲಗ ಉದುತ್ತಿದ್ದೇನೆಂಬ ಹೆಮ್ಮೆಯಿಂದ ಭೈರ "ನನ್ನ ಗುರುತು ಸಿಕ್ಕಲೇ ಇಲ್ಲ ಅಂತ ಕಾಣ್ತದೆ ನಮ್ಮ ಕೋಟನೂರು ಸಣ್ಣಯೋರಿಗೆ ನಾನು ಕಣ್ಲೋ ಹಳೇ ಮನೆ ಬೈರ" ಎಂದು ಕೂಡಲೇ ಹುಡುಗರೆಲ್ಲಾ ಕೀಳು ಜಾತಿ ಹೊಲಿಯನ ವಾಲಗ ಕೇಳಿದ್ದಕ್ಕಾಗಿ ತಮ್ಮ ವಾಡಿಕೆಯ ಗೌರವಕ್ಕೆ ಮಸಿ ಬಳಿದಂತಾಯಿತೆಂದು ಮುಖ ಸಣ್ಣಗೆ ಮಾಡಿಕೊಂಡು "ಥೂ ಬನ್ರೋ ಈ ಬಡು ತಿನ್ನೋಕ ವಾಲಗ ಏನು ಕೇಳಾದು"

ಎಂದು ಜಿಗುಪ್ಸೆಯಿಂದ ಹೊರಟು ಹೋಗುತ್ತಾರೆ. ಬ್ರಾಹ್ಮಣ ಹುಡುಗರು ಶೂದ್ರರನ್ನು ಕಂಡು ಜಿಗುಪ್ಸೆಗೊಂಡಾಗ ಅದನ್ನು ಪ್ರತಿಭಟಿಸುವ ಕುವೆಂಪು ಅವರು ಶೂದ್ರರ ಹುಡುಗರು ದಲಿತರನ್ನು ಕಂಡು ಅಸಹ್ಯ ಪಡುವಾಗ ಪ್ರತಿಕ್ರಿಯೆ ತೋರಿಸುವುದಿಲ್ಲ ಯಾಕೆ? ಎಂಬುದು ಇಲ್ಲಿ ಪ್ರಶ್ನೆಯಾಗಿ ಉಳಿಯುತ್ತದೆ.

ಮತ್ತೊಂದು ಶೋಷಕವರ್ಗ ಮುಸ್ಲಿಮರದು ಹೊಟ್ಟೆಪಾಡಿಗಾಗಿ ಹೊರದೇಶಗಳಿಂದ ಬಂದ ಸಾಬರು ಇಲ್ಲಿ ಮತ್ತೊಂದು ಶೋಷಕ ವರ್ಗವಾಗುತ್ತಾರೆ. ತಮ್ಮ ಒಡೆಯರಿಗಾಗಿ ವಸೂಲು ಮಾಡುವ ಸಾಲದ ಜೊತೆಗೆ ಶ್ರಮಜೀವನಗಳನ್ನು ಹೆದರಿಸಿ ಬೆದರಿಸಿ ತಮ್ಮ ಮಾಮೂಲನ್ನು ವಸೂಲು ಮಾಡಿಕೊಳ್ಳುತ್ತಾರೆ. ವ್ಯಾಪಾರ ಕಳ್ಳತನ ದರೋಡೆಗಳಲ್ಲಿ ತೊಡಗಿರುವ ಇವರ ಹೊನ್ನಾಳಿ ಹೊಡೆತಕ್ಕೆ ಪ್ರಸಿದ್ಧಿಯಾಗಿದ್ದಾರೆ. ದಲಿತರನ್ನು ಬಡವರನ್ನು ಹಿಂಸಿಸಿ ತಮ್ಮ ಹೊಟ್ಟೆ ಹೊರೆಯುವುದು ಇವರ ಕೆಲಸವಾಗಿದೆ. ಇವರನ್ನು ಕಂಡರೆ ಎಲ್ಲರಲ್ಲೂ ಭಯ ಆದರೆ ಹಣಕ್ಕಾಗಿ ಏನೂ ಮಾಡಲು ತಯಾರಾಗಿರುವ ಇವರನ್ನು ಗೌಡರು ತಮ್ಮ ಸ್ವಾರ್ಥಕ್ಕೆ ಅಸ್ತ್ರಗಳನ್ನು ಬಳಸಿಕೊಳ್ಳುವಂತೆ ಬಳಸಿಕೊಳ್ಳುತ್ತಾರೆ.

ರಾಜಕಾರಣ ಮತ್ತು ವ್ಯಾಪಾರಕ್ಕಾಗಿ ವಿದೇಶಗಳಿಂದ ಬಂದಂತಹ ಕ್ರಿಸ್ತ ಪಾದ್ರಿಗಳು ಮಲೆನಾಡಿನ ಸಾಮಾನ್ಯ ಜನರ ರೈತರ ಮುಗ್ದತೆಯನ್ನು ಬಂಡವಾಳ ಮಾಡಿಕೊಂಡು ಅವರ ಜಾತಿ ಆಚಾರ ವಿಚಾರಗಳನ್ನು ಹಂಗಿಸಿ ಹಲವಾರು ಆಮಿಷಗಳನ್ನು ಒಡ್ಡಿ ತಮ್ಮ ಧರ್ಮವನ್ನು ಹೇಗೆ ಹರಡುತ್ತಾರೆಂಬುದನ್ನು ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಇದು ಶೋಷಣೆಯ ಮತ್ತೊಂದು ಮುಖವನ್ನು ಅನಾವರಣಗೊಳಿಸುತ್ತದೆ.

ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಗಳು ತಮ್ಮ ಕಾವ್ಯದ ತ್ರಿನೇತ್ರ ಗಳೆಂದು ಕುವೆಂಪು ಅವರೇ ಹೇಳಿಕೊಂಡಿದ್ದಾರೆ. ಇವರ ಪ್ರಕಾರ ಅವರ ಸಾಹಿತ್ಯ ವಿಶ್ವತತ್ವವನ್ನು ಪ್ರತಿಪಾದಿಸುತ್ತದೆ. ಸಮಾಜದ ಎಲ್ಲ ಜನರು ಪ್ರಜ್ಞಾವಂತರಾಗಿ ಬಾಳಬೇಕೆಂಬುದೇ ಕುವೆಂಪು ಅವರ ಆಶಯ ಕುವೆಂಪು ತಮ್ಮ ಕವಿತೆಗಳಲ್ಲಿ ವಿಶಾಲ ಮನೋಭಾವದಿಂದ ವಿಷಯ ರಸದೌತಣವನ್ನು ನೀಡುತ್ತಾರೆ. ಅವರ ಸಾಮಾಜಿಕ ಪ್ರಜ್ಞೆ ಸರ್ವೋದಯ ಕಡೆಗೆ ತುಳಿಯುತ್ತದೆ.

"ಕತ್ತಲೆಯ ಕೊಲೆಗೈವ ಕಾಂತಿಖಡ್ಗದ ವೀರ
ಆತ್ಮ ಉದಯಾಚಲವನೇರಿ ಬಾರ
ಸತ್ಯಮಾರ್ಗಕೆ ನಡೆದ ಧರ್ಮದೀಪವ ತೋರ
ಚಿತ್ತ ತಿಮಿರವನಟ್ಟಿ ಕಳೆಯೊ ದೂರ
ಹೇ ಜ್ಯೋತಿರವತಾರ!

ಹೀಗೆ ಕುವೆಂಪು ಸಂದೇಶ ನೀಡುತ್ತಾರೆ ಕತ್ತಲಿನಿಂದ ಹೊರ ನಡೆದು ಬೆಳಗಿನತ್ತ ಮುಖಮಾಡು ಆತ್ಮ ಎಂಬ ಉದಯ ಚಲವನ್ನೇರಿ ಬಾ ಸತ್ಯಮಾರ್ಗದಲ್ಲಿ ನಡೆ ಮನಸ್ಸೆಂಬ ಪಾಳೆಯದಲ್ಲಿ ಹೊಸ ಬೆಳಕನ್ನು ಮೂಡಿಸು ಎಂಬುದಾಗಿ ಕರೆ ನೀಡುತ್ತಾರೆ. ಸಾರ್ವಕಾಲಿಕ ಸತ್ಯವನ್ನೇ ಸಾರುತ್ತಾ ಕುವೆಂಪು ಸಾಮಾನ್ಯನಿಗೆ ಸಾಮಾಜಿಕ ಜಾಗೃತಿ ಪ್ರಜ್ಞೆಯನ್ನು ಮೂಡಿಸುತ್ತಾರೆ.

ಕುವೆಂಪುರವರ 'ಅನಿಕೇತನ' ಹಾಗೂ 'ಕಲ್ಕಿ' ಪದ್ಯಗಳಂತೂ ವಿಶ್ವಮಾನವ ಪ್ರಜ್ಞೆಯನ್ನು ಸಾಮಾನ್ಯರಲ್ಲಿ ಬೆಳೆಸುವಂತಹ ಅವತಾರವೆತ್ತೆಂತಹ ಕ್ರಾಂತಿಗೀತೆಗಳು 'ಓ ನನ್ನ ಚೇತನ ಆಗು ನೀ ಅನಿಕೇತನ ಎಂಬುದರಲ್ಲಿ ಕುವೆಂಪು ಸಾಮಾನ್ಯರಿಗೆ ಯಾವ ಬಂಧನಕೊಳ್ಳಗಾಗದೆ ವಿಶ್ವಮಾನವರಾಗಿ ಬಾಳಬೇಕೆಂಬುದನ್ನು ಸೂಚಿಸಿದ್ದಾರೆ.

(೧. ಮಂತ್ರಾಕ್ಷತೆ–ಪುಟ–೧೩)

ಕಲ್ಕಿ ಪದ್ಯವಂತೂ 'ಬಡವನ' ಬದುಕನ್ನು ಸಮಗ್ರವಾಗಿ ಚಿತ್ರಿಸುತ್ತಾ ಕೊನೆಗೆ ಬಡವನ ಅಸಾಹಯಕತೆಯನ್ನು ಕೋಪವನ್ನು ಧ್ವನಿಸುತ್ತದೆ. ಈ ಕವಿತೆ ಸಾಮಾಜಿಕ ಪ್ರಜ್ಞೆಯನ್ನು ಹೇಳುವುದರ ಜೊತೆಗೆ ಮಾನವ ಮಾನವನೊಡನೆ ಹಬ್ಬಿನಿಂತಿರುವ ಆಕ್ರೋಶವನ್ನು ವ್ಯಕ್ತಪಡಿಸುತ್ತದೆ. ಬಡವರ–ಶ್ರೀಮಂತರ ನಡುವಿನ ಜೀವಂತ ಚಿತ್ರಣ ಇದರಲ್ಲಿದೆ. "ಬಡವನ ಕಲಿಯುಗ ದಂತ್ಯದ ಕಲ್ಕಿ" ಎಂಬ ಉತ್ಕಟ ಭಾವ ಇಲ್ಲಿ ಸಮರ್ಥವಾಗಿ ಧ್ವನಿಯನ್ನು ಪಡೆದುಕೊಂಡಿದೆ.

* * * * *

ಸಮಾರೋಪ

ಮಲೆನಾಡಿನ ಗ್ರಾಮೀಣ ಜೀವನ ಕುವೆಂಪು ರಚಿಸಿರುವ ಎರಡು ಮಹಾಕಾದಂಬರಿಗಳ ತಡಿಕೆಯಾಗಿದೆ, ಮಲೆನಾಡಿನ ಪ್ರದೇಶದಲ್ಲಿ ಎದ್ದುಕಾಣುವವರೆಲ್ಲ ರೈತರೇ ಚಂದ್ರಯ್ಯಗೌಡ ಶ್ಯಾಮಯ್ಯಗೌಡ, ಸಿಂಗಪ್ಪಗೌಡ, ಅಣ್ಣಯ್ಯಗೌಡ, ರಂಗಪ್ಪ ಗೌಡ, ಕಲ್ಲಯ್ಯಗೌಡ, ಸುಬ್ಬಣ್ಣ ಹೆಗ್ಡೆ, ದಲಿತ ರೈತರು, ಭೂ ರಹಿತ ರೈತರು, ಸಾಮಾನ್ಯ ರೈತರು ಹೀಗೆ ಮೊದಲಾದ ಅಲ್ಲಿಯ ಒಕ್ಕಲು ಮಕ್ಕಳ ಸಾಂಸಾರಿಕ ಜೀವನದ ಸುತ್ತ ಈ ಕಾದಂಬರಿಗಳ ಕತೆ ಸಾಗುತ್ತದೆ.

ಇಲ್ಲಿಯ ರೈತರು ಶ್ರಮಜೀವಿಗಳಾಗಿದ್ದು ಜಾತಿ ಶ್ರೇಣಿಯಲ್ಲಿ ಜಮೀನ್ದಾರಿ ಒಡೆತನದಿಂದ ಶೋಷಣೆಗೆ ಗುರಿಯಾಗುತ್ತಲೇ ಒಂದು ಕಡೆ ಬ್ರಾಹ್ಮಣರಿಂದ ಬೌದ್ಧಿಕವಾಗಿ ಶೋಷಣೆಗೆ ಒಳಪಟ್ಟರೆ ಮತ್ತೊಂದು ಕಡೆ ಗೌಡರಿಂದ ಆರ್ಥಿಕವಾಗಿ ಶೋಷಿಸಲ್ಪಡುತ್ತಾರೆ. ಹಾಗೆಯೇ ಮುಸ್ಲಿಂಮರು ಕ್ರೈಸ್ತರು ಈ ವರ್ಗದಿಂದ ತಮ್ಮ ಸಾಮಾಜಿಕ ಬದುಕಿನಲ್ಲಿ ಸಂಕಷ್ಟಗಳಿಗೆ ರೈತರು ತಲೆಭಾಗಬೇಕಾಗುತ್ತದೆ.

ಮಲೆನಾಡಿನ ಗೌಡರ ಅವಿಭಕ್ತ ಕುಟುಂಬದಲ್ಲಿ ದೊಡ್ಡಮಕ್ಕಳಿದ್ದು ಮನೆಯೊಡೆಯ ಮೂರನೆಯ ಮದುವೆಯನ್ನು ಮಾಡಿಕೊಂಡಾಗ ಉದ್ಭವಿಸುವ ಸಮಸ್ಯೆಗಳು ಸಾಹುಕಾರರ ಕಿರುಕುಳದಿಂದ ಸಾಲಗಾರರು ಅನುಭವಿಸುವ ಕಷ್ಟಗಳು ಮಾದಕ ಪದಾರ್ಥಗಳ ಸೇವನೆಯಿಂದ ಸಂಭವಿಸುವ ಹಲವು ತರಹದ ರೋಗ ರುಜಿನಗಳು, ಜಮೀನು ಹಿಸ್ಸೆಯಾಗುವಾಗ ಸಂಬಂಧಪಟ್ಟವರ ಮನಸ್ಸಿನಲ್ಲಿ ಉದ್ಭವಿಸುವ ವಿಚಾರಗಳು ಹಿಸ್ಸೆಯಿಂದಾದ ತಂಟೆ ತಕರಾರು ಬ್ರಾಹ್ಮಣರಿಂದ ಜೋಯಿಸರಿಂದ ಪ್ರಸಾರಗೊಳ್ಳುವ ಮೂಡನಂಬಿಕೆಗಳು, ರೈತರ ಕುಟುಂಬಗಳ ಮೇಲೆ ಅವು ಬೀರುವ ದುಷ್ಪರಿಣಾಮಗಳು ಅಣ್ಣತಮ್ಮಂದಿರಲ್ಲಿಯೇ ಯಾವಾಗಲೂ ಹೊಟ್ಟೆಕಿಚ್ಚು ಹಿಂದೂಧರ್ಮದ ಅನಾಚಾರವನ್ನು ಕುರಿತ ನೇಟಿವ್‌ಪಾದ್ರಿಯ ಪ್ರಚಾರ ಆ ಪ್ರಚಾರದಿಂದ ರೈತನ ಮನೆಯ ತರುಣರ, ಮನಸ್ಸಿನ ಮೇಲಾಗುತ್ತಿದ್ದ ದುಷ್ಪರಿಣಾಮ ಹೊನ್ನಳ್ಳಿ ಹೊಡ್ತಾ ಇಂಥಹ ನೂರಾರು ವಾಸ್ತವ ಸಂಗತಿಗಳು ಈ ಕಾದಂಬರಿಯಲ್ಲಿ ಬೆತ್ತಲೆಯಾಗಿ ಕಾಣಿಸಿಕೊಳ್ಳುತ್ತವೆ. ಬ್ರಾಹ್ಮಣರು ಒಕ್ಕಲಿಗರ ಬಗ್ಗೆ ನಡೆದುಕೊಳ್ಳುತ್ತಿದ್ದ ರೀತಿನೀತಿಗಳು ಈ ಎರಡೂ ಕೃತಿಗಳಲ್ಲಿಯೂ ಮೇಲಿಂದ ಮೇಲೆ ಪ್ರಸ್ತಾಪಗೊಳ್ಳುತ್ತವೆ.

ಸ್ವಾತಂತ್ರ್ಯ ಲಭಿಸಿ ವರ್ಷಗಳು ಕಳೆದರೂ ಹಳ್ಳಿಗರ ರೈತರ ಸ್ಥಿತಿಗತಿಗಳಲ್ಲಿ ಏನು ವ್ಯತ್ಯಾಸವಾಗಿಲ್ಲ. ಪ್ರಾಮಾಣಿಕರಾದ ರೈತರು ಓದು-ಬರಹ ಕಲಿತಾಗ ಮಾತ್ರ ಸಮಾಜದಲ್ಲಿ ರೈತವರ್ಗ ಬದಲಾವಣೆ ಹೊಂದಲು ಸಾಧ್ಯ.

ಭರತಖಂಡದಲ್ಲಿ ರೈತಸಂಘ ಕಲ್ಪನೆ ಬರುವುದಕ್ಕೆ ಮುಂಚಿತವಾಗಿ ಕುವೆಂಪು ರೈತರ ಹಿತಾಶಕ್ತಿಗಳನ್ನು ಸಮಾಜದಲ್ಲಿ ಅವರಿಗೆ ದೊರಕಬೇಕಾದ ಸ್ಥಾನಮಾನಗಳನ್ನು ಲೋಕಾ ಕಲ್ಯಾಣ ಕಾರ್ಯದಲ್ಲಿ ಅವರ ಪಾತ್ರವನ್ನು ಕುರಿತು ತಮ್ಮ ಕೃತಿಗಳಲ್ಲಿ ತಿಳಿಸಿದ್ದಾರೆ.

ಕುವೆಂಪು ಅವರು ತಮ್ಮ ವಿದ್ಯಾರ್ಥಿ ದೆಶೆಯಿಂದಲೂ ಬಾಷಣ ಮತ್ತು ಲೇಖನಗಳ ಮೂಲಕ ಹಳ್ಳಿಗರ ಮತ್ತು ರೈತರ ದುಸ್ಥಿತಿಯನ್ನೂ ಬಯಲಿಗೆಳೆದು ಅದಕ್ಕೆ ನಿವಾರಣೋಪಾಯವನ್ನು ಸೂಚಿಸುತ್ತಾ ಬಂದಿದ್ದಾರೆ.

ಎರಡುಸಾವಿರ ವರ್ಷಗಳ ಇತಿಹಾಸದಲ್ಲಿ ರೈತನೇ ವಸ್ತುವಾಗುಳ್ಳ ಕಾವ್ಯಗಳಾಗಲಿ ಕನ್ನಡ ಸಾಹಿತ್ಯದಲ್ಲಿ ಇಲ್ಲದಿರುವುದು ಆಶ್ಚರ್ಯದ ಸಂಗತಿ ಆದರೆ ಆ ಕಾಲದಲ್ಲಿಯೂ ದೀನ ದಲಿತರ ಮೇಲೆ ಗುಡಿ-ಗೋಪುರಗಳನ್ನೂ ನಿರ್ಮಿಸುತ್ತಿದ್ದ ಪುರೋಹಿತರಿಗೆ ಸಾಧಗಳಲ್ಲಿ ಮೆರೆದು ಭೋಗವಿಲಾಸದಲ್ಲಿ ಮುಳುಗುತ್ತಿದ್ದ ಶ್ರೀಮಂತರಿಗೆ ಸಾಮ್ರಾಜ್ಯಷಾಹಿಯನ್ನು ವಿಸ್ತರಿಸುತ್ತಿದ್ದ ಚಕ್ರವರ್ತಿಗಳಿಗೆ ಬೆವರು ಸುರಿಸಿ ರಕ್ತ ಬಸಿದು ಆಹಾರವನ್ನು ಬೆಳೆದು ಸಂಪತ್ತನ್ನು ಸೃಷ್ಟಿಸಿ ಕೊಡುತ್ತಿದ್ದ ರೈತರು ಬಹುಸಂಖ್ಯೆಯಲ್ಲಿದ್ದರೆಂಬುದು ಖಚಿತ ಆಗಲೂ ಭಾರತೀಯ ಸಮಾಜದ ಬೆನ್ನುಮೂಳೆಯಂತಿದ್ದವರು ರೈತರು ಆಗಲೂ ಅವರು ಅಜ್ಞಾನಿಗಳು ಮೌಢ್ಯಂದರರಾಗಿದ್ದರು. ಸಾಮಾಜದಲ್ಲಿ ಯಜ್ಞಪಶುಗಳಾಗಿದ್ದರು. ಈಗಲೂ ರೈತರಲ್ಲಿ ಒಗ್ಗಟ್ಟಿಲ್ಲದ ಕಾರಣ ರೈತವರ್ಗ ಹಿಂದುಳಿದಿದೆ. ಸಾಲಭಾದೆ ತಾಳಲಾರದೆ ಆತ್ಮಹತ್ಯೆಗೆ ಎಷ್ಟೋ ಕುಟುಂಬಗಳು ಶರಣಾಗುತ್ತಿವೆ ಜಮೀನ್ದಾರಿ ಪದ್ಧತಿಯಿಂದ ಮುಕ್ತಿ ಹೊಂದಿದ್ದರೂ ಜೀತಪದ್ಧತಿಯಿಂದ ವಿಮುಕ್ತಿ ಹೊಂದಿದರೂ ರೈತರ ಜೀವನಮಟ್ಟ ಸುಧಾರಿಸಿಲ್ಲವೆಂದು ಹೇಳಬಹುದು. ಸರ್ಕಾರ ರಾಜಕಾರಣಿಗಳ ಸ್ವಾರ್ಥ ಅಧಿಕಾರದಿಂದಾಗಿ ರೈತವರ್ಗ ಹಿಂದುಳಿಯುತ್ತಲೇ ಇದೆ. ಆಹಾರಬೆಳೆಗಳ ಪದಾರ್ಥಗಳು ಹೆಚ್ಚುತ್ತಲೇ ಇವೆ.

೧೯ನೇ ಶತಮಾನದಲ್ಲಿಯೇ ಕುವೆಂಪು ಮಲೆನಾಡಿನಂತಹ ಪ್ರದೇಶದಲ್ಲಿ ಒಕ್ಕಲಿಗರ ಸ್ಥಿತಿಗತಿಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಈ ನಿಟ್ಟಿನಲ್ಲಿ ಇಂದಿನ ಗ್ರಾಮೀಣ ಪ್ರದೇಶಗಳಲ್ಲಿ ರೈತವರ್ಗದ ಜನರಲ್ಲಿ ಸಾಕಷ್ಟು ಬೆಳವಣಿಗೆ ಕಾಣಬೇಕಿದೆ. ಇದಕ್ಕೆ ಸೂಕ್ತವಾಗಿ ಸರ್ಕಾರ ಗಮನ ಹರಿಸಬೇಕಾಗಿದೆ.

ಉಚ್ಚವರ್ಗದ ಜನರ ತಿರಸ್ಕಾರಕ್ಕೆ ಗುರಿಯಾದ ಶ್ರೀ ಸಾಮಾನ್ಯರ ರೈತರ ಶ್ರಮಜೀವಿಗಳು ಮತ್ತು ದೀನದಲಿತರ ಶಾಪ ಭರತಖಂಡದ ಹಿಂದಿನ ಮತ್ತು ಇಂದಿನ ದುಸ್ಥಿತಿಗೆ ಕಾರಣವಾಗಿದೆಯೆಂಬುದರಲ್ಲಿ ಲವಲೇಶವೂ ಸಂದೇಹವಿಲ್ಲ ಈ ದೇಶದ ಅನೈಕ್ಯತೆ ಮತ್ತು

ಅಭದ್ರತೆಗೆ ಜಾತೀಯತೆಯೊಂದೇ ಮೂಲಭೂತ ಕಾರಣ. ಅದರಿಂದಾಗಿ ಹಿಂದೂಗಳೆನಿಸಿ ಕೊಂಡವರು ಜನಾಂಗವಾಗಿ ಒಳ ಹೊರ ಶತ್ರುಗಳನ್ನು ಎದುರಿಸಲಾಗಲಿಲ್ಲ. ಈ ಅನೈಕ್ಯದ ಫಲವನ್ನು ಒಳಗಿನ ಅಲ್ಪಸಂಖ್ಯಾತರು ಬಳಸಿಕೊಳ್ಳುತ್ತಿದ್ದಾರೆ.

ಆದ್ದರಿಂದ ರೈತರೆಲ್ಲಾ ಒಟ್ಟಾಗಿ ಜಾತಿವಿನಾಶಕ್ಕೆ ಕಂಕಣಬದ್ಧರಾಗಬೇಕು. ವಿರಸ ವೈಷಮ್ಯ ತಾರತಮ್ಯಗಳ ಬಚ್ಚಲಾಗಿರುವ ಹಿಂದೂ ಜಾತಿಯನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು. ಎಂಬುದಾಗಿ ಕುವೆಂಪು ರೈತಬಂಧವರಿಗೆ ಸಂದೇಶ ನೀಡುತ್ತಾರೆ.

ಜಾತಿಕಲಹ ರಾಜಕಾರಣಗಳ ಭ್ರಷ್ಟಾಚಾರ ಅಧಿಕಾರಿಗಳ ದಬ್ಬಾಳಿಕೆ ಹಾಗೂ ಮೂಢ ಸಂಪ್ರದಾಯಗಳು ತಮ್ಮ ಅವನತಿಗೆ ಮೂಲವೆಂಬುದನ್ನು ರೈತರು ಅರಿತಾಗ ಅವರ ಶೋಷಣೆ ನಿಂತು, ದೇಶ ಸುಭಿಕ್ಷತೆಯಿಂದಿರಲು ಸಾಧ್ಯವಾಗುತ್ತದೆ.

"ನೇಗಿಲ ಕುಲದೊಳಗಡಗಿದ ಕರ್ಮ

ನೇಗಿಲ ಮೇಲೆಯ ನಿಂತಿದೆ ಧರ್ಮ"

ಈ ಮೇಲಿನ ಸಾಲುಗಳು ರೈತನ ನೇಗಿಲಿನ ಮಹತ್ವವನ್ನು ಕುರಿತು ಹೇಳುತ್ತವೆ.

ಒಟ್ಟಾರೆಯಾಗಿ ಮಲೆನಾಡಿನ ಗೌಡರ ಜೀವನ ವಿಧಾನ ಅವರ ಮೂಢನಂಬಿಕೆಗಳು ಟೊಳ್ಳು ಪ್ರತಿಷ್ಠೆಗಳು ದರ್ಪ–ದಬ್ಬಾಳಿಕೆಗಳು ಪ್ರಣಯ ಸಾಹಸಗಳು ಅವರ ಹೆಂಗಸರ ಅಸ್ವತಂತ್ರ ಬಾಳು ಹಾಗೂ ಮುಗ್ಧತೆ ಆ ಗೌಡರ ಹೊಲ–ಗದ್ದೆಗಳಲ್ಲಿ ದುಡಿಯುವ ಹಳೇ ಪೈಕದವರು ಹೊಲೆಯರು ದೀವರು ಬಿಲ್ಲವರು ಮುಂತಾದವರ ವಿಶಿಷ್ಟ ರೀತಿ–ರಿವಾಜುಗಳು ಇವರನ್ನು ನಂಬಿ ಬದುಕುವ ಮತ್ತು ಶೋಷಿಸಿ ಬದುಕುವ ಬ್ರಾಹ್ಮಣರು ಮುಸ್ಲಿಮರು ಹೊಸ ವಿಚಾರಗಳ ನವನಾಗರಿಕತೆಯ ಪ್ರಸಾರದ ಹೆಸರಿನಲ್ಲಿ ಮತಾಂತರ ಕಾರ್ಯದಲ್ಲಿ ನಿರತರಾಗಿರುವ ಪಾದ್ರಿಗಳು ಕಾಡಿನ ಚಿತ್ರಣ ಹೀಗೆ ಹಲವು ಹತ್ತು ರೀತಿಯಲ್ಲಿ ಮಲೆನಾಡಿನ ಬದುಕು ಅನಾವರಣಗೊಂಡಿದೆ.

ಪರಮರ್ಶನ ಗ್ರಂಥಗಳು

೧. ಮಲೆಗಳಲ್ಲಿ ಮದುಮಗಳು – ಕುವೆಂಪು


೨. ಕಾನೂರು ಹೆಗ್ಗಡತಿ – ಕುವೆಂಪು

೩. ಶ್ರೀ ಕುವೆಂಪು – ಜಿ.ಎಸ್. ಶಿವರುದ್ರಪ್ಪ

೪. ಕುವೆಂಪು ಕಾದಂಬರಿಗಳಲ್ಲಿ ವೈಚಾರಿಕತೆ – ಪ್ರೊ॥ ಡಿ. ಲಿಂಗಯ್ಯ

೫. ಸಹ್ಯಾದ್ರಿ – ಡಾ॥ ದೇ. ಜವರೇಗೌಡ

೬. ಕುವೆಂಪು ಕಾದಂಬರಿ ಎತಡು ಅಧ್ಯಯನಗಳು – ಟಿ.ಪಿ. ಅಶೋಕ್



ಸಪ್ತಸೂತ್ರಗಳು

೧. "ಮನುಷ್ಯಜಾತಿ ತಾನೊಂದೆ ವಲಂ" ಎಂಬುದು ನಿರುಪಾಧಿಕವಾಗಿ ಸ್ವೀಕರಿಸಬೇಕು.

೨. ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಅಂದರೆ ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರ, ಅಂತ್ಯಜ ಷಿಯಾ ಸುನ್ನಿ, ಕ್ಯಾಥೊಲಿಕ್, ಪ್ರಾಟೆಸ್ಟಂಟ್, ಸಿಖ್, ನಿರಂಕಾರಿ ಇತ್ಯಾದಿ ವಿಭಜನೆಯನ್ನು ನಿರ್ನಾಮ ಮಾಡಬೇಕು.

೩. ಎಲ್ಲಾ ದೇಶಗಳಲ್ಲಿ ಮತ್ತು ಎಲ್ಲಾ ಮತಗಳಲ್ಲಿರುವ ಜಾತಿ ಪದ್ಧತಿಯನ್ನು ಸಂಪೂರ್ಣವಾಗಿ ವಿನಾಶಗೊಳಿಸಬೇಕು.

೪. "ಮತ" ತೊಲಗಿ "ಅಧ್ಯಾತ್ಮ" ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು.

೫. ಮತ "ಮನುಜಮತ" ವಾಗಬೇಕು; ಪಥ "ವಿಶ್ವಪಥ" ವಾಗಬೇಕು; ಮನುಷ್ಯ "ವಿಶ್ವಮಾನವ" ನಾಗಬೇಕು.

೬. ಮತ ಗುಂಪುಕಟ್ಟುವ ವಿಷಯವಾಗಬಾರದು ಯಾರು ಯಾವ ಒಂದು ಮತಕ್ಕೂ ಸೇರದೆ, ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ "ತನ್ನ ಮತಕ್ಕೆ ಮಾತ್ರ ಸೇರಬೇಕು. ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ. ಯಾರೊಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪುಕಟ್ಟಿ ಜಗಳ ಹಚ್ಚುವಂತಾಗಬಾರದು."

೭. ಯಾವ ಒಂದು ಗ್ರಂಥವೂ "ಏಕೈಕ ಪರಮಪೂಜ್ಯ" ಧರ್ಮ ಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತನ್ನ "ದರ್ಶನ" ವನ್ನು ತಾನೇ ನಿರ್ಣಯಿಸಿ ಕಟ್ಟಿಕೊಳ್ಳಬೇಕು.